ಮಂಗಳವಾರ, ಡಿಸೆಂಬರ್ 21, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೇಕ್‌ನಲ್ಲಿ ಅಪ್ಪು!

ಬೆಂಗಳೂರಿನ ಸೇಂಟ್ ಜೋಸೆಫ್ ಶಾಲೆಯ ಮೈದಾನದಲ್ಲಿ ಸೋಮವಾರ ನಡೆದ ವಾರ್ಷಿಕ ಕೇಕ್ ಪ್ರದರ್ಶನದಲ್ಲಿ ಕಲಾವಿದರೊಬ್ಬರು ಕೇಕ್‌ನಲ್ಲಿ ಪುನೀತ್ ರಾಜಕುಮಾರ್ ಅವರ ಪುತ್ಥಳಿ ರಚಿಸಿ ಗೌರವ ಸಲ್ಲಿಸಿದರು



PARISHRAMA NEET ACADEMY

ಪರಿಶ್ರಮ ನೀಟ್ ಅಕಾಡೆಮಿ

ದಕ್ಷಿಣ ಭಾರತದ ವೈದ್ಯಕೀಯ ಪ್ರವೇಶ ಪರೀಕ್ಷೆಯ ಎಲ್ಲಾ ದಾಖಲೆಗಳು ಧೂಳೀಪಟ

ಒಂದು ವರ್ಷದ ನಿರಂತರ ಪ್ರಯತ್ನ, ಚದುರದ ಏಕಾಗ್ರತೆ, ಪ್ರತಿದಿನ 16 ತಾಸುಗಳ ಅಧ್ಯಯನ, ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳ ಬಳಕೆ ನಿಷಿದ್ಧ, ಒಂದು ವರ್ಷಗಳ ನಿರಂತರ ಪ್ರಯತ್ನದಿಂದ 240 ವಿದ್ಯಾರ್ಥಿಗಳಲ್ಲಿ 220 ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೀಟ್, ನಮ್ಮ ದಾಖಲೆಯನ್ನು ಮತ್ತೇ ನಾವೇ ಮುರಿಯಲಿದ್ದೇವೆ. ಇದು ನಮ್ಮ ಆತ್ಮವಿಶ್ವಾಸ, ನಂಬಿಕೆ ಹಾಗೂ ಪ್ರಯತ್ನದ ಮೇಲೆ ನಮಗಿರುವ ಭರವಸೆ.

Our Toppers of NEET 2021

680 NEET SCORE



JITHENDRA A G

ಪರಿಶ್ರಮ ನೀಟ್ ಅಕಾಡೆಮಿ ಎಂದರೆ ನಂಬಿಕೆ. ಸಾಮಾನ್ಯ ಕುಟುಂಬದಿಂದ ಬಂದ ನಾನು, ಇಂದು ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ರ್‍ಯಾಂಕ್ ಗಳಿಸಿ 680 ಅಂಕಗಳನ್ನು ಗಳಿಸಿದ್ದೇನೆ. ನನಗೆ AIMMSನಲ್ಲಿ ಸೀಟ್ ಲಭಿಸಲಿದೆ. ನನ್ನ ಯಶಸ್ಸಿಗೆ ಪರಿಶ್ರಮ ಮತ್ತು ಪ್ರದೀಪ್ ಈಶ್ವರ್ ಸರ್ ಅವರು ಕಾರಣ. ಪರಿಶ್ರಮ ನೀಟ್ ಅಕಾಡೆಮಿಗೆ ಸೇರಿದರೆ ವೈದ್ಯರಾಗುವುದು ಕನ್ಫರ್ಮ್.

665 NEET SCORE



LIKHITH KUMAR D R

ನಾನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದವನು. AIMMSನಲ್ಲಿ ಓದಲೇಬೇಕೆಂಬ ಆಸೆಯಿಂದ ಪರಿಶ್ರಮ ಸೇರಿದೆ. ಪ್ರತಿನಿತ್ಯ 15 ತಾಸುಗಳ ಅಧ್ಯಯನದಿಂದ ನನಗೆ ಈ ಯಶಸ್ಸು ಲಭಿಸಿದೆ. ಪರಿಶ್ರಮ ನೀಟ್ ಅಕಾಡೆಮಿ ಹಾಗೂ ಪ್ರದೀಪ್ ಸರ್ ಅವರಿಗೆ ಎಷ್ಟು ಧನ್ಯವಾದ ಹೇಳಿದರೂ ಕಡಿಮೆಯೇ. ಪರಿಶ್ರಮ ಎಂದರೆ ಭವಿಷ್ಯದ ವೈದ್ಯರ ವೇದಿಕೆ.

660 NEET SCORE



LIKHITH R

ನನ್ನ ತಂದೆ ಖಾಸಗಿ ಶಾಲೆಯಲ್ಲಿ ಶಿಕ್ಷಕರು. ಅವರು ನನ್ನನ್ನು ಯಾವಾಗಲೂ ನೀನು ರಾಷ್ಟ್ರಮಟ್ಟದ ವಿದ್ಯಾಸಂಸ್ಥೆಯಲ್ಲಿ ಓದಬೇಕೆಂದು ಪ್ರೇರೇಪಿಸುತ್ತಿದ್ದರು. ಅವರ ಆಸೆಯಂತೆ ನನಗೆ JIPMER ಅಥವಾ ಬೆಂಗಳೂರು BMC ಕಾಲೇಜಿನಲ್ಲಿ ಸೀಟು ಲಭಿಸುವ ಭರವಸೆ ಇದೆ. ಪರಿಶ್ರಮಕ್ಕೆ ಸೇರಿದ್ದೇ ನನ್ನ ಸೌಭಾಗ್ಯ. ನನಗೆ ಪರಿಶ್ರಮ ಕೇವಲ ವಿದ್ಯಾಸಂಸ್ಥೆಯಲ್ಲ, ಅದು ನನ್ನ ದೇವಾಲಯ.

635 NEET SCORE



SAI YASHWANTH R

ನಾನು ಕೋಲಾರದವನು. ನನ್ನ ತಂದೆ ವಕೀಲರು. ರಾಷ್ಟ್ರಮಟ್ಟದ ವೈದ್ಯಕೀಯ ಕಾಲೇಜಿನಲ್ಲಿ ಓದುವುದನ್ನು ನೋಡಬೇಕೆಂಬುದು ಅವರ ಬಯಕೆ. ಇಂದು ಅವರ ಕನಸು ನನಸಾಗಿದೆ. ಪರಿಶ್ರಮದ ಮೇಲೆ ನಂಬಿಕೆ ಇಟ್ಟು ನೋಡಿ. ಫಲಿತಾಂಶ ನಿಮಗೇ ತಿಳಿಯುತ್ತದೆ. ವೈದ್ಯರಾಗುವುದು ಕನ್ಫರ್ಮ್. ಆಯ್ಕೆ ನಿಮಗೆ ಬಿಟ್ಟಿದ್ದು.

630 NEET SCORE



PUNITH GOWDA R

ಪರಿಶ್ರಮ ನೀಟ್ ಅಕಾಡೆಮಿಯು ನನ್ನ NEET ತಯಾರಿಗಾಗಿ ಉತ್ತಮ ವೇದಿಕೆಯನ್ನು ನೀಡಿತ್ತು. ಗುಣಮಟ್ಟದ ಸೌಲಭ್ಯಗಳನ್ನು ಸಹ ಒದಗಿಸಿತ್ತು. ಪರಿಶ್ರಮ ಅಕಾಡೆಮಿ ತಂಡದ ಪ್ರತಿಯೊಬ್ಬ ಸದಸ್ಯರಿಗೂ ಧನ್ಯವಾದ ಹೇಳಲು ಬಯಸುತ್ತೇನೆ.

624 NEET SCORE



DESHI GOWDA A S

ನಾನು ಬಡ ಕುಟುಂಬದಿಂದ ಬಂದವನು. ನನ್ನ ಬೆನ್ನೆಲುಬಾಗಿ ನಿಂತು ನನ್ನ ಈ ಯಶಸ್ಸಿಗೆ ಕಾರಣರಾದವರು ಪ್ರದೀಪ್ ಈಶ್ವರ್ ಸರ್ ಮತ್ತು ಪರಿಶ್ರಮ. ವೈದ್ಯರಾಗಬೇಕೆಂದರೆ ಒಂದೇ ಆಯ್ಕೆ ಅದು ಪರಿಶ್ರಮ. ಪರಿಶ್ರಮದ ಮಾರ್ಗವೇ ಯಶಸ್ಸಿಗೆ ರಹದಾರಿ.



Why Parishrama?

With its core being result oriented training, Parishrama NEET Academy in a short span of time has grown from a small institute with a handful of students to becoming one of the leading NEET training centers of Karnataka.

We are very proud of the fact that 220 students out of 240 who we trained in the current batch have joined prestigious colleges across India to pursue their dream of becoming a doctor. AIIMS, JIPMER, BMC are few of the top colleges where our students are studying now.

Our meticulously planned curriculum, designed by Mr. Pradeep Eshwar himself, is woven around analysis and in-depth study which has given us the results that we are so proud of today. Not only academics, we believe, the nutrition value in their food intake and good rest plays an important role in deciding the performance level of the student when they are appearing for a highly demanding and competitive exam to secure a medical seat.

We mean what we say, so Parishrama invites you to come personally and take a walk through our campus and check our facilities and enroll the student with us only after you are sure that we will take care of him/her as our own, because we truly will!!

48 DOCTORS OUT OF 60 STUDENTS IN 2019

88 DOCTORS OUT OF 130 STUDENTS IN 2020

220 DOCTORS OUT OF 240 STUDENTS IN 2021

Course Details

NEET Long Term Program:
A year long course which emphasizes on basics to achieve results. The thought that a good foundation is very important to understand concepts is what fuels this program. We ensure the student is guided in ways which not only prepares him/her for NEET exams but also to gain a 'I can do it' mentality which is very crucial in their life's journey.

NEET Crash Course:
A short 45 days or 2 months (depending on the exam dates) course which is a bundle of good planning and execution from our brilliant team of faculty members. Squeezing a year long teaching into a short course is not easy, but time and again our faculty have aced this, and the achievements of our crash course students is testimony.

Postal Course:
We understand the difficulty of students living in remote areas and how hard it is for them to travel. Hence, we have come up with our postal course which helps the students with timely inputs for their preparation and the set of question papers which is sent from time to time helps them get a feel of the exam.

POSTAL COURSE

- One point contact for all doubt clearing sessions
- Special career guidance sessions
- Constant access to motivational and guest faculty sessions
- Monthly test series
- Constant guidance throughout the duration of the course

HIGHLIGHTS: 1 year Long Term Program

First NEET training institute to have R&D team to analyse each student's performance and provide feedback

- Separate hostel for Boys and Girls
- Crystal clear teaching with one on one doubt clearing sessions
- Easily accessible faculty
- Focus on Basics, Emphasis on Results
- Highly sanitized classrooms
- Determined and dedicated team
- Meticulously designed study material
- Daily tests and weekly cumulative tests

ADMISSIONS OPEN FOR 2021-22

PARISHRAMA NEET ACADEMY

ಪರಿಶ್ರಮ ನೀಟ್ ಅಕಾಡೆಮಿ
BANGALORE | DELHI

Head Office: PARISHRAMA HUB
Omkar Hills Road, Srinivasapura, Dr. Vishnuvardhan Road, Towards Uttarahalli Main Road, Bangalore - 560098

E-mail: info@parishramaneetacademy.com
Website: www.parishramaneetacademy.com

080-45912222

ಸಚಿವ ಬೈರತಿ ಬಸವರಾಜ ರಾಜೀನಾಮೆಗೆ ಪಟ್ಟು • ಕಾಂಗ್ರೆಸ್ ಸದಸ್ಯರಿಂದ ಧರಣಿ ಸಭಾತ್ಯಾಗ

ಭೂ ಅಕ್ರಮ: ಉಭಯ ಸದನಗಳಲ್ಲಿ ಕೋಲಾಹಲ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ನೂರಾರು ಕೋಟಿ ಮೊತ್ತದ ಭೂ ಅಕ್ರಮದಲ್ಲಿ ಭಾಗಿಯಾಗಿರುವ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಕಾಂಗ್ರೆಸ್ ಸದಸ್ಯರು ವಿಧಾನಮಂಡಲದ ಉಭಯ ಸದನಗಳಲ್ಲಿ ಸೋಮವಾರ ಪಟ್ಟು ಹಿಡಿದಿದ್ದರಿಂದ ಕೋಲಾಹಲ ಸೃಷ್ಟಿಯಾಯಿತು.

ಇತ್ತೀಚೆಗೆ ನಿಧನರಾದ ಆರ್.ಎಲ್.ಜಾಲಪ್ಪ ಅವರಿಗೆ ವಿಧಾನಸಭೆಯಲ್ಲಿ ಸಂತಾಪ ಸೂಚಿಸಿದ ಬಳಿಕ ಕಾಂಗ್ರೆಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿದರು.

ಪ್ರಶ್ನೋತ್ತರ ಮುಗಿದ ಬಳಿಕ ಚರ್ಚೆಗೆ ಅವಕಾಶ ಮಾಡಿಕೊಡುವೆ. ಈಗ ಧರಣಿ ಕೈ ಬಿಡಿ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮನವಿ ಮಾಡಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಭೂ ಅಕ್ರಮ ನಡೆಸಿರುವ ಸಚಿವ ಬೈರತಿ ಬಸವರಾಜ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲೇಬೇಕು' ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಪ್ರಶ್ನೋತ್ತರ ನಡೆದ ಬಳಿಕ ಉಳಿದ ಕಲಾಪಗಳನ್ನು ನಡೆಸಬೇಕು ಎಂದು ತೀರ್ಮಾನ ಆಗಿದೆ. ಈಗ ಕಾಂಗ್ರೆಸ್‌ನವರು ಧರಣಿ ನಡೆಸುವುದು ಸರಿಯಲ್ಲ' ಎಂದರು. ಅದಕ್ಕೆ ಕಾಂಗ್ರೆಸ್ ಸದಸ್ಯರು ಒಪ್ಪಲಿಲ್ಲ. ಕಾಂಗ್ರೆಸ್ ಸದಸ್ಯರು ಘೋಷಣೆಗಳನ್ನು ಕೂಗಿದರು. ಇದರ ನಡುವೆಯೇ, ಸಭಾಧ್ಯಕ್ಷರು ಪ್ರಶ್ನೋತ್ತರ ಕಲಾಪ ನಡೆಸಿದರು. 'ಪ್ರವಾಹ ಅತಿವೃಷ್ಟಿಯಿಂದಾಗಿ ಜನರ ಜೇಬು ಖಾಲಿ ಆಗಿದೆ. ಜನರ ಹಣ ಲೂಟಿ ಮಾಡಿ ಬಿಜೆಪಿ ಶಾಸಕರ ಜೇಬು ಭರ್ತಿ ಆಗಿದೆ' ಎಂದು ಫಲಕ ಪ್ರದರ್ಶಿಸಿದರು.

ಇದರ ನಡುವೆ, ಎಂಇಎಸ್ ದೌರ್ಜನ್ಯ ಹಾಗೂ ಕನ್ನಡ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ಜೆಡಿಎಸ್ ಸದಸ್ಯರು ಪಟ್ಟು ಹಿಡಿದು ಘೋಷಣೆಗಳನ್ನು ಕೂಗಿದರು. ಸದನದಲ್ಲಿ ಕೋಲಾಹಲ ಜಾಸ್ತಿಯಾದ ಕಾರಣ ಕಲಾಪವನ್ನು ಮಧ್ಯಾಹ್ನ 2.30ಕ್ಕೆ ಸಭಾಧ್ಯಕ್ಷರು ಮುಂದೂಡಿದರು. ಮಧ್ಯಾಹ್ನ ಕಲಾಪ ಆರಂಭವಾದ ಬಳಿಕವೂ ಕಾಂಗ್ರೆಸ್ ಸದಸ್ಯರು ಧರಣಿ ಮುಂದುವರಿಸಿದರು. 'ಸಚಿವರ ರಾಜೀನಾಮೆ ವಿಚಾರದಲ್ಲಿ ಸರ್ಕಾರ ಭಂಡತನ ತೋರುತ್ತಿದೆ. ಈ ಧೋರಣೆಯನ್ನು ಖಂಡಿಸಿ ಸಭಾತ್ಯಾಗ ನಡೆಸುತ್ತೇವೆ' ಎಂದು ಸಿದ್ದರಾಮಯ್ಯ ಪ್ರಕಟಿಸಿದರು.

ಪರಿಷತ್‌ನಲ್ಲೂ ಕೋಲಾಹಲ: ಜಾಲಪ್ಪ ಅವರಿಗೆ ಸಂತಾಪ ಸೂಚಿಸಿದ ಬಳಿಕ, ಬೈರತಿ ಬಸವರಾಜ್ ರಾಜೀನಾಮೆಗೆ ಆಗ್ರಹಿಸಿ ವಿಧಾನ ಪರಿಷತ್‌ನಲ್ಲೂ ಕಾಂಗ್ರೆಸ್ ಸದಸ್ಯರು ಧರಣಿ ಆರಂಭಿಸಿದರು.

ಪ್ರಕರಣದ ಕುರಿತು ಚರ್ಚೆಗೆ ಅವಕಾಶ ನೀಡುವಂತೆ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಕೆ. ಪ್ರತಾಪಚಂದ್ರ ಶೆಟ್ಟಿ, ಬಿ.ಕೆ. ಹರಿಪ್ರಸಾದ್, ಎಂ. ನಾರಾಯಣ ಸ್ವಾಮಿ ಆಗ್ರಹಿಸಿದರು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿನ ಪ್ರಕರಣವೊಂದನ್ನು ಬಿಜೆಪಿ ಸದಸ್ಯರು ಪ್ರಸ್ತಾಪಿಸಿದ್ದು ಕೋಲಾಹಲಕ್ಕೆ ಕಾರಣವಾಯಿತು.

ಹತ್ತು ನಿಮಿಷ ಕಲಾಪ ಮುಂದೂಡಿದ ಸಭಾಪತಿ, ಸಂಧಾನಕ್ಕೆ ಯತ್ನಿಸಿದರು. ಆದರೆ, ಪ್ರಯತ್ನ ವಿಫಲವಾಯಿತು. ಗದ್ದಲದ ನಡುವೆಯೇ ಪ್ರಶ್ನೋತ್ತರ ಕಲಾಪ ನಡೆಯಿತು. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದ ಕಾರಣದಿಂದ ಮಧ್ಯಾಹ್ನ 3 ಗಂಟೆಗೆ ಸಭಾಪತಿ ಕಲಾಪ ಮುಂದೂಡಿದರು.

ಮಧ್ಯಾಹ್ನ ಕಲಾಪ ಆರಂಭವಾದಾಗಲೂ ಕಾಂಗ್ರೆಸ್ ಸದಸ್ಯರು ಧರಣಿ ಮುಂದುವರಿಸಿದರು. ವಿಷಯದ ಕುರಿತು ಚರ್ಚೆಗೆ ಅವಕಾಶ ನೀಡುವಂತೆ ಸಚಿವರ ರಾಜೀನಾಮೆ ಪಡೆಯಬೇಕೆಂಬ ಬೇಡಿಕೆಗೆ ಸರ್ಕಾರ ಮಣಿಯಲಿಲ್ಲ. ಆಡಳಿತ ಪಕ್ಷದ ನಿಲುವನ್ನು ಖಂಡಿಸಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.



ವಿಧಾನ ಮಂಡಲದಲ್ಲಿ

'ಭಂಡತನಕ್ಕೆ ಬಿದ್ದ ಸರ್ಕಾರ'

'ಸಚಿವ ಬೈರತಿ ಬಸವರಾಜ ರಾಜೀನಾಮೆ ವಿಷಯವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು ಎಂದಿದ್ದೆವು. ನಾಚಿಕೆಗೆಟ್ಟ ಸರ್ಕಾರ ಭಂಡತನಕ್ಕೆ ಬಿದ್ದು ರಾಜೀನಾಮೆ ಪಡೆಯುತ್ತಿಲ್ಲ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹರಿಹಾಯ್ದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕನ್ನಡ ನಾಡು ಎದುರಿಸುತ್ತಿರುವ ಹಲವು ಸಮಸ್ಯೆಗಳು, ಬೆಳಗಾವಿಯಲ್ಲಿ ರಾಯಣ್ಣ ಪ್ರತಿಮೆಗೆ ಅವಮಾನ, ಮತಾಂತರ ಮಸೂದೆ, ಶೇ 40ರಷ್ಟು ಲಂಚ, ಬಿಟ್ ಕಾಯಿನ್ ಹಗರಣ ಈ ಎಲ್ಲ ವಿಷಯಗಳನ್ನು ಚರ್ಚಿಸಬೇಕಿದೆ. ಅದಕ್ಕಾಗಿ ಸಭಾತ್ಯಾಗ ಮಾಡಿ ಪ್ರತಿಭಟಿಸಿದ್ದೇವೆ' ಎಂದರು.

'ಬೈರತಿ ಬಸವರಾಜ, ಆರ್. ಶಂಕರ್ ಅವರ ವಿರುದ್ಧದ ಹೋರಾಟವನ್ನು ಜನತಾ ನ್ಯಾಯಾಲಯದ ಮುಂದೆ ತೆಗೆದುಕೊಂಡು ಹೋಗುತ್ತೇವೆ. ಅದನ್ನು ಪಕ್ಷ ನಿರ್ಧರಿಸಲಿದೆ' ಎಂದು ಹೇಳಿದರು.

'ಮತಾಂತರ ನಿಷೇಧ ಮಸೂದೆ ಮಂಡನೆ ಮಾಡುವಾಗಲೇ ವಿರೋಧ ಮಾಡುತ್ತೇವೆ. ಆ ಕಾರಣಕ್ಕಾಗಿಯೂ ಬೈರತಿ ರಾಜೀನಾಮೆ ವಿಚಾರದ ಬೇಡಿಕೆಯನ್ನು ಸದ್ಯಕ್ಕೆ ಕೈಬಿಟ್ಟಿದ್ದೇವೆ' ಎಂದರು.

ಅನುದಾನಿತ ಶಾಲೆ: ಖಾಲಿ ಹುದ್ದೆ ಭರ್ತಿಗೆ ಆಗ್ರಹ

ಬೆಳಗಾವಿ (ಸುವರ್ಣ ವಿಧಾನಸೌಧ): ರಾಜ್ಯದ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ 7,045 ಹುದ್ದೆಗಳನ್ನು ಭರ್ತಿ ಮಾಡಲು ತ್ವರಿತವಾಗಿ ಅನುಮತಿ ನೀಡುವಂತೆ ವಿಧಾನ ಪರಿಷತ್‌ನ ಹಲವು ಸದಸ್ಯರು ಸರ್ಕಾರವನ್ನು ಸೋಮವಾರ ಆಗ್ರಹಿಸಿದರು.

ಬಿಜೆಪಿಯ ಡಾ.ವೈ.ಎ. ನಾರಾಯಣಸ್ವಾಮಿ ಪ್ರಶ್ನೆಗೆ ಉತ್ತರಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, 'ಇಲಾಖೆಯ ಬೆಂಗಳೂರು ಆಯುಕ್ತಾಲಯದ ವ್ಯಾಪ್ತಿಯಲ್ಲಿ 4,239, ಧಾರವಾಡದ ಆಯುಕ್ತಾಲಯದ ವ್ಯಾಪ್ತಿಯಲ್ಲಿ 1,843 ಮತ್ತು ಕಲಬುರಗಿ ಆಯುಕ್ತಾಲಯದ ವ್ಯಾಪ್ತಿಯಲ್ಲಿ 963 ಹುದ್ದೆಗಳು ಖಾಲಿ ಇವೆ. ಈ ಪೈಕಿ 2,915 ಹುದ್ದೆಗಳ ಭರ್ತಿಗೆ ಒಪ್ಪಿಗೆ ನೀಡಲಾಗಿದೆ' ಎಂದರು. ನಾರಾಯಣಸ್ವಾಮಿ ಮಾತನಾಡಿ, 'ಖಾಲಿ ಇರುವ ಹುದ್ದೆಗಳಲ್ಲಿ ಅರ್ಧದಷ್ಟನ್ನೂ ಭರ್ತಿ ಮಾಡಲು ಅನುಮತಿ ನೀಡಿಲ್ಲ. 4,130 ಹುದ್ದೆಗಳ ಭರ್ತಿಗೆ ಇನ್ನೂ ಅನುಮತಿ ದೊರೆಯಬೇಕಿದೆ. ಒಪ್ಪಿಗೆ ನೀಡಿದ ಹುದ್ದೆಗಳ ಪೈಕಿ 234 ಹುದ್ದೆಗಳಿಗೆ ಸಂಬಂಧಿಸಿದಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸಿಲ್ಲ ಎಂಬ ಕಾರಣ ನೀಡಿ ಪ್ರಸ್ತಾವ ತಡೆ ಹಿಡಿಯಲಾಗಿದೆ. ಇದು ನ್ಯಾಯಸಮ್ಮತವಲ್ಲ. ಈ ವಿಚಾರದಲ್ಲಿ ಒಂದು ಬಾರಿಗೆ ನಿಯಮ ಸಡಿಲಿಸಿ ಅನುಮೋದನೆ ನೀಡಬೇಕು' ಎಂದು ಒತ್ತಾಯಿಸಿದರು. ಬಿಜೆಪಿಯ ಪುಟ್ಟಣ್ಣ, ಮುನಿರಾಜು ಗೌಡ, ಅರುಣ್ ಶಹಾಪುರ, ಶಶೀಲ್ ಜಿ. ನಮೋಶಿ, ಈ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿದರು.

ಬೊಮ್ಮಾಯಿ ನೇತೃತ್ವದಲ್ಲೇ ಚುನಾವಣೆ: ಸಚಿವರ ನುಡಿ

ಬೆಳಗಾವಿ (ಸುವರ್ಣ ವಿಧಾನಸೌಧ): ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲೇ ಚುನಾವಣೆ ಎದುರಿಸುತ್ತೇವೆ. ನಾಯಕತ್ವ ಬದಲಾವಣೆಯ ಪ್ರಶ್ನೆಯೇ ಇಲ್ಲ ಎಂದು ಅವರ ಸಚಿವ ಸಂಪುಟದ ಸದಸ್ಯರು ಪ್ರತಿಕ್ರಿಯಿಸಿದರು.

'ಸ್ಥಾನಮಾನ, ಅಧಿಕಾರ ಪದನಾಮ ಶಾಶ್ವತವಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದ ಮಾತಿಗೆ ಹಲವು ರೀತಿಯ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ.

'ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಬದಲಾವಣೆ ಇಲ್ಲ ಎಂದು ವರಿಷ್ಠರು ಸ್ಪಷ್ಟವಾಗಿ ಹೇಳಿದ್ದಾರೆ. ನಾವೆಲ್ಲರೂ ಬೊಮ್ಮಾಯಿ ಜೊತೆ ಇದ್ದೇವೆ. ಇದೆಲ್ಲ ಕೇವಲ ಕಾಲ್ಪನಿಕ. ಅವರ ಕ್ಷೇತ್ರದಲ್ಲಿ ಭಾವನಾತ್ಮಕವಾಗಿ ಮಾತನಾಡಿದ್ದಾರೆ ಅಷ್ಟೆ' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಸಚಿವ ಕೋಟ ಶ್ರೀನಿವಾಸ್ ಪೂಜಾರಿ ಪ್ರತಿಕ್ರಿಯಿಸಿ, 'ಮುಖ್ಯಮಂತ್ರಿಯಾಗಿ ಬೊಮ್ಮಾಯಿ ಮುಂದುವರಿಯಲಿದ್ದಾರೆ. ಅವರ ನಾಯಕತ್ವದಲ್ಲಿ ಎಲ್ಲವೂ ನಡೆಯಲಿದೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ' ಎಂದರು.

ಅದು ಸಹಜವಾಗಿ ಬಂದಿರುವ ಮಾತು. ಬದಲಾವಣೆ ಎನ್ನುವುದು ಸಹಜ. ಪ್ರಕ್ರಿಯೆಗಳು ನಡೆಯುತ್ತಲೇ ಇರುತ್ತವೆ. ಪಕ್ಷ ನನಗೆ ಮುಖ್ಯಮಂತ್ರಿ ಸ್ಥಾನ ಕೊಟ್ಟರೆ ಮಾಡಿ ತೋರಿಸುತ್ತೇನೆ. ಪ್ರಾಮಾಣಿಕವಾಗಿ ನಿರ್ಣಯ ತೆಗೆದುಕೊಳ್ಳುವವರು ಮುಖ್ಯಮಂತ್ರಿ ಆಗಬೇಕು. ಬಾಲಂಗೋಚಿಗಳಿಗೆ ಕೊಟ್ಟರೆ ಕಷ್ಟ' ಎಂದರು.

ಹೇಳಿಕೆಯಲ್ಲಿ ತಪ್ಪಿಲ್ಲ: 'ಬೊಮ್ಮಾಯಿ ತಮ್ಮ ಕ್ಷೇತ್ರದಲ್ಲಿ ಭಾವನಾತ್ಮಕವಾಗಿ ಮಾತನಾಡಿರುವುದು ಸಹಜ. ನಾನು ಕೂಡ ನನ್ನ ಕ್ಷೇತ್ರದಲ್ಲಿ ಸಾಮಾನ್ಯ ಕಾರ್ಯಕರ್ತ. ನಮ್ಮ ಜನರ ಎದುರು ನಮ್ಮ ಅಧಿಕಾರ ತೋರಲು ಆಗುವುದಿಲ್ಲ. ಹೀಗಾಗಿ, ಅವರ ಹೇಳಿಕೆಯಲ್ಲಿ ತಪ್ಪಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಸಿ.ಎಂ ಇಬ್ರಾಹಿಂ, 'ಅದು ಭಾವನಾತ್ಮಕ ಕಣ್ಣೀರು. ಮುಂದೆ ಜಾಗ ಖಾಲಿ ಮಾಡುವ ಸೂಚನೆ. ಅಧಿಕಾರ ಶಾಶ್ವತವಲ್ಲ ಎಂದು ಹೇಳುತ್ತಾರೆ. ಜೀವನವೇ ಶಾಶ್ವತವಲ್ಲ, ಕುರ್ಚಿ ಯಾವಾಗ ಶಾಶ್ವತ? ಅದನ್ನು ನೋಡಿ ಬಸವ ಕೃಪಾದವರು ಬಸವಕೃಪಾದಲ್ಲೇ ಇರಿ. ಕೇಶವ ಕೃಪ ನಂಬಿಹೋದರೆ ಅಲ್ಲೂ ಇಲ್ಲ ಇಲ್ಲೂ ಇಲ್ಲ' ಎಂದರು.

ಕಸಾಪಕ್ಕೆ 3 ವರ್ಷಗಳಲ್ಲಿ ₹ 17 ಕೋಟಿ

ಬೆಳಗಾವಿ (ಸುವರ್ಣ ವಿಧಾನಸೌಧ): ಕನ್ನಡ ಸಾಹಿತ್ಯ ಪರಿಷತ್ತಿಗೆ 2018–19ರಿಂದ ಮೂರು ವರ್ಷಗಳಲ್ಲಿ ₹ 17 ಕೋಟಿ ಅನುದಾನ ನೀಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಗೋವಿಂದರಾಜು ಪ್ರಶ್ನೆಗೆ ಸೋಮವಾರ ಉತ್ತರಿಸಿದ ಅವರು, '2018–19ರಲ್ಲಿ ಸಾಹಿತ್ಯ ಪರಿಷತ್‌ಗೆ ₹ 7 ಕೋಟಿ ಅನುದಾನ ನೀಡಲಾಗಿತ್ತು. 2019–20 ಮತ್ತು 2020–21ರಲ್ಲಿ ತಲಾ ₹ 5 ಕೋಟಿ ಅನುದಾನ ನೀಡಲಾಗಿದೆ' ಎಂದರು.

ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ಗೋವಿಂದರಾಜು ಆಗ್ರಹಿಸಿದರು. ಪರಿಷತ್ತಿಗೆ ವಿಶೇಷ ಅನುದಾನ ನೀಡುವ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದರು.

ತಾಕತ್ ಇದ್ದರೆ ಬಂಧಿಸಲಿ- ಡಿಕೆಶಿ

ಬೆಳಗಾವಿ (ಸುವರ್ಣ ವಿಧಾಸೌಧ): 'ತಾಕತ್ ಇದ್ದರೆ ಅವನು ನನ್ನನ್ನು ಬಂಧಿಸಲಿ' ಎಂದು ಶಾಸಕ ಸಿ.ಟಿ. ರವಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸವಲು ಹಾಕಿದರು. 'ಬೆಂಗಳೂರು, ಬೆಳಗಾವಿ ಘಟನೆಗಳ ನಿರ್ಮಾಪಕ ಡಿ.ಕೆ. ಶಿವಕುಮಾರ್' ಎಂಬ ಸಿ.ಟಿ. ರವಿ ಹೇಳಿಕೆಗೆ ಖಾರವಾಗಿ ಪ್ರತಿಕ್ರಿಯಿಸಿದ ಅವರು, 'ನನ್ನನ್ನು ಬಂಧಿಸುವಂತೆ ಹೇಳಿ ಅವನಿಗೆ. ಅವನು ನನ್ನನ್ನು ಬಂಧಿಸಲಿ' ಎಂದರು. 'ಈ ಎಲ್ಲ ಗಲಾಟೆಗಳ ಹಿಂದೆ ಬಿಜೆಪಿ ಇದೆ ಎಂದು ನಾನು ಹೇಳಬೇಕಾಗುತ್ತದೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿರುಗೇಟು ನೀಡಿದರು.

ನಂದಿನಿ ಹೆಸರಿನಲ್ಲಿ ನಕಲಿ ತುಪ್ಪ: ಆಸ್ತಿ ಮುಟ್ಟುಗೋಲಿಗೆ ಸೂಚನೆ

ಬೆಳಗಾವಿ(ಸುವರ್ಣ ವಿಧಾನಸೌಧ): ನಂದಿನಿ ಹೆಸರಿನಲ್ಲಿ ನಕಲಿ ತುಪ್ಪ ತಯಾರಿಸಿ ಮಾರಾಟ ಮಾಡುತ್ತಿದ್ದವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ರುಚಿ, ಪರಿಶುದ್ಧತೆಯ ಮೂಲಕ ನಂದಿನಿ ತುಪ್ಪ ಸಾಕಷ್ಟು ಪ್ರಸಿದ್ಧಿ ಪಡೆದಿದೆ. ನಿತ್ಯ ನೂರು ಟನ್‌ಗೂ ಹೆಚ್ಚು ತುಪ್ಪ ತಯಾರಿ ಮಾಡಲಾಗುತ್ತದೆ. ತಿರುಪತಿ, ಅಯೋಧ್ಯೆಗೆ ನಂದಿನಿ ತುಪ್ಪ ಕಳುಹಿಸಲಾಗುತ್ತಿದೆ. ಸೇನೆಗೂ ಸಹ ನಂದಿನಿ ತುಪ್ಪ ಪೂರೈಸಲಾಗುತ್ತಿದೆ. ಇಂತಹ ಶ್ರೇಷ್ಠ ದರ್ಜೆಯ ನಂದಿನಿ ತುಪ್ಪದ ಹೆಸರಿನಲ್ಲಿ ನಕಲಿ ತುಪ್ಪ ತಯಾರಿಸಿದರೆ ಸಾರ್ವಜನಿಕರು ಕೆಎಂಎಫ್ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದರು.

ಸುದ್ದಿ 2 ನಿಮಿಷ

ಜುಲೈಗೆ ವೇತನ ಆಯೋಗ ರಚನೆ: ಸರ್ಕಾರಿ ನೌಕರರ ಸಂಘ ಸುಳಿವು

ಶಿವಮೊಗ್ಗ: ಜುಲೈ 2022ಕ್ಕೆ ಏಳನೇ ವೇತನ ಆಯೋಗ ರಚನೆಯಾಗಲಿದ್ದು, ರಾಜ್ಯ ಸರ್ಕಾರಿ ನೌಕರರ ವೇತನ ಕನಿಷ್ಠ ₹ 10 ಸಾವಿರದಿಂದ ₹ 45 ಸಾವಿರದವರೆಗೆ ಹೆಚ್ಚಳವಾಗಲಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಹೇಳಿದರು.

ನಗರದಲ್ಲಿ ಅವರು ಸೋಮವಾರ ಸುದ್ದಿಗಾರರ ಜತೆ ಮಾತನಾಡಿದರು.



ಫೆಬ್ರುವರಿ ಬಜೆಟ್ ವೇಳೆಗೆ ವೇತನ ಆಯೋಗ ರಚನೆ ಕುರಿತು ಸರ್ಕಾರ ಘೋಷಣೆ ಮಾಡಲಿದೆ. 'ಡಿ' ದರ್ಜೆ ನೌಕರರೂ ಸೇರಿ ಎಲ್ಲ ಸರ್ಕಾರಿ ಉದ್ಯೋಗಿಗಳಿಗೂ ವೇತನ ಆಯೋಗದ ಲಾಭ ದೊರೆಯಲಿದೆ ಎಂದರು.

ರಾಜ್ಯ ಸರ್ಕಾರಿ ನೌಕರರಿಗೂ ಕೇಂದ್ರ ನೌಕರರ ಸಮಾನ ವೇತನ ಮತ್ತು ಭತ್ಯೆಗಳನ್ನು ಜಾರಿಗೊಳಿಸುವುದು, ರಾಜ್ಯದಲ್ಲಿ ಖಾಲಿ ಇರುವ 2.60 ಲಕ್ಷ ಹುದ್ದೆಗಳ ಭರ್ತಿ, ಶಿಕ್ಷಕರ ಸಮಸ್ಯೆ ಮತ್ತಿತರ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಎಲ್ಲ ಶಾಸಕರು, ಸಂಸದರಿಗೆ ಮನವಿ ಸಲ್ಲಿಸಲಾಗುವುದು ಎಂದು ವಿವರ ನೀಡಿದರು.

ಶಿವಾಜಿ ಪ್ರತಿಮೆಗೆ ಮಸಿ ಪ್ರಕರಣ: ಲೋಕಸಭೆಯಲ್ಲಿ ಶಿವಸೇನೆ ಪ್ರತಿಭಟನೆ

ನವದೆಹಲಿ: ಬೆಂಗಳೂರಿನಲ್ಲಿ ನಡೆದಿದ್ದ ಶಿವಾಜಿ ಪ್ರತಿಮೆಗೆ ಮಸಿ ಬಳಿದಿದ್ದ ಪ್ರಕರಣವನ್ನು ಖಂಡಿಸಿ ಸೋಮವಾರ ಲೋಕಸಭೆಯಲ್ಲಿ ಶಿವಸೇನೆ ಮತ್ತು ಮಹಾರಾಷ್ಟ್ರದ ಇತರೆ ಸಂಸದರು ಪ್ರತಿಭಟಿಸಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜೀನಾಮೆಗೆ ಆಗ್ರಹಿಸಿದರು.

ಕಲಾಪ ಆರಂಭವಾಗುತ್ತಿದ್ದಂತೆಯೇ ಸಭಾಧ್ಯಕ್ಷರ ಪೀಠದ ಎದುರಿನ ಅಂಗಳಕ್ಕೆ ಧಾವಿಸಿದ ಸಂಸದರು, ಮಸಿ ಬಳಿದಿದ್ದ ಪ್ರಕರಣವನ್ನು ಖಂಡಿಸಿ ಘೋಷಣೆ ಕೂಗಿದರು. ಮಹಾರಾಷ್ಟ್ರ ಸರ್ಕಾರ ಕೂಡಾ ಈ ಘಟನೆಯನ್ನು ಖಂಡಿಸಿ ಹೇಳಿಕೆ ನೀಡಿತ್ತು. ಅರವಿಂದ ಸಾವಂತ್ ಮತ್ತು ಶಿವಸೇನೆಯ ಇತರೆ ಸದಸ್ಯರು ಲೋಕಸಭೆಯಲ್ಲಿ ಪ್ರತಿಭಟನೆ ನಡೆಸಿದ್ದು, ಬೊಮ್ಮಾಯಿ ರಾಜೀನಾಮೆಗೆ ಆಗ್ರಹಪಡಿಸುವ ಭಿತ್ತಿಪತ್ರ ಪ್ರದರ್ಶಿಸಿದರು.

ಚಿಲುಮೆ ಮಠದ ಶ್ರೀ ಶಂಕಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): ತಾಲ್ಲೂಕಿನ ಸೋಲೂರಿನ ಚಿಲುಮೆ ಮಠದ ಬಸವಲಿಂಗ ಸ್ವಾಮೀಜಿ (62) ಅವರ ಶವವು ಸೋಮವಾರ ಬೆಳಿಗ್ಗೆ ಮಠದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಮುಂಜಾನೆ ಎಂದಿನಂತೆ ಧನುರ್ಮಾಸದ ಪೂಜೆ ಹಾಗೂ ಲಿಂಗಪೂಜೆಗೆ ಸಿದ್ಧತೆ ನಡೆಸಿದ್ದ ಶ್ರೀಗಳು ಬಳಿಕ ಮಠದ ಕೊಠಡಿಯೊಂದರ ಕಿಟಕಿ ಬಳಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಶವದ ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ಕುದೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಬಸವಲಿಂಗ ಸ್ವಾಮೀಜಿ

ಶ್ರೀಗಳು ಭಕ್ತರೊಬ್ಬರ ಮನೆಯಲ್ಲಿ ಪೂಜೆ ಮುಗಿಸಿ ಭಾನುವಾರ ರಾತ್ರಿ ಮಠಕ್ಕೆ ವಾಪಸ್ ಆಗಿದ್ದರು. ನಂತರದಲ್ಲಿ ಏಕಾಏಕಿ ಸಾವನ್ನಪ್ಪಿರುವುದು ಭಕ್ತರಲ್ಲಿ ದಿಗ್ಭ್ರಮೆ ಮೂಡಿಸಿದೆ. ಶ್ರೀಗಳು ಕೆಲವು ಸಮಯದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಈ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದೆ.

ಎಂಇಎಸ್ ನಿಷೇಧಕ್ಕೆ ಶಿವರಾಮೇಗೌಡ ಬಣ ಆಗ್ರಹ

ಶಿವಸೇನೆ ಧ್ವಜ ಸುಟ್ಟು ಕರವೇ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಇಎಸ್ ಕೃತ್ಯವನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆಯ (ಶಿವರಾಮೇಗೌಡ ಬಣ) ಕಾರ್ಯಕರ್ತರು ಶಿವಸೇನೆ ಧ್ವಜಕ್ಕೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಸಂಗೊಳ್ಳಿ ರಾಯಣ್ಣ ಪ್ರತಿಮೆ ಬಳಿ ಸೇರಿದ್ದ ನೂರಾರು ಕಾರ್ಯಕರ್ತರು ಎಂಇಎಸ್‌ಗೆ ಸೇರಿದ ಕೆಲ ಕಿಡಿಗೇಡಿಗಳ ದುಷ್ಕೃತ್ಯವನ್ನು ಖಂಡಿಸಿದರು. ಎಂಇಎಸ್. ನಿಷೇಧಿಸುವಂತೆಯೂ ಆಗ್ರಹಿಸಿದರು. 'ಎಂಇಎಸ್. ಗೂಂಡಾಗಳಿಗೆ ಧಿಕ್ಕಾರ', 'ಮಹಾರಾಷ್ಟ್ರ ಏಕೀಕರಣ ಸಂಘಟನೆಗೆ ಧಿಕ್ಕಾರ', 'ಬೆಳಗಾವಿ ಎಂದೆಂದಿಗೂ ಕನ್ನಡಿಗರ ಆಸ್ತಿ', 'ದೇಶದ್ರೋಹಿ ಎಂಇಎಸ್ ಹಾಗೂ ಶಿವಸೇನೆ ಸಂಘಟನೆಗಳನ್ನು ಬಹಿಷ್ಕರಿಸಿ' ಎಂಬ ಘೋಷಣೆಗಳನ್ನು ಕೂಗಿದ ಪ್ರತಿಭಟನಕಾರರು, ಶಿವಸೇನೆ ಧ್ವಜವನ್ನು ನೆಲಕ್ಕೆ ಹಾಕಿ ಕಾಲಿನಿಂದ ತುಳಿದರು.

ಪ್ರತಿಭಟನಕಾರರು ಶಿವಸೇನೆ ಬಾವುಟಕ್ಕೆ ಬೆಂಕಿ ಹಚ್ಚಲು ಮುಂದಾದಾಗ ಪೊಲೀಸರು ತಡೆಯಲು ಮುಂದಾದರು. ಈ ವೇಳೆ ವಾಗ್ವಾದ ನಡೆದು ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಪೊಲೀಸರ ವಿರೋಧದ ನಡುವೆಯೂ ಕಾರ್ಯಕರ್ತರು ಶಿವಸೇನೆ ಬಾವುಟ ಸುಟ್ಟರು.



ಕರ್ನಾಟಕ ರಕ್ಷಣಾ ವೇದಿಕೆಯ (ಶಿವರಾಮೇಗೌಡ ಬಣ) ಕಾರ್ಯಕರ್ತರು ಮೆಜೆಸ್ಟಿಕ್ ಬಳಿಯ ಸಂಗೊಳ್ಳಿ ರಾಯಣ್ಣ ಪ್ರತಿಮೆ ಎದುರು ಶಿವಸೇನೆ ಧ್ವಜ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು– ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಎಂಇಎಸ್ ವಿರುದ್ಧ ನಿರ್ಣಾಯಕ ಕ್ರಮ: ಬೊಮ್ಮಾಯಿ

ಬೆಳಗಾವಿ: 'ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ವಿರುದ್ಧ ಈ ಬಾರಿ ನಿರ್ಣಾಯಕ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಇಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, 'ಈ ಹಿಂದೆಲ್ಲ ಕಾಟಾಚಾರಕ್ಕೆ ಎನ್ನುವಂತೆ ಕೆಲವರನ್ನು ಬಂಧಿಸಿ ಬಿಡುಗಡೆ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ನಾವು ಪ್ರಮುಖರನ್ನೇ ಬಂಧಿಸಿದ್ದೇವೆ. ಕಾನೂನು ಕೈಗೆತ್ತಿಕೊಳ್ಳುವ ಯಾರೇ ಆಗಿರಲಿ, ಅವರ ವಿರುದ್ಧ ಅತ್ಯಂತ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.'ಪುಂಡಾಟಿಕೆ ಮಾಡಿದ ಪ್ರಮುಖರನ್ನು ಬಂಧಿಸಿ, ಅಂಥವರ ನಿಯಂತ್ರಣ ಮಾಡುತ್ತಿದ್ದೇವೆ. ನಮ್ಮ ಗೃಹ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಮಹಾರಾಷ್ಟ್ರ ಸರ್ಕಾರದೊಂದಿಗೆ ಮಾತನಾಡಿ ಅಲ್ಲಿರುವ ಕನ್ನಡಿಗರ ಆಸ್ತಿ, ಸರ್ಕಾರಿ ವಾಹನಗಳ ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಮಾಡಿದ್ದಾರೆ' ಎಂದು ತಿಳಿಸಿದರು.

ಸಚಿವ ಸಂಪುಟ ಸಭೆ ನಿರ್ಣಯ • ಜಲ್ ಜೀವನ್ ಮಿಷನ್‌ಗೂ ಒತ್ತು

ಕುಡಿಯುವ ನೀರು, ನೀರಾವರಿಗೆ ₹1,332 ಕೋಟಿ

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣ ವಿಧಾನಸೌಧ): ವಿವಿಧ ಕುಡಿಯುವ ನೀರಿನ ಯೋಜನೆಗಳು ಮತ್ತು ನೀರಾವರಿ ಯೋಜನೆಗಳಿಗೆ ₹1,332.21 ಕೋಟಿ ಅನುದಾನ ಒದಗಿಸಲು ಸೋಮವಾರ ಇಲ್ಲಿ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಜಲ್ ಜೀವನ್ ಮಿಷನ್ ಯೋಜನೆಯಡಿ ಹಾವೇರಿ ಜಿಲ್ಲೆಯ ಸವಣೂರು, ಶಿಗ್ಗಾವಿ, ಹಾನಗಲ್ ಮತ್ತು ಹಾವೇರಿ ತಾಲ್ಲೂಕಿನ 285 ಗ್ರಾಮಗಳ (291 ಜನವಸತಿಗಳಿಗೆ), ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು ₹645 ಕೋಟಿ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಎಂದು ಮೂಲಗಳು ತಿಳಿಸಿವೆ.

ಆಲಮಟ್ಟಿ ಎಡದಂಡೆ ಕಾಲುವೆ ಕಿ.ಮೀ 0.00 ರಿಂದ 68.24 ವರೆಗಿನ (ಬಾಕಿ ಉಳಿದ) ಕಾಲುವೆ ಜಾಲದ ಹಾಗೂ ವಿತರಣಾ ಕಾಲುವೆಗಳ ಸ್ಟ್ರಕ್ಚರ್ ಒಳಗೊಂಡಂತೆ ಆಧುನೀಕರಣ ಕಾಮಗಾರಿಗಳನ್ನು ₹75,41 ಕೋಟಿ ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಕಾಗಿಣಾ ನದಿಯಿಂದ ನೀರನ್ನೆತ್ತಿ 3,150 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ₹143.80 ಕೋಟಿಗಳ ಯಡ್ಡಳ್ಳಿ ಏತ ನೀರಾವರಿ ಹಾಗೂ ತೆರ್ನಳ್ಳಿ ಏತ ನೀರಾವರಿ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಜಾರಿಗೊಳಿಸುತ್ತಿರುವ ಸುರಪುರ, ಶಹಾಪುರ ಮತ್ತು ತಾವರಗೇರಾ ಪಟ್ಟಣಗಳ ಕುಡಿಯುವ ನೀರು ಸರಬರಾಜು ಯೋಜನೆಗಳ ಒಟ್ಟಾರೆ ₹381.87 ಕೋಟಿಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ.

ಪ್ರಮುಖ ತೀರ್ಮಾನಗಳು:

- ಬೆಂಗಳೂರು ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಹೊಸ ಕಟ್ಟಡ ನಿರ್ಮಾಣಕ್ಕೆ ₹85 ಕೋಟಿ.
- ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಗಳ ಹಣಕಾಸಿನ ಸ್ಥಿತಿಗತಿ ಸುಧಾರಣೆಗಾಗಿ ಸಾಲದ ಪುನರ್ ರಚನೆ ಮತ್ತು ರಾಜ್ಯ ಸರ್ಕಾರದಿಂದ ಇವೆರಡೂ ಕಂಪನಿಗಳಿಗೆ ಬಡ್ಡಿ ರಹಿತ ಸಾಲಗಳನ್ನು ಷೇರು ಬಂಡವಾಳವಾಗಿ ಪರಿವರ್ತಿಸಲು ಒಪ್ಪಿಗೆ.
- ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಹೆಚ್ಚುವರಿಯಾಗಿ ₹50 ಕೋಟಿ ಷೇರು ಬಂಡವಾಳ ಬಿಡುಗಡೆಗೆ ಅನುಮತಿ.
- ಕೃತಕ ಬುದ್ಧಿಮತ್ತೆ, ಯಾಂತ್ರೀಕೃತ ಕಲಿಕೆ, ವಿದ್ಯುತ್ ಚಾಲಿತ ವಾಹನಗಳು, ವೈದ್ಯ ತಂತ್ರಜ್ಞಾನ ವಲಯಗಳ ನಾವೀನ್ಯತೆ ಮತ್ತು ತೀವ್ರ ತಾಂತ್ರಿಕ ನವೋದ್ಯಮ ಕಂಪನಿಗಳನ್ನು ಬೆಂಬಲಿಸಲು ₹100 ಕೋಟಿ ಬಂಡವಾಳ ನಿಧಿ ಸ್ಥಾಪಿಸಲು ಒಪ್ಪಿಗೆ.
- ಕೊಡಗು ಜಿಲ್ಲೆಯ ಕುಶಾಲನಗರ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಒಪ್ಪಿಗೆ.

ಕೆಪಿಎಸ್‌ಸಿ ಮಸೂದೆ ಮುಂದಕ್ಕೆ

ಕೆಪಿಎಸ್‌ಸಿ 2011 ನೇ ಬ್ಯಾಚ್‌ನ 362 ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ರಕ್ಷಣೆಗಾಗಿ ತಿದ್ದುಪಡಿ ಮಸೂದೆಯ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆದರೂ, ಯಾವುದೇ ತೀರ್ಮಾನ ತೆಗೆದುಕೊಳ್ಳಲಿಲ್ಲ. ಇದನ್ನು ಮುಂದಿನ ಸಂಪುಟ ಸಭೆಯಲ್ಲಿ ಪರಿಶೀಲಿಸಲು ತೀರ್ಮಾನಿಸಲಾಯಿತು ಎಂದು ಮೂಲಗಳು ಹೇಳಿವೆ.

ಕಾನೂನಿನ ಕೆಲವು ಅಂಶಗಳ ಬಗ್ಗೆ ಇನ್ನಷ್ಟು ವಿಸ್ತೃತ ಚರ್ಚೆಯ ಅಗತ್ಯವಿದೆ ಎಂಬ ಸಲಹೆ ಸಭೆಯಲ್ಲಿ ಕೇಳಿ ಬಂದಿತು. ಇದರಿಂದಾಗಿ ಮಸೂದೆಯು ಮುಂದಿನ ಅಧಿವೇಶನದಲ್ಲಿ ಮಂಡನೆಯಾಗುವ ಸಾಧ್ಯತೆ ಇದೆ.

ಧಾರವಾಡ–ಬೆಳಗಾವಿ ರೈಲು ಮಾರ್ಗಕ್ಕೆ ₹927 ಕೋಟಿ

ಧಾರವಾಡ– ಕಿತ್ತೂರು– ಬೆಳಗಾವಿ ನೂತನ ರೈಲು ಮಾರ್ಗ ನಿರ್ಮಾಣಕ್ಕಾಗಿ ₹927.40 ಕೋಟಿ ಮೊತ್ತದ ಯೋಜನೆಗೆ ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

2021–22 ನೇ ಸಾಲಿನ ಐಇಬಿಆರ್ ಅಡಿ ಕರ್ನಾಟಕ ನೀರಾವರಿ ನಿಗಮಕ್ಕೆ ಅವಧಿ ಸಾಲಗಳ ಮೂಲಕ ₹650 ಕೋಟಿ, ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ₹250 ಕೋಟಿ, ಕಾವೇರಿ ನೀರಾವರಿ ನಿಗಮಕ್ಕೆ ₹250 ಕೋಟಿ ಮತ್ತು ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ₹500 ಕೋಟಿ ಹಣ ಸಂಗ್ರಹಿಸಲು ಮತ್ತು ಸರ್ಕಾರಿ ಖಾತರಿಗೂ ಒಪ್ಪಿಗೆ ನೀಡಲಾಗಿದೆ.

ಕನ್ನಡ ಭಾಷೆಗಾಗಿ ಪ್ರಾಣ ನೀಡಲೂ ಸಿದ್ಧ: ನಟ ಶಿವರಾಜ್‌ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಇತ್ತೀಚೆಗೆ ಶಿವಸೇನಾ ಕಾರ್ಯಕರ್ತರು ಕನ್ನಡ ಬಾವುಟವನ್ನು ಸುಟ್ಟು ಹಾಕಿರುವ ಘಟನೆ ಕುರಿತಂತೆ ನಟ ಶಿವರಾಜ್‌ಕುಮಾರ್ ಅವರು ಪ್ರತಿಕ್ರಿಯೆ ನೀಡಿದ್ದು, 'ಮತಬ್ಯಾಂಕ್‌ಗಾಗಿ ಸರ್ಕಾರ ಸುಮ್ಮನೆ ಕುಳಿತುಕೊಳ್ಳಬಾರದು. ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕು. ನಮ್ಮ ಭಾಷೆಗಾಗಿ ಪ್ರಾಣ ಕೊಡಲೂ ನಾವು ಸಿದ್ಧ' ಎಂದಿದ್ದಾರೆ.

ನಟ ಧನಂಜಯ್ ಅವರು ನಟಿಸಿರುವ 'ಬಡವ ರಾಸ್ಕಲ್' ಸಿನಿಮಾದ ಪ್ರಿರಿಲೀಸ್ ಕಾರ್ಯಕ್ರಮದಲ್ಲಿ ಮಾತನಾಡಿದ ಶಿವರಾಜ್‌ಕುಮಾರ್, 'ಧ್ವಜ ಸುಟ್ಟ ಘಟನೆ ಗಮನಕ್ಕೆ ಬಂದ ಕೂಡಲೇ ಟ್ವೀಟ್ ಮಾಡಿದೆ. ಟ್ವೀಟ್ ಮಾಡುವುದು ಈಗ ಫ್ಯಾಷನ್ ಆಗಿದೆ. ಕೇವಲ ಟ್ವೀಟ್ ಮಾಡುವುದರಿಂದ ಪ್ರಯೋಜನವಿಲ್ಲ. ನನಗೇನೂ ಸಾಯಬೇಕೆಂಬ ಆಸೆ ತಾಯಾಣೆಗೂ ಇಲ್ಲ. ಇನ್ನೂ ನೂರು ವರ್ಷ ಬದುಕಬೇಕೆಂದು ಆಸೆ ಪಡುತ್ತೇನೆ. ಜೀವ ಎನ್ನುವುದು ಒಂದು ಕೊಡುಗೆ. ಆದರೆ ನಮ್ಮ ಭಾಷೆಗಾಗಿ ಪ್ರಾಣ ಕೊಡಲೂ ನಾವು ಸಿದ್ಧರಿದ್ದೇವೆ' ಎಂದರು.




'ಕರ್ನಾಟಕದಲ್ಲಿದ್ದಾಗ ಕರ್ನಾಟಕವನ್ನು ಪ್ರೀತಿಸಬೇಕು. ಹೀಗಾಗಿ ಸರ್ಕಾರ ದಯವಿಟ್ಟು ಸರಿಯಾಗಿ ಯೋಚಿಸಿ, ಕ್ರಮ ಕೈಗೊಳ್ಳಲೇಬೇಕು. ನಮ್ಮ ಭಾಷೆಗೆ ನಾವು ಹೋರಾಡಬೇಕು. ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದು ಇಷ್ಟೆ. 'ನೀವು ಬದ್ಧತೆ ತೋರಿಸಿ. ಯಾರೇ ತಪ್ಪು ಮಾಡಿರಲಿ ಶಿಕ್ಷೆ ಆಗಲಿ' ಎಂದರು.

'ಆಯಾ ರಾಜ್ಯದಲ್ಲಿ ಇರಬೇಕಾದರೆ ಆ ರಾಜ್ಯಕ್ಕೆ, ಭಾಷೆಗೆ ಗೌರವ, ಮರ್ಯಾದೆ ಕೊಡುವುದು ಎಲ್ಲರ ಧರ್ಮ. ಯಾವುದೇ ರಾಜ್ಯದಲ್ಲಾಗಲಿ ಬೇರೆಯವರ ಧ್ವಜವನ್ನು ಸುಟ್ಟು, ಅದನ್ನು ಕಡೆಗಣಿಸಬಾರದು. ಯಾವತ್ತೂ ಮರ್ಯಾದೆ ನೀಡಬೇಕು.' ಎಂದು ಶಿವರಾಜ್‌ಕುಮಾರ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ವಿದಾದಕ್ಕೆ ಕಾರಣವಾದ ಯತ್ನಾಳ ಹೇಳಿಕೆ

ಬೆಳಗಾವಿ:'ಹಿಂದಿ ಹೇರಿಕೆಯನ್ನು ವಿರೋಧಿಸುತ್ತೀರಿ. ಆದರೆ, ಉರ್ದು ಹೇರಿಕೆಯನ್ನು ಏಕೆ ವಿರೋಧಿಸುವುದಿಲ್ಲ' ಎಂದು ಬಿಜೆಪಿಯ ಬಸನಗೌಡಪಾಟೀಲ ಯತ್ನಾಳ ವಿಧಾನಸಭೆಯಲ್ಲಿ ಹೇಳಿದ್ದು ಗದ್ದಲಕ್ಕೆ ಕಾರಣವಾಯಿತು.



ಎಂಇಎಸ್ ಪುಂಡಾಟದ ವಿಷಯ ಮಾತನಾಡುವಾಗ ಉರ್ದು ಭಾಷೆಯ ಪ್ರಸ್ತಾಪಿಸಿದ್ದು, ಕಾಂಗ್ರೆಸ್ ಸದಸ್ಯರನ್ನು ಕೆರಳಿಸಿತು. ಯತ್ನಾಳ ಅವರ ಮಾತಿಗೆ ಅಡ್ಡಿಪಡಿಸಿದರು. 'ಒಂದು ಸಮುದಾಯವನ್ನು ಗುರಿ ಮಾಡಿಕೊಂಡು ಟೀಕಿಸುತ್ತಿದ್ದಾರೆ' ಎಂದು ದೂರಿದರು.

ಭಾರತದಲ್ಲಿ ಕನ್ನಡ, ಮರಾಠಿಯಂತಹ ಭಾಷೆಗಳು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಭಾರತ ಇರುತ್ತದೆ. ಈ ಭಾಷೆಗಳು ಹೋದರೆ ಎಲ್ಲ ಕಡೆ ಬರೀ ಉರ್ದು ಬೋರ್ಡ್‌ಗಳನ್ನು ಮಾತ್ರ ನೋಡಬೇಕಾಗುತ್ತದೆ ಎಂದು ಯತ್ನಾಳ ಹೇಳಿದರು.

6 ಮಂದಿ ಆರೋಪಿಗಳ ಬಂಧನ

ಬೆಳಗಾವಿ: ನಗರದ ವಿವಿಧೆಡೆ ಶುಕ್ರವಾರ ತಡರಾತ್ರಿ ನಡೆದ ಕಲ್ಲುತೂರಾಟ ಹಾಗೂ ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನಗೊಳಿಸಿದ ಘಟನೆ ಸಂಬಂಧ ಆರು ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ.

'ಉಳಿದವರ ಪತ್ತೆಗಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಡಿಸಿಪಿ ವಿಕ್ರಂ ಅಮಟೆ 'ಪ್ರಜಾವಾಣಿ'ಗೆ ತಿಳಿಸಿದರು.

ಕಲ್ಲು ತೂರಾಟ ಘಟನೆಗೆ ಸಂಬಂಧಿಸಿದಂತೆ ಭಾನುವಾರದವರೆಗೆ 32 ಮಂದಿ ಆರೋಪಿಗಳನ್ನು ಬಂಧಿಸಲಾಗಿತ್ತು.

ಸಾಮಾಜಿಕ ಚಳವಳಿ ನಡೆಸಲು ಸ್ವಾಮೀಜಿಗಳಿಗೆ ಸಿ.ಎಂ ಮನವಿ

'ಮತಾಂತರ ನಿಷೇಧ: ಶ್ರೀಗಳು ಬೆಂಬಲಿಸಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮತಾಂತರ ನಿಷೇಧ ಮಸೂದೆಗೆ ವಿಧಾನಮಂಡಲ ಅಧಿವೇಶನದಲ್ಲಿ ಅನುಮೋದನೆ ಪಡೆದು ಕಾಯ್ದೆ ರೂಪಿಸಿ ಜಾರಿಗೊಳಿಸಲು ಬೆಂಬಲ ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಠಾಧೀಶರನ್ನು ಕೋರಿದರು.

'ಮತಾಂತರ ನಿಷೇಧ ಮಸೂದೆಯನ್ನು ಅಧಿವೇಶನದಲ್ಲಿ ಮಂಡಿಸಿ, ಕಾಯ್ದೆಯನ್ನು ಕೂಡಲೇ ಜಾರಿಗೊಳಿಸಬೇಕು' ಎಂದು ಆಗ್ರಹಿಸಿ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಉತ್ತರ ಪ್ರಾಂತದ ವತಿಯಿಂದ ಇಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಮಠಾಧೀಶರ ಸಭೆಯಲ್ಲಿ ಶ್ರೀಗಳು ಹಾಗೂ ವಿಎಚ್‌ಪಿ ಮುಖಂಡರಿಂದ ಮನವಿ ಸ್ವೀಕರಿಸಿ ಅವರು ಮಾತನಾಡಿದರು.

'ನಮ್ಮ ಅಸ್ಮಿತೆ ಇಲ್ಲದೆ ಬದುಕಲಾಗುವುದಿಲ್ಲ. ನಮ್ಮಲ್ಲಿರುವ ಬಡತನ–ಅಸಹಾಯಕತೆ ದುರುಪಯೋಗ ಮಾಡಿಕೊಳ್ಳುವ ಪ್ರಯತ್ನ ನಡೆಯುತ್ತಿವೆ. ಇದನ್ನು ತಡೆಯಬೇಕು' ಎಂದು ಹೇಳಿದರು.

> 'ಮತಾಂತರ ನಿಷೇಧ ಸಮಾಜದ ಅಗತ್ಯ. ಅದನ್ನು ಜವಾಬ್ದಾರಿಯುತ ಸರ್ಕಾರ ಈಡೇರಿಸದಿದ್ದರೆ, ಆಶಯಗಳಿಗೆ ಪ್ರತಿಕ್ರಿಯಿಸದಿದ್ದರೆ ಅರ್ಥ ಇರುವುದಿಲ್ಲ'
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಕಾನೂನು ಬೇಕಾಗಿದೆ: 'ಆಸೆ, ಆಮಿಷ, ಒತ್ತಡ ಅಥವಾ ಒತ್ತಾಯದಿಂದ ಮತಾಂತರ ಮಾಡುವುದನ್ನು ತಡೆಯಲು ಕಾನೂನು ಬೇಕಾಗಿದೆ. ಸರ್ಕಾರದ ಭಾಗವಾಗಿ ನಮ್ಮ ಕರ್ತವ್ಯ ನಿರ್ವಹಿಸುತ್ತೇವೆ. ಚಳವಳಿಗೆ ಅಗತ್ಯ ಸಹಕಾರವನ್ನೂ ಕೊಡುತ್ತೇವೆ' ಎಂದು ತಿಳಿಸಿದರು.

'ಮತಾಂತರ ನಿಷೇಧ ಕಾಯ್ದೆಯನ್ನು ಈಗ ವಿರೋಧಿಸುತ್ತಿರುವವರೇ 2016ರಲ್ಲಿ ಜಾರಿಗೆ ಯತ್ನಿಸಿದ್ದರು. ರಾಜಕೀಯ ಹಿತಾಸಕ್ತಿಯಿಂದಾಗಿ ನಿಲ್ಲಿಸಿದ್ದರು' ಎಂದು ಪರೋಕ್ಷವಾಗಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

'ಶ್ರೀಗಳು ಮನವಿ ಸಲ್ಲಿಸಿದ್ದರಿಂದ ಮುಂದಿನ ಹೆಜ್ಜೆ ಇಡಲು ಸ್ಫೂರ್ತಿ ಹಾಗೂ ಶಕ್ತಿ ಸಿಕ್ಕಿದೆ. ನಮ್ಮ ಕಾರ್ಯ ಯಶಸ್ವಿಯಾಗಲು ಶ್ರೀಗಳೆಲ್ಲರ ಆಶೀರ್ವಾದವಿರಲಿ' ಎಂದು ಮನವಿ ಮಾಡಿದರು.

ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, 'ಮತಾಂತರವು ದೇಶದ ಅಖಂಡತೆಗೆ ಮಾರಕವಾಗಿದೆ. ಮತಾಂತರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಕೋರಿದರು.

ನಿಡಸೋಸಿಯ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ, ಕಾರಂಜಿ ಮಠದ ಗುರುಸಿದ್ದ ಸ್ವಾಮೀಜಿ, ಮಹಾರಾಷ್ಟ್ರದ ಕನ್ಹೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಭಾಗವಹಿಸಿದ್ದರು. ಸಚಿವರಾದ ಮುರುಗೇಶ ನಿರಾಣಿ, ಪ್ರಭು ಚವ್ಹಾಣ, ವಿಧಾನಸಭೆ ಉಪಸಭಾಧ್ಯಕ್ಷ ಆನಂದ ಮಾಮನಿ, ಶಾಸಕ ಅನಿಲ ಬೆನಕೆ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಂಜಯ ಪಾಟೀಲ ಸಭಿಕರ ಸಾಲಿನಲ್ಲಿದ್ದರು.


'ಷಡ್ಯಂತ್ರ ಮಾಡಿದವರಿಗೂ ಶಿಕ್ಷೆಯಾಗಲಿ'

ಬೆಂಗಳೂರು: ಬೆಳಗಾವಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನಗೊಳಿಸಿ, ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿದ ಘಟನೆಯ ಹಿಂದೆ ಷಡ್ಯಂತ್ರ ನಡೆಸಿರುವವರನ್ನು ಪತ್ತೆಹಚ್ಚಿ, ಶಿಕ್ಷಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ ಆಗ್ರಹಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಕೃತ್ಯದಲ್ಲಿ ಭಾಗಿಯಾಗಿರುವ ಸಂಘಟನೆಗಳನ್ನು ರಾಜ್ಯದಲ್ಲಿ ನಿಷೇಧಿಸಬೇಕು. ತಪ್ಪಿತಸ್ಥರನ್ನು ಗಡೀಪಾರು ಮಾಡಬೇಕು. ಕೃತ್ಯಕ್ಕೆ ಷಡ್ಯಂತ್ರ ನಡೆಸಿದವರಿಗೆ ತಕ್ಕ ಶಾಸ್ತಿ ಮಾಡಬೇಕು' ಎಂದು ಒತ್ತಾಯಿಸಿದರು.

ಎರಡೂ ರಾಜ್ಯಗಳ ನಡುವೆ ದ್ವೇಷ ಬಿತ್ತುವವರಿಗೆ ಮಹಾರಾಷ್ಟ್ರ ಮುಖ್ಯಮಂತ್ರಿಯವರು ಬೆಂಬಲ ನೀಡಬಾರದು. ರಾಜ್ಯದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು ನಿಷೇಧಿಸುವ ಕುರಿತು ಇಲ್ಲಿನ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶಿಗ್ಗಾಂವಿಯಲ್ಲಿ ಭಾವನಾತ್ಮಕವಾಗಿ ಮಾತನಾಡಿರುವುದರಲ್ಲಿ ತಪ್ಪೇನೂ ಇಲ್ಲ. ಎಂದು ಕುಮಾರಸ್ವಾಮಿ ಹೇಳಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಮತಚೀಟಿಗೆ ಆಧಾರ್ ಜೋಡಣೆ: ಕಡ್ಡಾಯವೂ ಅಲ್ಲ ಐಚ್ಛಿಕವೂ ಅಲ್ಲ
‘ಓಮೈಕ್ರಾನ್ ತೀವ್ರತೆ ಕಡಿಮೆ ಎಂಬುದಕ್ಕೆ ಪುರಾವೆ ಇಲ್ಲ’ 8
ಕೇಂದ್ರದ ವಿರುದ್ಧ ಉದ್ಯಮಿಗಳ ಆಕ್ರೋಶ 9

ಸೆನ್ಸೆಕ್ಸ್	ನಿಫ್ಟಿ	₹/$
55,822 ▼	16,614 ▼	75.90 ▲

ತಂಟೆಕೋರರಿಗೆ ಶಾಸ್ತಿ: ಸಿ.ಎಂ • ಸುವರ್ಣ ವಿಧಾನಸೌಧ ಆವರಣದಲ್ಲಿ ಚೆನ್ನಮ್ಮ, ರಾಯಣ್ಣ ಪ್ರತಿಮೆ

ಪುಂಡರಿಗೆ ದೇಶದ್ರೋಹದ ದಂಡ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ‘ಮಹಾರಾಷ್ಟ್ರ ಪರ ಒಲವಿಟ್ಟುಕೊಂಡು ಕರ್ನಾಟಕದ ವಿರುದ್ಧ ಸದಾ ಕತ್ತಿ ಮಸೆಯುವ ಪುಂಡ ತಂಟೆಕೋರರ ವಿರುದ್ಧ ದೇಶ ದ್ರೋಹ ಮತ್ತು ಗೂಂಡಾ ಕಾಯ್ದೆ ಹಾಕಿ ಕಠಿಣ ಕ್ರಮ ಕೈಗೊಳ್ಳುತ್ತೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಟು ಮಾತಿನಲ್ಲಿ ಎಚ್ಚರಿಕೆ ಕೊಟ್ಟರು.

ನಾಡಿನ ಎರಡನೇ ರಾಜಧಾನಿ ಎಂದೇ ಹೆಸರಾಗಿರುವ ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲಿ ಸೋಮವಾರ ಮಾತನಾಡಿದ ಬೊಮ್ಮಾಯಿ, ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ತರುವವರನ್ನು ಸುಮ್ಮನೆ ಬಿಡುವುದಿಲ್ಲ ಎಂದೂ ಗುಡುಗಿದರು.

‘ಪದೇ ಪದೇ ಗಡಿ ವಿವಾದವನ್ನು ಕೆದಕಿ ಪುಂಡಾಟ ನಡೆಸುತ್ತಿರುವ ಶಕ್ತಿಗಳಿಗೆ ಕಡಿವಾಣ ಹಾಕಬೇಕು, ಗಡಿಯಾಚೆಯಿಂದ ಪ್ರಚೋದನೆ ನಿಲ್ಲಿಸಬೇಕು. ಅಲ್ಲಿರುವ ಕನ್ನಡಿಗರಿಗೆ ರಕ್ಷಣೆ ಕೊಡಬೇಕು’ ಎಂದು ಮಹಾರಾಷ್ಟ್ರ ಸರ್ಕಾರವನ್ನು ಒತ್ತಾಯಿಸಿ ಬೊಮ್ಮಾಯಿ ಮಂಡಿಸಿದ ನಿರ್ಣಯಕ್ಕೆ ವಿಧಾನ ಮಂಡಲದ ಉಭಯ ಸದನಗಳು ಸರ್ವಾನುಮತದ ಒಪ್ಪಿಗೆ ನೀಡಿದವು.

4ನೇ ಪುಟ ನೋಡಿ



ಸುವರ್ಣ ವಿಧಾನಸೌಧಕ್ಕೆ ಸೋಮವಾರ ಮುತ್ತಿಗೆ ಹಾಕಲು ಬಂದ ಕರವೇ ಕಾರ್ಯಕರ್ತರನ್ನು ಪೊಲೀಸರು ಹಿರೇಬಾಗೇವಾಡಿ ಟೋಲ್ ಬಳಿ ತಡೆದರು
–ಪ್ರಜಾವಾಣಿ ಚಿತ್ರ


ಎಂಇಎಸ್ ನಿಷೇಧಕ್ಕೆ ಕರವೇ ಆಗ್ರಹ

ಬೆಳಗಾವಿ: ‘ನಗರದ ಅನಗೋಳದ ಕನಕದಾಸ ಕಾಲೊನಿಯಲ್ಲಿ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಪ್ರತಿಮೆ ಭಗ್ನಗೊಳಿಸಿದವರನ್ನು ಕೂಡಲೇ ಬಂಧಿಸಬೇಕು ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್)ಯನ್ನು ರಾಜ್ಯದಲ್ಲಿ ನಿಷೇಧಿಸಬೇಕು’ ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ಕಾರ್ಯಕರ್ತರು ಟಿ.ಎ. ನಾರಾಯಣಗೌಡ ಮತ್ತು ಪ್ರವೀಣ್‌ಶೆಟ್ಟಿ ನೇತೃತ್ವದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ನಿಷೇಧಾಜ್ಞೆ ಇದ್ದರೂ ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು 2 ತಂಡಗಳಾಗಿ ಪ್ರತ್ಯೇಕವಾಗಿ ಬರುತ್ತಿದ್ದ ಸಾವಿರಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ಪುಣೆ- ಬೆಂಗಳೂರು ರಾಷ್ಟ್ರೀಯ ಹೆದ್ದಾರಿ–4ರಲ್ಲೇ ತಡೆದು ವಶಕ್ಕೆ ಪಡೆದರು. ಈ ವೇಳೆ, ಕಾರ್ಯಕರ್ತರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ನೂಕಾಟ ಉಂಟಾಯಿತು. ಕಾರ್ಯಕರ್ತೆಯರು ಸೇರಿದಂತೆ ಕೆಲವರು ಪೊಲೀಸ್ ವಾಹನದ ಮೇಲೇರಿ, ಎಂಇಎಸ್ ವಿರುದ್ಧ ಘೋಷಣೆ ಕೂಗಿದರು. ಕೆಲವರು ಲಾರಿ ಕೆಳಗೆ ಮಲಗಿ ಪ್ರತಿಭಟಿಸಿದರು. ಇನ್ನೂ ಕೆಲವರು, ಮಹಾರಾಷ್ಟ್ರ ನೋಂದಣಿಯ ವಾಹನದ ಮೇಲೆ ದಾಳಿ ಮಾಡಲು ಯತ್ನಿಸಿದರು. ಆದರೆ, ಪೊಲೀಸರು ಅವಕಾಶ ಕೊಡಲಿಲ್ಲ.

4ನೇ ಪುಟ ನೋಡಿ

‘ಕರ್ನಾಟಕ ಸೇರುವ ನಿರ್ಣಯಕ್ಕೆ ಬೆಂಬಲ’



‘ಗಡಿಯಲ್ಲಿ (ಮಹಾರಾಷ್ಟ್ರ) ಕನ್ನಡಿಗರ ಜೀವನ ಸರಿ ಇಲ್ಲ ಎಂದು ಕರ್ನಾಟಕ ಸೇರಲು ಯಾವುದೇ ಗ್ರಾಮ ಅಥವಾ ಪ್ರದೇಶ ನಿರ್ಣಯ ಮಾಡಿದರೆ, ಸೇರಿಸಿಕೊಳ್ಳಲು ನಮ್ಮ ಬೆಂಬಲ ಇದೆ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

‘ನನ್ನ ಹೇಳಿಕೆಯಿಂದ ವಿವಾದ ಆಗಬಹುದು. ಆದರೆ ಆಗಲಿ ಬಿಡಿ. ಈವರೆಗೆ ರಕ್ಷಣಾತ್ಮಕ ಧೋರಣೆಯನ್ನೇ ಅನುಸರಿಸಿಕೊಂಡು ಬಂದಿದ್ದೇವೆ. ಇದರಿಂದ ಒಳಿತಾಗಿಲ್ಲ. ದಿಟ್ಟ ನಿಲುವು ತೆಗೆದುಕೊಂಡಾಗ ಮಾತ್ರ ಬದಲಾವಣೆ ಸಾಧ್ಯ’ ಎಂದು ತಿಳಿಸಿದರು. ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಜತ್ ಎಂಬ ತಾಲ್ಲೂಕಿನಲ್ಲಿ 40 ಗ್ರಾಮ ಪಂಚಾಯಿತಿಗಳು ತಮಗೆ ಮಹಾರಾಷ್ಟ್ರದಲ್ಲಿ ನ್ಯಾಯ ಸಿಗುತ್ತಿಲ್ಲ, ಕರ್ನಾಟಕಕ್ಕೆ ಸೇರಿಸಿ ಎಂದು ನಿರ್ಣಯ ತೆಗೆದುಕೊಂಡಿವೆ ಎಂದರು.

ಬಸವೇಶ್ವರರ ಚಿತ್ರಕ್ಕೆ ಅವಮಾನ

ಬೆಳಗಾವಿ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನಗೊಳಿಸಿದ್ದಕ್ಕೆ ರಾಜ್ಯದಾದ್ಯಂತ ಆಕ್ರೋಶ ಭುಗಿಲೆದ್ದಿರುವ ಸಂದರ್ಭದಲ್ಲೇ, ಜಿಲ್ಲೆಯ ಖಾನಾಪುರ ತಾಲ್ಲೂಕಿನ ಹಲಸಿ ಗ್ರಾಮದಲ್ಲಿ ಜಗಜ್ಯೋತಿ ಬಸವೇಶ್ವರ ಚಿತ್ರಕ್ಕೆ ಸೆಗಣಿ ಮೆತ್ತಿ ಸೋಮವಾರ ಅವಮಾನಿಸಲಾಗಿದೆ.

4ನೇ ಪುಟ ನೋಡಿ

ಓಮೈಕ್ರಾನ್: ಷೇರುಪೇಟೆ ತತ್ತರ

ಮುಂಬೈ (ಪಿಟಿಐ): ಓಮೈಕ್ರಾನ್ ಪ್ರಕರಣಗಳು ಜಗತ್ತಿನ ಹಲವೆಡೆ ಜಾಸ್ತಿ ಆಗುತ್ತಿರುವುದು ಹೂಡಿಕೆದಾರರ ಸ್ಥೈರ್ಯ ಕುಂದಿಸಿವೆ. ಇದರಿಂದಾಗಿ, ದೇಶಿ ಮತ್ತು ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಹೆಚ್ಚಿನ ಗಮನ ನೀಡಿದರು. ಸೋಮವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ (ಬಿಎಸ್‌ಇ) ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,189 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 371 ಅಂಶ ಇಳಿಕೆ ಕಂಡವು.


ವಿದೇಶಿ ಹೂಡಿಕೆದಾರರು ದೇಶಿ ಮಾರುಕಟ್ಟೆಗಳಿಂದ ಬಂಡವಾಳ ಹಿಂದಕ್ಕೆ ಪಡೆಯುತ್ತಿರುವುದು ಮತ್ತು ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಿಸುವತ್ತ ಒಲವು ತೋರಿಸುತ್ತಿರುವುದು ಕೂಡ ಹೂಡಿಕೆದಾರರ ಮೇಲೆ ನಕಾರಾತ್ಮಕ ಪರಿಣಾಮ ಬೀರಿದವು ಎಂದು ವರ್ತಕರು ತಿಳಿಸಿದ್ದಾರೆ.

ಸೆನ್ಸೆಕ್ಸ್ 55,822 ಅಂಶಗಳಿಗೆ ಇಳಿಕೆಯಾಗಿದ್ದು, ಈ ವರ್ಷದ ಆಗಸ್ಟ್ 23ರ ನಂತರದ ಕನಿಷ್ಠ ಮಟ್ಟ ಇದು. ನಿಫ್ಟಿ 16,614 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದೆ. ಸೋಮವಾರದ ಕುಸಿತದ ಪರಿಣಾಮವಾಗಿ ಬಿಎಸ್‌ಇಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 6.79 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ. ಈಗ ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯ ₹ 252 ಲಕ್ಷ ಕೋಟಿ.

9ನೇ ಪುಟ ನೋಡಿ

ಸೆನ್ಸೆಕ್ಸ್ ಮೇಲೆ ಓಮೈಕ್ರಾನ್ ಪ್ರಭಾವ

ದೇಶದಲ್ಲಿ ಮೊದಲ ಓಮೈಕ್ರಾನ್ ಪ್ರಕರಣ ವರದಿಯಾಗಿದ್ದು ಡಿಸೆಂಬರ್ 2ರಂದು. ಅಂದು 58,461 ಅಂಶಗಳಲ್ಲಿ ಇದ್ದ ಸೆನ್ಸೆಕ್ಸ್, ನಂತರ ಒಮ್ಮೆ ಚೇತರಿಸಿಕೊಂಡಿತು. ಅದಾದ ನಂತರದಲ್ಲಿ ಇಳಿಕೆಯ ಹಾದಿ ಹಿಡಿಯಿತು. ಸೋಮವಾರದ (ಡಿ. 20) ಹೊತ್ತಿಗೆ ಸೆನ್ಸೆಕ್ಸ್ 55,822 ಅಂಶಗಳಿಗೆ ತಲುಪಿದೆ.



ಹಣದುಬ್ಬರ ಮಿತಿಯಲ್ಲಿದೆ: ನಿರ್ಮಲಾ

ಪ್ರಜಾವಾಣಿ ವಾರ್ತೆ

ನವದೆಹಲಿ: ನವೆಂಬರ್‌ನಲ್ಲಿ ಸಗಟು ಹಣದುಬ್ಬರ ಪ್ರಮಾಣವು 12 ವರ್ಷಗಳ ಗರಿಷ್ಠ ಮಟ್ಟದಲ್ಲಿದ್ದು, ಬೆಲೆ ಏರಿಕೆಗೆ ಕಡಿವಾಣ ಹಾಕಬೇಕು ಎಂಬ ಬೇಡಿಕೆ ಬಲವಾಗುತ್ತಿರುವಾಗ, ‘ಹಣದುಬ್ಬರ ಪ್ರಮಾಣವು ನಿಗದಿ ಮಾಡಿರುವುದಕ್ಕಿಂತ ಕಡಿಮೆ ಮಟ್ಟದಲ್ಲಿಯೇ ಇದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಹೇಳಿದರು.

‘ಚಿಲ್ಲರೆ ಹಣದುಬ್ಬರ ಪ್ರಮಾಣವವನ್ನು ಅನುಮತಿ ನೀಡಿರುವ ಶೇಕಡ 6ಕ್ಕಿಂತ ಕಡಿಮೆ ಮಟ್ಟಕ್ಕೆ ಮಿತಿಗೊಳಿಸಲಾಗಿದೆ. ಅಡುಗೆ ಎಣ್ಣೆ ಮತ್ತು ಇತರ ಕೆಲವು ಅಗತ್ಯ ಆಹಾರ ವಸ್ತುಗಳ ಬೆಲೆ ಏರಿಕೆ ವಿಚಾರದಲ್ಲಿ ನಾವು ಕ್ರಮ ಕೈಗೊಳ್ಳುತ್ತೇವೆ’ ಎಂದು ನಿರ್ಮಲಾ ಅವರು ಲೋಕಸಭೆಯಲ್ಲಿ ಹೇಳಿದರು. ದೇಶದಲ್ಲಿ ಸಗಟು ಹಣದುಬ್ಬರ ಪ್ರಮಾಣವು ಪ್ರಸಕ್ತ ಹಣಕಾಸು ವರ್ಷದ ಆರಂಭದಿಂದಲೂ ಎರಡು ಅಂಕಿಗಳ ಮಟ್ಟದಲ್ಲಿಯೇ ಉಳಿದಿದೆ. ನವೆಂಬರ್‌ನಲ್ಲಿ ಅದು ಶೇಕಡ 14.23ಕ್ಕೆ ಏರಿಕೆಯಾಗಿದೆ.

ಮತಾಂತರ ಮಸೂದೆ ಇಂದು ಮಂಡನೆ

ಬೆಳಗಾವಿ(ಸುವರ್ಣ ವಿಧಾನಸೌಧ): ರಾಜ್ಯದಲ್ಲಿ ಮತಾಂತರ ನಿಷೇಧಕ್ಕಾಗಿ ತರಲು ಉದ್ದೇಶಿಸಿರುವ ‘ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆ ಹಕ್ಕು ಕಾಯ್ದೆ- 2021’ ಮಸೂದೆಯನ್ನು ವಿಧಾನಮಂಡಲದಲ್ಲಿ ಮಂಡಿಸಲು ಸೋಮವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಮಸೂದೆಯನ್ನು ಕರಡು ರೂಪದಲ್ಲೇ ಮಂಗಳವಾರ ವಿಧಾನಸಭೆಯಲ್ಲಿ ಮಂಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಒತ್ತಾಯ ಮತ್ತು ಆಮಿಷ ಒಡ್ಡಿ ಮತಾಂತರ ನಡೆಸುವುದನ್ನು ನಿಷೇಧಿಸುವ ಪ್ರಸ್ತಾವ ಈ ಮಸೂದೆಯಲ್ಲಿದೆ. ಅದರ ಪ್ರಕಾರ, ಎಸ್‌ಸಿ, ಎಸ್‌ಟಿ, ಅಪ್ರಾಪ್ತ ವಯಸ್ಕರು, ಮಹಿಳೆಯರು, ಬುದ್ಧಿಮಾಂದ್ಯರನ್ನು ಮತಾಂತರ ಮಾಡಿದವರಿಗೆ ಕನಿಷ್ಠ 3 ವರ್ಷದಿಂದ 10 ವರ್ಷದವರೆಗೆ ಜೈಲು, ₹ 50 ಸಾವಿರ ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

ಶೌಚಗುಂಡಿಗಿಳಿದ ಕಾರ್ಮಿಕ ಸಾವು: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯ ಪಿರಿಯಾಪಟ್ಟಣದಲ್ಲಿ ಶನಿವಾರ ಮನೆಯೊಂದರ ಶೌಚ ಗುಂಡಿಗೆ ಇಳಿದು ಸ್ವಚ್ಛಗೊಳಿಸುವ ವೇಳೆ ಅಸ್ವಸ್ಥಗೊಂಡು ಸೋಮವಾರ ಮೃತಪಟ್ಟ ಪೌರಕಾರ್ಮಿಕ ಮಧು (27) ಅವರ ಮೃತದೇಹವನ್ನು ಜಿಲ್ಲಾಧಿಕಾರಿ ಕಚೇರಿ ಎದುರು ಇರಿಸಿ ಪೌರಕಾರ್ಮಿಕರು ಪ್ರತಿಭಟನೆ ನಡೆಸಿದರು.

ಪೌರಕಾರ್ಮಿಕರಾದ ರಾಜೇಶ್ ಮತ್ತು ವಿಶ್ವ ಎಂಬುವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಪಟ್ಟಣದ ನಾಗರತ್ನ ಎಂಬುವವರ ಮನೆಯ ಮುಂಭಾಗದ ಶೌಚಗುಂಡಿಗೆ ಇಳಿದು ಸ್ವಚ್ಛಗೊಳಿಸುವಾಗ ಅಸ್ವಸ್ಥಗೊಂಡ ಮೂವರನ್ನೂ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮಧು ಮೃತಪಟ್ಟರು. ನಾಗರತ್ನ ಅವರನ್ನು ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕಾಯ್ದೆ 589 ಅಡಿ ಬಂಧಿಸಲಾಗಿದೆ. ಪರಿಶಿಷ್ಟರ ಮೇಲಿನ ದೌರ್ಜನ್ಯ ವಿರೋಧಿ ಕಾಯ್ದೆ ಅಡಿಯೂ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಿಭಟನೆ: ‘ರಾಜ್ಯದಲ್ಲಿ ಪದೇ ಪದೇ ಇಂತಹ ದುರ್ಘಟನೆಗಳು ನಡೆಯುತ್ತಿದ್ದರೂ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ’ ಎಂದು ಮುಖಂಡ ನಾರಾಯಣ ಕಿಡಿಕಾರಿದರು.

ಸ್ಥಳಕ್ಕೆ ಬಂದ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಮನವಿ ಸ್ವೀಕರಿಸಿ, ₹10 ಲಕ್ಷದ ಚೆಕ್ ವಿತರಿಸಿದ ನಂತರ ಪ್ರತಿಭಟನೆಯನ್ನು ಕೈಬಿಡಲಾಯಿತು.

ಚುನಾವಣಾ ಸುಧಾರಣಾ ಮಸೂದೆ: ಲೋಕಸಭೆ ಅಸ್ತು

ನವದೆಹಲಿ (ಪಿಟಿಐ): ಮತದಾರರ ಗುರುತಿನ ಚೀಟಿಯನ್ನು ಆಧಾರ್ ಸಂಖ್ಯೆಯೊಂದಿಗೆ ಜೋಡಿಸುವ ಮಸೂದೆಗೆ ಸೋಮವಾರ ಲೋಕಸಭೆಯಲ್ಲಿ ವಿರೋಧ ಪಕ್ಷಗಳ ವಿರೋಧದ ನಡುವೆಯೂ ಧ್ವನಿ ಮತದ ಮೂಲಕ ಅನುಮೋದನೆ ದೊರೆತಿದೆ.

ಚುನಾವಣಾ ಕಾನೂನುಗಳ (ತಿದ್ದುಪಡಿ) ಮಸೂದೆ- 2021 ಅನ್ನು ಮಂಡಿಸಿದ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು, ಇದು ದೇಶದಲ್ಲಿ ನಕಲಿ ಮತದಾನವನ್ನು ಕೊನೆಗೊಳಿಸುತ್ತದೆ. ಜತೆಗೆ ಚುನಾವಣಾ ಪ್ರಕ್ರಿಯೆಯನ್ನು ಹೆಚ್ಚು ವಿಶ್ವಾಸಾರ್ಹಗೊಳಿಸುತ್ತದೆ ಎಂದರು.

ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸುವವರ ಆಧಾರ್ ಸಂಖ್ಯೆ ಪಡೆಯಲು ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಈ ಮಸೂದೆ ಅವಕಾಶ ಒದಗಿಸುತ್ತದೆ ಎಂದು ಮಾಹಿತಿ ನೀಡಿದರು.

ಆದರೆ, ಕಾಂಗ್ರೆಸ್ ನೇತೃತ್ವದಲ್ಲಿ ವಿರೋಧ ಪಕ್ಷಗಳು ಈ ಮಸೂದೆಯು ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಆತಂಕ ವ್ಯಕ್ತಪಡಿಸಿದವು.

ಓಮೈಕ್ರಾನ್: ಮತ್ತೆ ಐದು ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಮತ್ತೆ ಐವರಿಗೆ ಓಮೈಕ್ರಾನ್ ಸೋಂಕು ಸೋಮವಾರ ದೃಢಪಟ್ಟಿದೆ. ಇದರೊಂದಿಗೆ ರಾಜ್ಯದಲ್ಲಿ ಓಮೈಕ್ರಾನ್ ಸೋಂಕಿತರ ಸಂಖ್ಯೆ 19ಕ್ಕೆ ಏರಿಕೆಯಾಗಿದೆ.



ಧಾರವಾಡದ 54 ವರ್ಷದ ಪುರುಷ, ಭದ್ರಾವತಿಯ 20 ವರ್ಷದ ಯುವತಿ, ಮಂಗಳೂರಿನ 19 ವರ್ಷದ ಯುವತಿ, ಉಡುಪಿಯ 82 ವರ್ಷದ ವೃದ್ಧ ಮತ್ತು 72 ವರ್ಷದ ವೃದ್ಧೆ ಓಮೈಕ್ರಾನ್ ಸೋಂಕು ಹೊಂದಿದ್ದಾರೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಟ್ವೀಟ್ ಮಾಡಿದ್ದಾರೆ.

ಒಳ ಪುಟ



ಐಶ್ವರ್ಯಾ ರೈ ವಿಚಾರಣೆ ನಡೆಸಿದ ಇ.ಡಿ. 8

ಸರ್ಕಾರಿ ಶಾಲೆ ದುರಸ್ತಿ, ಕಟ್ಟಡಕ್ಕೆ ಸುಣ್ಣ ಬಣ್ಣ, ವಿದ್ಯುತ್ ಸಂಪರ್ಕ

ಶಾಲೆಗೆ ₹ 1 ಲಕ್ಷ ಖರ್ಚು ಮಾಡಿದ ಶಿಕ್ಷಕ!

• ಬಸವರಾಜ್ ಸಂಪಳ್ಳಿ

ಒಳ್ಳೆ ಸುದ್ದಿ

ವಿಜಯಪುರ: ಸರ್ಕಾರಿ ಶಾಲೆಯ ಶಿಕ್ಷಕರೊಬ್ಬರು ತಾವು ಕಾರ್ಯನಿರ್ವಹಿಸುತ್ತಿರುವ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಪಣ ತೊಟ್ಟು, ತಮ್ಮ ದುಡಿಮೆಯ ₹1 ಲಕ್ಷ ಖರ್ಚು ಮಾಡಿ ಶಾಲೆಯನ್ನು ಸುಂದರಗೊಳಿಸಿದ್ದಾರೆ.

ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ತಿಕೋಟಾ ತಾಲ್ಲೂಕಿನ ಘೋಣಸಗಿ ಎಲ್.ಟಿ.01 ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಪರಮೇಶ್ವರ ಎಸ್. ಗದ್ಯಾಳ ಅವರು ಈ ಕೆಲಸ ಮಾಡಿ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಣ ಇಲಾಖೆಯ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಲಂಬಾಣಿ ತಾಂಡಾ ಜನವಸತಿ ಪ್ರದೇಶದ ಮಕ್ಕಳಿಗೆ ನೈಜ ಕಲಿಕೆಗೆ ಒತ್ತು ಕೊಡುವ ಉದ್ದೇಶದಿಂದ ಶಾಲಾ ಕೊಠಡಿಯ ಪ್ರತಿ ಗೋಡೆಯ ಮೇಲೆ ಒಂದೊಂದು ವಿಷಯದ



ಘೋಣಸಗಿ ಎಲ್‌ಟಿ.ನಂ 01 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ

ಕಲಿಕಾ ಬರವಣಿಗೆ ಮತ್ತು ಚಿತ್ರಗಳನ್ನು ಮೂಡಿಸಿದ್ದಾರೆ. ಕೊಠಡಿಯ ಹೊರ ಭಾಗದ ಗೋಡೆ ಮೇಲೆ ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ ನಕ್ಷೆ ಇತರೆ ಎಲ್ಲ ಮಾಹಿತಿಗಳನ್ನು ಚಿತ್ರಿಸಿ ಕಲಿಕಾ ವಾತಾವರಣ ನಿರ್ಮಿಸಿದ್ದಾರೆ.

ಕಂಪ್ಯೂಟರ್ ಕಲಿಕೆಗಾಗಿ, ಶಾಲೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದಾರೆ. ಶಾಲೆ ಚಾವಣಿ ರಿಪೇರಿ, ಶೌಚಾಲಯ, ಅಡುಗೆ ಕೋಣೆಯ ರಿಪೇರಿ ಹಾಗೂ ಶಾಲೆಯ ಭೌತಿಕ ಸೌಲಭ್ಯಗಳ ಎಲ್ಲ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಸಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡದ ಈ ಹಿಂದಿನ ಆಯುಕ್ತ ಮೇಜರ್ ಸಿದ್ದಲಿಂಗಯ್ಯ ಹಿರೇಮಠ ಈ ಶಾಲೆಗೆ ಒಮ್ಮೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಕ್ಕಳ ಶೈಕ್ಷಣಿಕ ಗುಣಮಟ್ಟ ಪರಿಶೀಲಿಸಿ ಪ್ರಶಂಸೆ ವ್ಯಕ್ತಪಡಿಸಿದ್ದರು. ಇದೇ ಪ್ರೇರಣೆಯಿಂದ ಈ ಕೆಲಸ ಮಾಡಿದ್ದೇನೆ’ ಎಂದು ಗದ್ಯಾಳ ಹೇಳಿದರು.



ಮಕ್ಕಳ ನೈಜ ಕಲಿಕೆಗೆ ಉತ್ತಮ ಕಲಿಕಾ ವಾತಾವರಣ ನಿರ್ಮಿಸಲು ಸ್ವಂತ ಖರ್ಚಿನಲ್ಲಿ ಈ ಕಾರ್ಯ ಮಾಡಿದ್ದೇನೆ. ಬಡ ಮಕ್ಕಳ ಕಲಿಕಾ ಖುಷಿ ನನಗೆ ಸಂತೃಪ್ತಿ ತಂದಿದೆ

ಪರಮೇಶ್ವರ ಎಸ್.ಗದ್ಯಾಳ, ಶಿಕ್ಷಕ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹೊತ್ತಿ ಉರಿದ ಕಾರು

ಬೆಂಗಳೂರು: ನಂದಿನಿ ಲೇಔಟ್‌ನ ಜೈಮಾರುತಿ ನಗರದ ಮನೆಯೊಂದರ ಮುಂದೆ ನಿಲ್ಲಿಸಿದ್ದ ಆಮ್ನಿ ಕಾರಿನಲ್ಲಿ ಬೆಂಕಿ ಕಾಣಿಸಿಕೊಂಡು ಕಾರು ಭಾಗಶಃ ಸುಟ್ಟಿದೆ. 'ಭಾನುವಾರ ರಾತ್ರಿ 11 ಗಂಟೆ ಸುಮಾರಿಗೆ ಕಾರು ಚಲಾಯಿಸಿಕೊಂಡು ಬಂದ ವ್ಯಕ್ತಿ ಅದನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದರು ಅನಿಲ ಸೋರಿಕೆಯಿಂದಾಗಿ ಕಾರಿನಲ್ಲಿ ಬೆಂಕಿ ಹೊತ್ತಿಕೊಂಡಿದೆ. ಸ್ಥಳೀಯರು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದರು. ಅವರು ಬಂದು ಬೆಂಕಿ ನಂದಿಸಿದ್ದಾರೆ' ಎಂದಿದ್ದಾರೆ ಪೊಲೀಸರು.

ನೋಟರಿ ಕಾಯ್ದೆ ತಿದ್ದುಪಡಿಗೆ ವಿರೋಧ

ಬೆಂಗಳೂರು: 'ನೋಟರಿ ಕಾಯ್ದೆಗೆ ತಿದ್ದುಪಡಿ ತರುವ ನಿರ್ಧಾರದಿಂದ ಕೇಂದ್ರ ಸರ್ಕಾರ ಹಿಂದಕ್ಕೆ ಸರಿಯಬೇಕು' ಎಂದು ರಾಜ್ಯ ನೋಟರಿಗಳ ಸಂಘ ಆಗ್ರಹಿಸಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಕಾರ್ಯದರ್ಶಿ ವಿ.ರಂಗರಾಮು,'1952ರ ನೋಟರಿ ಕಾಯ್ದೆಯ ಸೆಕ್ಷನ್ 5(2) ಅನ್ನು ಕೇಂದ್ರ ಸರ್ಕಾರ ತಿದ್ದುಪಡಿ ಮಾಡಲು ಉದ್ದೇಶಿಸಿದ್ದು, ಇದರಿಂದ ನೋಟರಿ ಪ್ರಮಾಣಪತ್ರ ನವೀಕರಿಸುವ ಅವಕಾಶ ಕೈತಪ್ಪಲಿದೆ. ಹೀಗಾಗಿ ಈ ತಿದ್ದುಪಡಿಯನ್ನು ವಿರೋಧಿಸುತ್ತಿದ್ದೇವೆ' ಎಂದು ತಿಳಿಸಿದರು.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು (ಗ್ರಾ) ಜಿಲ್ಲೆ. ದೂರವಾಣಿ/ ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote-pa.in

ಸಂಖ್ಯೆ: ಹೊಯೋಪ್ರಾ/ಭೂಉಬ/05/2021–22 ದಿನಾಂಕ: 18–12–2021

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಈ ಕೆಳಕಂಡ ಜಮೀನನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30–01–2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ವಸತಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ/ ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಭೂ ಮಾಲೀಕರು / ಜಿ.ಪಿ.ಎ. ದಾರರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ
	ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ಅಂಕೋನಹಳ್ಳಿ ಗ್ರಾಮದ ಈ ಕೆಳಕಂಡ ಜಮೀನುಗಳಿಗೆ ಸಂಬಂಧಿಸಿದಂತೆ		
1	ಶ್ರೀ ಜೆ.ವಿ. ಸುಬ್ಬರಾಯುಡು ಮತ್ತು ಇತರರ ಪರವಾಗಿ ಜಿಪಿಎದಾರರಾದ	8/1	01–03
2	ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	8/2	00–26
3	ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	8/3	00–30
4	ಶ್ರೀ ಪಿ.ವಿ. ಪ್ರಭಾಕರ್ ಬಿನ್ ವೆಂಕಟರಮಣಪ್ಪ	8/4	00–15
5	ಶ್ರೀ ಸಿ. ತಿಮ್ಮೇಗೌಡ ಇವರ ಪರವಾಗಿ ಜಿಪಿಎದಾರರಾದ ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	8/5	00–25
6	ಶ್ರೀ ಬಿ. ಶಿವಸ್ವಾಮಿ ಮತ್ತು ಇತರರು	8/6	01–04
7	ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	8/7	00–37
8	ಶ್ರೀ ಟಿ. ರತ್ನಪ್ಪ ಇವರ ಪರವಾಗಿ ಜಿಪಿಎದಾರರಾದ ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	8/9	01–00
9	ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	10/1	01–21
10	ಶ್ರೀ ಜಗನ್ನಾಥಮ್ ಇವರ ಪರವಾಗಿ ಜಿಪಿಎದಾರರಾದ ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	10/2	00–23 1/2
11	ಶ್ರೀ ವಿ. ಅನಿಲ್ ಕುಮಾರ್ ಇವರ ಪರವಾಗಿ ಜಿಪಿಎದಾರರಾದ ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	10/3	01–11
12	ಶ್ರೀ ಜಗನ್ನಾಥಮ್ ಇವರ ಪರವಾಗಿ ಜಿಪಿಎದಾರರಾದ ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	10/4	00–23 1/2
13	ಶ್ರೀ ಪೆಮ್ಮಸಾನಿ ಸುದರ್ಶನಂ ಇವರ ಪರವಾಗಿ ಜಿಪಿಎದಾರರಾದ ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	11/2	02–07
14	ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	11/3	01–32
15	ಶ್ರೀ ನಿಸಾರ್ ಅಹಮ್ಮದ್ ಬಿನ್ ಪಿರ್ಲಾಂ ಸಾಬಿ	11/4	01–10
	ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ದೊಡ್ಡೇನಹಳ್ಳಿ ಗ್ರಾಮದ ಈ ಕೆಳಕಂಡ ಜಮೀನುಗಳಿಗೆ ಸಂಬಂಧಿಸಿದಂತೆ		
16	ಶ್ರೀಮತಿ ಮೀರಾಂಬಿ ಮತ್ತು ಇತರರ ಪರವಾಗಿ ಜಿಪಿಎದಾರರಾದ ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	42/2	00–30
17	ಶ್ರೀ ಶಾಕೀರ್ ಮತ್ತು ಇತರರು	42/3	02–20
18	ಶ್ರೀ ಜಗನ್ ಮೋಹನ ರೆಡ್ಡಿ ಇವರ ಪರವಾಗಿ ಜಿಪಿಎದಾರರಾದ ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	42/4	00–22
19	ಶ್ರೀ ಬಿ. ಪ್ರವೀಣ್ ಇವರ ಪರವಾಗಿ ಜಿಪಿಎದಾರರಾದ ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	42/5	01–18
20	ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	43/1	00–12
21		43/2	00–12
22	ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	45/3	00–36 3/4
23	ಶ್ರೀ ವೆಂಕಟಪ್ಪ ಮತ್ತು ಇತರರು	45/4	00–33
24	ಶ್ರೀ ಕೆ. ಅಬ್ದುಲ್ ಸಮುದ್ ಬಿನ್ ಲೇಟ್ ಕೆ.ಎಂ. ಕುಟ್ಟಿ ಇವರ ಪರವಾಗಿ ಜಿಪಿಎದಾರರಾದ ಶ್ರೀ ಚಿಕ್ಕಹನುಮಂತೇ ಗೌಡ ಮತ್ತು ಶ್ರೀ ಗುರುಪ್ರಸಾದ್	45/5	02–00
25	ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	45/6	01–13 1/4
26	ಶ್ರೀ ಚನ್ನಕೃಷ್ಣಪ್ಪ ಬಿನ್ ಚಿಕ್ಕಪ್ಪಯ್ಯ	52	04–27
27	ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	53/1	02–11
28	ಶ್ರೀ ಗುರುಪ್ರಸಾದ್ ಇವರ ಪರವಾಗಿ ಜಿಪಿಎದಾರಾದ ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	53/2	00–30 1/2
29	ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	53/3	00–30 1/4
30	ಶ್ರೀ ಗುರುಪ್ರಸಾದ್ ಇವರ ಪರವಾಗಿ ಜಿಪಿಎದಾರಾದ ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	53/4	00–30 1/4
31	ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	54	04–39
32	ಶ್ರೀಮತಿ ಗೌರಮ್ಮ ಮತ್ತು ಇತರರು ಇವರ ಪರವಾಗಿ ಜಿಪಿಎದಾರಾದ ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	55	05–00
33	ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	56/1	00–20
34	ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	56/2	01–13
35		56/3	03–20
36	ಶ್ರೀ ವೆಂಕಟೇಶಪ್ಪ ಮತ್ತು ಇತರರ ಪರವಾಗಿ ಜಿಪಿಎದಾರರಾದ ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	57	05–11
37	ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	58	02–04
38	ಶ್ರೀ ಕಾರ್ತಿಕ್ ಬೊಲ್ಲಿನೇನಿ ಇವರ ಪರವಾಗಿ ಜಿಪಿಎದಾರರಾದ ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	59	04–03
39	ಶ್ರೀಮತಿ ಅರುಣಾ ಕುಮಾರಿ ಮತ್ತು ಶ್ರೀರಮ್ಯ	60/1	01–08 1/2
40	ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	60/2	00–12 1/2
41		60/3	00–12 1/2
42		60/4	00–12 1/2
43		60/5	00–12 1/2
44	ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	60/6	01–10
45	ಶ್ರೀ ವೈ. ಶ್ರೀನಿವಾಸರೆಡ್ಡಿ ಇವರ ಪರವಾಗಿ ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	60/7	01–08 1/2
46	ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	61/1	00–05 3/4
47		61/4	00–20 1/2
48		61/6	00–13 1/4
49		62/1	00–04 1/2
50		62/3	00–35
51	ಶ್ರೀ ಮುನಿಯಪ್ಪ ಇವರ ಪರವಾಗಿ ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	63	01–39
52	ಶ್ರೀ ಸಿರಾಜ್ ಖಾನ್ ಮತ್ತು ಇತರರು ಇವರ ಪರವಾಗಿ ಶ್ರೀ ಜಿ. ಮಧುಸೂಧನ್ ಬಿನ್ ಲೇಟ್ ಸತ್ತಯ್ಯ	64	02–00
53	ಶ್ರೀಮತಿ ಮುನಿಯಕ್ಕಯ್ಯಮ್ಮ ಕೋಂ ಲೇಟ್ ಉತ್ತನಳ್ಳಪ್ಪ	65	02–00
54	ಶ್ರೀ ಮೋಟಪ್ಪ ಬಿನ್ ಲೇಟ್ ಗಂಗಪ್ಪ ಉ ನಲ್ಲೋಡು	77/1	01–00
55	ಶ್ರೀ ಅಶ್ರಫ್‌ವುಲ್ಲಾ ಬೇಗ್ ಬಿನ್ ಸಮೀವುಲ್ಲಾ ಬೇಗ್	77/2	00–27
56	ಶ್ರೀ ಕೆ. ಗೋಪಾಲಪ್ಪ ಇವರ ಪರವಾಗಿ ಜಿಪಿಎದಾರರಾದ ಮೆ॥ ಸುಮಧುರ ಅರ್ಬನ್ ಎಸ್ಟೇಟ್ ಪ್ರೈ ಲಿ.,	77/3	02–31
57	ಶ್ರೀ ಸುಬ್ರಮಣ್ಯ ಇವರ ಪರವಾಗಿ ಜಿಪಿಎದಾರರಾದ ಶ್ರೀ ವೆಂಕಟಕೃಷ್ಣಾ ರೆಡ್ಡಿ	78	01–10 1/2
58		79	02–00
		ಒಟ್ಟು	85–20 1/2

ಷರಾ:– ಪ್ರಶ್ನಿತ ಜಮೀನುಗಳು ರಾಜ್ಯ ಹೆದ್ದಾರಿ ಸಂಖ್ಯೆ: 82 ಕ್ಕೆ ಹೊಂದಿಕೊಂಡಿದ್ದು, ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಾಣಿಜ್ಯ / ಕೈಗಾರಿಕಾ ಬೆಳವಣಿಗೆಗಳು ಬಂದಿದ್ದು/ಬರುತ್ತಲಿರುತ್ತವೆ. "ಉದ್ದೇಶಿತ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಾಣಿಜ್ಯ ಉಪಯೋಗದ ವೇರ್‌ಹೌಸ್ ಅನ್ನು ನಿರ್ಮಾಣ ಮಾಡಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಉದ್ಯೋಗಾವಕಾಶಗಳು ದೊರೆಯುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ

ವಾಸಾಸಂಇ/ಉನಿಕ/ಬೆಂಗ್ರಾಜಿ/328/2021–22

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮುಳಬಾಗಿಲು

ಸಂಖ್ಯೆ: ಕೃಉಮಾಸ/ಮು/384/2021–22 ದಿನಾಂಕ: 17.12.2021

ಪ್ರಕಟಣೆ

ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಈ ಕೆಳಕಂಡ 24 ಸಂಖ್ಯೆ ನಿವೇಶನಗಳನ್ನು ಪ್ರತಿ ಚದರಡಿಗೆ ರೂ.400/– ದರದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ ನಿಯಮಗಳು 2004ರ ನಿಯಮ 3ರನ್ವಯ ಲೀಸ್–ಕಂ–ಸೇಲ್ ಆಧಾರದ ಮೇಲೆ ಲೈಸೆನ್ಸ್ ಪಡೆದ ಪೇಟೆಕಾರ್ಯಕರ್ತರಿಗೆ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ನಿವೇಶನ ಸಂಖ್ಯೆ	ಒಟ್ಟು ನಿವೇಶನಗಳು	ಅಳತೆ ಅಡಿಗಳಲ್ಲಿ	ಮೌಲ್ಯ (ತಲಾ)	ಶೇ.25ರಷ್ಟು ಆರಂಭಿಕ ಠೇವಣಿ
1	27ರಿಂದ 36 ಹಾಗೂ 51ರಿಂದ 56	16	30x50	6,00,000/–	1,50,000/– (ತಲಾ)
2	58ರಿಂದ 61 ಹಾಗೂ 70ರಿಂದ 73	8	50x100	20,00,000/–	5,00,000/– (ತಲಾ)

ಫಾರಂ ಶುಲ್ಕ ರೂ.500/– ಹಾಗೂ ನೋಂದಣಿ ಶುಲ್ಕ ರೂ.300/–ನ್ನು ನಗದಾಗಿ ಪಾವತಿಸಿ ನೋಂದಾಯಿಸಿ ಅರ್ಜಿ ನಮೂನೆ ಪಡೆಯಲು ಕೊನೆಯ ದಿನಾಂಕ: **04.01.2022, ಸಂಜೆ 4.30 ಗಂಟೆಯವರೆಗೆ.** ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಆರಂಭಿಕ ಠೇವಣಿಯ ಡಿ.ಡಿ.ಯೊಂದಿಗೆ ಸ್ವೀಕರಿಸುವ ದಿನಾಂಕ: **07.01.2022ರ ಸಂಜೆ 4.30 ಗಂಟೆಯವರೆಗೆ ಮಾತ್ರ.** ನಿಯಮ 17ರನ್ವಯ ನಿವೇಶನ ಸಂಖ್ಯೆ 28, 35, 55, 59 ಅನ್ನು ಪ.ಜಾತಿಯವರಿಗೆ, ನಿವೇಶನ ಸಂಖ್ಯೆ 32, 51 ಅನ್ನು ಪ.ಪಂಗಡದವರಿಗೆ, ನಿವೇಶನ ಸಂಖ್ಯೆ 31, 71 ಅನ್ನು ನೋಂದಾಯಿತ ರೈತ ಉತ್ಪಾದಕ ಸಂಘದವರಿಗೆ ಮೀಸಲಿರಿಸಿದೆ. ಸಂಬಂಧಿಸಿದವರು ಅಧಿಕೃತ ಪ್ರಮಾಣ ಪತ್ರಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಮತ್ತು ಷರತ್ತುಗಳನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳತಕ್ಕದ್ದು.

ಸಹಿ/– (ಕಿರಣ್ ಎನ್) ಕಾರ್ಯದರ್ಶಿ (ಪ್ರ), ಕೃ.ಉ.ಮಾ.ಸ., ಮುಳಬಾಗಿಲು

ಸಹಿ/– (ಎಂ. ಜಯರಾಮರೆಡ್ಡಿ) ಅಧ್ಯಕ್ಷರು, ಕೃ.ಉ.ಮಾ.ಸ., ಮುಳಬಾಗಿಲು

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 275/ಎಂಸಿಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪಟ್ಟಣ ಪಂಚಾಯಿತಿ, ಹಾರೋಹಳ್ಳಿ

ಸಂಖ್ಯೆ: ಪಪಹಾ/ತಾಂ.ಶಾ/ಟೆಂ/15/2021–22 ದಿನಾಂಕ: 16–12–2021

ಟೆಂಡರ್ ಪ್ರಕಟಣೆ

ಹಾರೋಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಿವಿಧ ಪ್ರದೇಶಗಳಲ್ಲಿ 2021–22ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ನಿಧಿ ಹಾಗೂ ಸ್ವಂತ ನಿಧಿಯಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಂಬಂಧಪಟ್ಟ ಟೆಂಡರ್ ಡಾಕ್ಯೂಮೆಂಟ್‌ನ ಷರತ್ತು ಹಾಗೂ ಸೂಚನೆಗೊಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿ ವಿವರ ಹಾಗೂ ಟೆಂಡರ್ ಫಾರಂ ಶುಲ್ಕದ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಇ.ಎಂ.ಡಿ ಶುಲ್ಕಕ್ಕೆ ಸಂಬಂಧಪಟ್ಟ ಫಾರಂನಲ್ಲಿ ದೃಢೀಕರಿಸಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಕ್ರ.ಸಂ	ಇಂಡೆಂಟ್ ನಂಬರ್ ಹಾಗೂ ಕಾಮಗಾರಿ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ವರ್ಗ
01	DMA/2021-22/OW/WORK_INDENT123393	49.99	ಸಾಮಾನ್ಯ
02	DMA/2021-22/OW/WORK INDENT123392	44.40	ಸಾಮಾನ್ಯ
03	DMA/2021-22/OW/WORK INDENT123390	49.90	ಪ.ಜಾ
04	DMA/2021-22/OW/WORK INDENT123313	49.85	ಸಾಮಾನ್ಯ
05	DMA/2021-22/OW/WORK INDENT123312	49.98	ಸಾಮಾನ್ಯ
06	DMA/2021-22/OW/WORK INDENT123306	3.00	ಪ.ಪಂ
07	DMA/2021-22/OW/WORK INDENT123302	12.12	ಪ.ಜಾ
08	DMA/2021-22/OW/WORK INDENT123283	8.00	ಸಾಮಾನ್ಯ
09	DMA/2021-22/OW/WORK INDENT123282	14.99	ಸಾಮಾನ್ಯ
10	DMA/2021-22/OW/WORK INDENT123614	2.89	ಸಾಮಾನ್ಯ
11	DMA/2021-22/RD/WORK_INDENT123622	1.30	ಸಾಮಾನ್ಯ

ಟೆಂಡರ್ ದಿನಾಂಕದ ವಿವರಗಳು ಹಾಗೂ ಇತರೆ ಮಾಹಿತಿಗಳು ಕೆಳಕಂಡಂತಿವೆ.

01	ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕಾದ ದಿನಾಂಕ	16–12–2021
02	ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ	01–01–2022
03	ಟೆಂಡರ್‌ಗಳನ್ನು ತೆರೆಯುವ ದಿನಾಂಕ	03–01–2022

ಹೆಚ್ಚಿನ ವಿವರಗಳನ್ನು ಕಛೇರಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದ್ದು ಹಾಗೂ ಯಾವುದೇ ದಿನಾಂಕಗಳಲ್ಲಿನ ಮುಂದುಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಡೆಯತಕ್ಕದ್ದು ಯಾವುದೇ ವಾರ್ತಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯಿತಿ, ಹಾರೋಹಳ್ಳಿ

ವಾಸಾಸಂಇ/ರಾನ/ಬ್ರಾಂಚ್/361/2021–22

ಸಹಿ/– ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ, ಹಾರೋಹಳ್ಳಿ



ಕಾರ್ಯಕ್ರಮದಲ್ಲಿ 'ಫರೋಸ್ ಇನ್ ಎ ಫೀಲ್ಡ್' ಕೃತಿಯನ್ನು ಎಚ್‌ಡಿ. ದೇವೇಗೌಡರು, ಪತ್ನಿ ಚೆನ್ನಮ್ಮ ಅವರಿಗೆ ನೀಡಿದರು. ಪತ್ರಕರ್ತ ಸುಗತ ಶ್ರೀನಿವಾಸರಾಜು ಇದ್ದರು ಪ್ರಜಾವಾಣಿ ಚಿತ್ರ

'ಫರೋಸ್ ಇನ್ ಎ ಫೀಲ್ಡ್' ಕೃತಿ ಲೋಕಾರ್ಪಣೆ

'ದೇವೇಗೌಡರು ಪರ್ಸೆಂಟೇಜ್ ರಾಜಕಾರಣಿ ಅಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿರಂತರವಾಗಿ ಹೋರಾಟದ ಬದುಕು ಸಾಗಿಸಿರುವ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ಎಂದಿಗೂ ಪರ್ಸೆಂಟೇಜ್ ರಾಜಕಾರಣ ಮಾಡಲಿಲ್ಲ' ಎಂದು ಕಾಂಗ್ರೆಸ್ ಮುಖಂಡ ಬಿ.ಎಲ್. ಶಂಕರ್ ಹೇಳಿದರು.

ನಗರದಲ್ಲಿ ಸೋಮವಾರ ನಡೆದ, ದೇವೇಗೌಡರ ಜೀವನ ಚರಿತ್ರೆ ಕುರಿತಾದ 'ಫರೋಸ್ ಇನ್ ಎ ಫೀಲ್ಡ್' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಇಂದು ಪರ್ಸೆಂಟೇಜ್ ಬಗ್ಗೆ ಅತಿ ಹೆಚ್ಚು ಚರ್ಚೆಗಳು ನಡೆಯುತ್ತಿವೆ. ಒಬ್ಬ ರಾಜಕಾರಣಿಯ ಬದುಕನ್ನು ಪರ್ಸೆಂಟೇಜ್‌ನಲ್ಲೇ ಅಳೆಯಲಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ದೇವೇಗೌಡರು ವಿಭಿನ್ನ ರಾಜಕಾರಣಿಯಾಗಿ ನಿಲ್ಲುತ್ತಾರೆ' ಎಂದರು.

'ಅಂತರ್ಮುಖಿಯೂ ಆಗಿರುವ ದೇವೇಗೌಡರು ಅನೇಕ ನೋವುಗಳನ್ನು ನುಂಗಿಕೊಂಡಿದ್ದಾರೆ. ದೇಶದ ರಾಜಕಾರಣದಲ್ಲಿ ಅಪರೂಪದ ಮತ್ತು ಬದ್ಧತೆವುಳ್ಳ ವ್ಯಕ್ತಿ. ಅವರನ್ನು ನಿರ್ಲಕ್ಷಿಸಿ ಕರ್ನಾಟಕ ರಾಜಕಾರಣವನ್ನು ವಿಶ್ಲೇಷಣೆ ಮಾಡಲು ಸಾಧ್ಯವಿಲ್ಲ. ಅವರನ್ನು ಇಷ್ಟಪಡುವವರಷ್ಟೇ ಸಂಖ್ಯೆಯಲ್ಲಿ ವಿರೋಧಿಗಳೂ ಇದ್ದಾರೆ' ಎಂದರು.

ವರ್ಚುವಲ್ ವ್ಯವಸ್ಥೆ ಮೂಲಕ ಕೃತಿ ಬಿಡುಗಡೆ ಮಾಡಿದ ಸುಪ್ರೀಂ ಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, 'ದೇವೇಗೌಡರು ಸುದೀರ್ಘ ಅವಧಿಯವರೆಗೆ ರಾಜಕೀಯದಲ್ಲಿದ್ದರೂ ಅತ್ಯಂತ ಕಡಿಮೆ ಅವಧಿಗೆ ಅಧಿಕಾರದಲ್ಲಿದ್ದರು. ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬದ್ಧರಾಗಿದ್ದರು' ಎಂದರು. ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, 'ರಾಜಕಾರಣಿಗಳ ಜೀವನ ಚರಿತ್ರೆ ಬರೆಯುವವರಿಗೆ ಈ ಕೃತಿ ಮಾದರಿ' ಎಂದರು.

ಕೇಂದ್ರ ಸರ್ಕಾರದ ಮಾಜಿ ಕಾರ್ಯದರ್ಶಿ ಎಸ್.ಎಸ್. ಮೀನಾಕ್ಷಿಸುಂದರಂ, 'ಅಧಿಕಾರಿಗಳ ಮೇಲೆ ದೇವೇಗೌಡರು ವಿಶ್ವಾಸವಿಡುತ್ತಿದ್ದರು. ದೇವರು ನಮ್ಮನ್ನು ದೊಡ್ಡ ಜಾಗದಲ್ಲಿ ಇಟ್ಟಿದ್ದಾನೆ. ನಾವು ಸಣ್ಣತನ ತೋರಬಾರದು ಎನ್ನುತ್ತಿದ್ದರು' ಎಂದು ದೇವೇಗೌಡರ ಜತೆಗಿನ ಒಡನಾಟವನ್ನು ನೆನಪಿಸಿಕೊಂಡರು.

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಕೃತಿ ರಚಿಸಿರುವ ಪತ್ರಕರ್ತ ಸುಗತ ಶ್ರೀನಿವಾಸರಾಜು, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಇದ್ದರು.

ಸಿಕೆಪಿಯಲ್ಲಿ ಅವ್ಯವಹಾರ: ಕ್ರಮಕ್ಕೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರಕಲಾ ಪರಿಷತ್‌ನಲ್ಲಿ (ಸಿಕೆಪಿ) 2007–2009ರ ಅವಧಿಯಲ್ಲಿ ನಡೆದಿರುವ ಆರ್ಥಿಕ ಅವ್ಯವಹಾರಗಳ ಕುರಿತಂತೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಜಿಲ್ಲಾ ನೋಂದಣಾಧಿಕಾರಿ ಸಲ್ಲಿಸಿರುವ ವರದಿಯನ್ನು ಮೂರು ತಿಂಗಳ ಒಳಗಾಗಿ ಜಾರಿಗೊಳಿಸಿ' ಎಂದು ಹೈಕೋರ್ಟ್, ಸಹಕಾರ ಸಂಘಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ನಿರ್ದೇಶಿಸಿದೆ.

ಈ ಕುರಿತಂತೆ ಡಾ.ಟಿ.ಎನ್. ಲಕ್ಷ್ಮೀಪತಿ ಬಾಬು ಹಾಗೂ ಟಿ.ಚಂದ್ರಶೇಖರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಪಿ.ಪ್ರಸನ್ನಕುಮಾರ್, 'ಸಿಕೆಪಿ ಅಧ್ಯಕ್ಷ ಟಿ.ಪ್ರಭಾಕರ ಹಾಗೂ ಕಾರ್ಯದರ್ಶಿ ಎಂ.ಜೆ.ಕಮಲಾಕ್ಷಿ 2007ರಿಂದ 2009ರ ತಮ್ಮ ಅಧಿಕಾರಾವಧಿಯಲ್ಲಿ ವ್ಯಾಪಕ ಆರ್ಥಿಕ ಅವ್ಯವಹಾರ ನಡೆಸಿದ್ದಾರೆ ಎಂದು ಆರೋಪಿಸಿ ಎಂದು ಕಾರ್ಯಕಾರಿ ಸಮಿತಿ ಸದಸ್ಯರೂ ಆದ ಅಂತರರಾಷ್ಟ್ರೀಯ ಖ್ಯಾತಿಯ ಕಲಾವಿದ ಬಾಬು ಈಶ್ವರ ಪ್ರಸಾದ್ ಮತ್ತು ಎಸ್.ಗೋಪಿನಾಥ್ ಸಹಕಾರ ಸಂಘಗಳ ನೋಂದಾಣಾಧಿಕಾರಿಗೆ ದೂರು ನೀಡಿದ್ದರು' ಎಂಬುದನ್ನು ನ್ಯಾಯಪೀಠಕ್ಕೆ ವಿವರಿಸಿದರು.

'ದೂರಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ್ದ ಜಿಲ್ಲಾ ನೋಂದಣಾಧಿಕಾರಿ 2015ರ ಅಕ್ಟೋಬರ್ 21ರಂದು ಸರ್ಕಾರಕ್ಕೆ ವರದಿ ನೀಡಿ ಒಟ್ಟು ₹ 60,62,648 ಮೊತ್ತದ ಆರ್ಥಿಕ ಅವ್ಯವಹಾರ ನಡೆದಿದೆ ಎಂಬುದನ್ನು ಪತ್ತೆ ಹಚ್ಚಿರುತ್ತಾರೆ. ಆದರೆ, ಸರ್ಕಾರ ರಾಜಕೀಯ ಒತ್ತಡಗಳಿಗೆ ಮಣಿದು ತಪ್ಪಿತಸ್ಥರ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಪ್ರಧಾನ ಕಾರ್ಯದರ್ಶಿ ಮೂರು ತಿಂಗಳ ಒಳಗಾಗಿ ವರದಿ ಜಾರಿಗೊಳಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದೆ.



ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಮೈಸೂರು ಬ್ಯಾಂಕ್ ವೃತ್ತದ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಬೈರತಿ ರಾಜೀನಾಮೆಗೆ ಎಎಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೂಹಗರಣದ ಆರೋಪ ಎದುರಿಸುತ್ತಿರುವ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜು ತಕ್ಷಣವೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು' ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆಗ್ರಹಿಸಿದೆ.

ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ಪಕ್ಷದ ಕಾರ್ಯಕರ್ತರು ಬೈರತಿ ಬಸವರಾಜು ವಿರುದ್ಧ ಘೋಷಣೆಗಳನ್ನು ಕೂಗಿದರು.

ಎಎಪಿ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ, '35 ಎಕರೆ ಜಮೀನು ಕಬಳಿಕೆ ಮಾಡಿರುವ ಪ್ರಕರಣದಲ್ಲಿ ಬೈರತಿ ಅವರಿಗೆ ನಗರದ 42ನೇ ಎಸಿಎಂಎಂ ನ್ಯಾಯಾಲಯವು ನ. 25ರಂದೇ ಸಮನ್ಸ್ ಜಾರಿಗೊಳಿಸಿದೆ. ಕ್ರಿಮಿನಲ್ ಮೊಕದ್ದಮೆ ದಾಖಲಿಸಿಕೊಂಡು ವಿಚಾರಣೆ ನಡೆಸುವಂತೆ ಪೊಲೀಸರಿಗೆ ಸೂಚಿಸಿದೆ. ಬೈರತಿ ವಿರುದ್ಧ ನಕಲಿ ದಾಖಲೆ ಸೃಷ್ಟಿ, ವಂಚನೆ ಸೇರಿದಂತೆ ಹಲವು ಗಂಭೀರ ಆರೋಪಗಳೂ ಇವೆ. ಹೀಗಾಗಿ ಸಚಿವ ಸ್ಥಾನದಲ್ಲಿ ಮುಂದುವರಿಯಲು ಅವರು ಯೋಗ್ಯರಲ್ಲ' ಎಂದು ಹೇಳಿದರು.

ನಗರ ಘಟಕದ ಉಪಾಧ್ಯಕ್ಷ ಬಿ.ಟಿ. ನಾಗಣ್ಣ, 'ಬೈರತಿ ಅವರು ಸಚಿವ ಸ್ಥಾನದಲ್ಲಿ ಮುಂದುವರಿದರೆ ತಮ್ಮ ಪ್ರಭಾವ ಬಳಸಿ ತನಿಖೆಯ ಹಾದಿ ತಪ್ಪಿಸಬಹುದು. ಹೀಗಾಗಿ ಅವರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜೀನಾಮೆ ಪಡೆಯಬೇಕು' ಎಂದು ಒತ್ತಾಯಿಸಿದರು.

ನಗರ ಘಟಕದ ಉಪಾಧ್ಯಕ್ಷ ಸುರೇಶ್ ರಾಥೋಡ್, 'ಇದು ಭ್ರಷ್ಟ ಶಾಸಕರನ್ನು ಖರೀದಿಸಿ ರಚನೆಗೊಂಡ ಸರ್ಕಾರ. ಅಧಿಕಾರದಲ್ಲಿದ್ದಷ್ಟು ದಿನ ಲೂಟಿ ಮಾಡುವುದೇ ಅವರ ಧ್ಯೇಯ. ಭ್ರಷ್ಟರಿಗೇ ಸಚಿವ ಸಂಪುಟದಲ್ಲಿ ಪ್ರಮುಖ ಖಾತೆಗಳನ್ನು ನೀಡಲಾಗಿದೆ' ಎಂದು ಆರೋಪಿಸಿದರು.

ಮುಖಂಡರಾದ ಸುಹಾಸಿನಿ, ಜಗದೀಶ್ ವಿ.ಸದಂ, ಕೇಶವ್ ಕುಮಾರ್, ರಾಜಶೇಖರ್ ದೊಡ್ಡಣ್ಣ, ಸತೀಶ್ ಗೌಡ, ಅಶೋಕ್ ಮೃತ್ಯುಂಜಯ, ಪದ್ಮಾ ಗಿರೀಶ್, ಉಷಾ ಮೋಹನ್, ಸುಮನ್ ಪ್ರಶಾಂತ್, ಜಗದೀಶ್ ಚಂದ್ರ ಹಾಗೂ ಗೋಪಿನಾಥ್ ಇದ್ದರು.

ಪರಿಷ್ಕೃತ ನಗರ ಮಹಾಯೋಜನೆ ಇಂಗ್ಲಿಷ್‌ನಲ್ಲಿ ತಯಾರಿಸುವಂತೆ ಷರತ್ತು

ರಾಜಧಾನಿಯ ಭವಿಷ್ಯ ನಿರ್ಧರಿಸುವ ಯೋಜನೆಯೇ ಕನ್ನಡದಲ್ಲಿ ಇರುವುದಿಲ್ಲ!

• ಪ್ರವೀಣ್‌ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಒಂದೆಡೆ ಸರ್ಕಾರ ಆಡಳಿತದಲ್ಲಿ ಕನ್ನಡ ಕಡ್ಡಾಯ, ಕನ್ನಡ ಕಾಯಕ ವರ್ಷ ಎಂದು ಘೋಷಣೆ ಮಾಡುತ್ತಿದೆ. ಇನ್ನೊಂದೆಡೆ ರಾಜ್ಯದ ರಾಜಧಾನಿಯ ಭವಿಷ್ಯದ ಬೆಳವಣಿಗೆಯನ್ನು ನಿರ್ಧರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ತಯಾರಿಸುತ್ತಿರುವ 'ಪರಿಷ್ಕೃತ ನಗರ ಮಹಾ ಯೋಜನೆ'ಯ (ಆರ್‌ಎಂಪಿ) ಕರಡಿನಲ್ಲಿ ಕನ್ನಡಕ್ಕೆ ಅವಕಾಶವೇ ಇಲ್ಲ!

2041ರ ವರೆಗೆ ನಗರದ ಬೆಳವಣಿಗೆ ಯಾವ ದಿಸೆಯಲ್ಲಿ ಸಾಗಬೇಕು ಎಂಬ ರೂಪರೇಷೆಗಳನ್ನು ನಿರ್ಧರಿಸಲು ಬಿಡಿಎ ಆರ್‌ಎಂಪಿಯನ್ನು ಸಿದ್ಧಪಡಿಸುವ ಸಲಹಾ ಸಂಸ್ಥೆಯ ಆಯ್ಕೆಗೆ ಟೆಂಡರ್ ಆಹ್ವಾನಿಸಿದೆ. ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನ್ವಯವಾಗುವ ಈ ಆರ್‌ಎಂಪಿಯ ಕರಡು ಪ್ರಸ್ತಾವವು ಇಂಗ್ಲಿಷ್‌ನಲ್ಲೇ ಇರಬೇಕು ಎಂದು ಬಿಡಿಎ ಷರತ್ತು ವಿಧಿಸಿದೆ.

ಪ್ರಸ್ತಾವ ಸಿದ್ಧಪಡಿಸಲು ಆಯ್ಕೆಯಾಗುವ ಸಂಸ್ಥೆಯು 18 ಮಂದಿಯ ತಂಡವನ್ನು ರಚಿಸಬೇಕು. ಅದರಲ್ಲಿ ಒಬ್ಬ ಮುಖ್ಯಸ್ಥ, ನಾಲ್ವರು ನಗರ ಯೋಜನಾ ತಜ್ಞರು, ಇಬ್ಬರು ಸಂಚಾರ ಯೋಜನಾ ತಜ್ಞರು ಇರಬೇಕು. ಮೂಲಸೌಕರ್ಯ ತಜ್ಞ, ನಗರ ಯೋಜಕ, ಜಿಐಎಸ್ ತಜ್ಞರು, ಸಿವಿಲ್ ಎಂಜಿನಿಯರ್, ಸಾಮಾಜಿಕ–ಆರ್ಥಿಕ ತಜ್ಞ, ಪರಿಸರ ಎಂಜಿನಿಯರ್, ಆರ್ಥಿಕ ವಿಶ್ಲೇಷಕ, ವಾಸ್ತುಶಿಲ್ಪಿ, ಸರ್ವೆ ವ್ಯವಸ್ಥಾಪಕ, ಅಂಕಿ– ಅಂಶ ವಿಶ್ಲೇಷಕರನ್ನು ತಂಡವು ಒಳಗೊಂಡಿರಬೇಕು.

ಈ 18 ಮಂದಿಯಲ್ಲಿ ಕನಿಷ್ಠ ಪಕ್ಷ ಇಬ್ಬರಾದರೂ ಕನ್ನಡ ಭಾಷೆ ಬಲ್ಲವರಾಗಿರಬೇಕು ಎಂದೂ ಟೆಂಡರ್ ಷರತ್ತುಗಳಲ್ಲಿ ವಿವರಿಸಲಾಗಿದೆ. ನಗರ ಯೋಜನೆ ಕರಡನ್ನು ಕನ್ನಡದಲ್ಲೇ ಸಿದ್ಧಪಡಿಸಬೇಕು ಎಂದು ಷರತ್ತು ವಿಧಿಸಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

'ಸರ್ಕಾರ ಹೇಳುವುದು ಒಂದು ಮಾಡುವುದು ಮತ್ತೊಂದು. ರಾಜ್ಯದ ರಾಜಧಾನಿಯ ಮಟ್ಟಿಗೆ ಪರಿಷ್ಕೃತ ನಗರ ಮಹಾ ಯೋಜನೆ ಮಹತ್ವದ ದಾಖಲೆ. ಅದನ್ನೇ ಕನ್ನಡದಲ್ಲಿ ಸಿದ್ಧಪಡಿಸುವುದಿಲ್ಲ ಎಂದರೆ ಏನರ್ಥ. 18 ಮಂದಿ ತಂಡದಲ್ಲಿ ಇಬ್ಬರಿಗೆ ಮಾತ್ರ ಕನ್ನಡ ತಿಳಿದಿದ್ದರೆ ಸಾಕೇ. ಕನ್ನಡವೇ ಬಾರದವರು ತಯಾರಿಸುವ ಯೋಜನೆಯು ನಗರದ ಪಾಲಿಗೆ ಎಷ್ಟರಮಟ್ಟಿಗೆ ಜನಸ್ನೇಹಿ ಆಗಿರಬಹುದು' ಎಂದು ಬನವಾಸಿ ಬಳಗದ ಅರುಣ್ ಜಾವಗಲ್ ಪ್ರಶ್ನಿಸಿದರು.

ನಗರ ಮಹಾ ಯೋಜನೆಯ ನಗರದ ನೀತಿ ನಿಯಮಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಕನ್ನಡದಲ್ಲೇ ನೀಡದಿದ್ದರೆ ಬಹುಪಾಲು ಜನರಿಗೆ ಅರ್ಥವಾಗುವುದಿಲ್ಲ. ಇದನ್ನೇ ಇಂಗ್ಲಿಷ್‌ನಲ್ಲೇ ತಯಾರಿಸಬೇಕು ಎಂದು ಬಿಡಿಎ ಷರತ್ತು ವಿಧಿಸುತ್ತದೆ ಎಂದರೆ, ಅದು ಜನರಿಂದ ಏನನ್ನೋ ಮುಚ್ಚಿಡಲು ಪ್ರಯತ್ನಿಸುತ್ತಿದೆ ಎಂದರ್ಥ. ಇನ್ನೂ ಸಮಯ ಮಿಂಚಿಲ್ಲ. ಇನ್ನಾದರೂ ಈ ಪ್ರಸ್ತಾವನೆಯನ್ನು ಮೊದಲು ಕನ್ನಡದಲ್ಲೇ ತಯಾರಿಸಲು ಪ್ರಾಧಿಕಾರ ಕ್ರಮ ಕೈಗೊಳ್ಳಲಿ. ಬಳಿಕ ಬೇಕಾದರೆ ಇಂಗ್ಲಿಷ್‌ಗೆ ಭಾಷಾಂತರ ಮಾಡಲಿ' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ನಿವೇಶನದಾರರ ಮುಕ್ತ ವೇದಿಕೆಯ ಸೂರ್ಯಕಿರಣ್ ಒತ್ತಾಯಿಸಿದರು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಬಿಡಿಎ ನಗರ ಯೋಜನಾ ಸದಸ್ಯರು ಕರೆಗೆ ಲಭ್ಯವಾಗಲಿಲ್ಲ.

'ಅವಧಿ 2041ರವರೆಗೆ ವಿಸ್ತರಣೆ'

ಬಿಡಿಎ ಈ ಹಿಂದೆ 2031ರವರೆಗೆ ಪರಿಷ್ಕೃತ ನಗರ ಮಹಾಯೋಜನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿತ್ತು. ಆದರೆ, ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಆರ್‌ಎಂಪಿಯನ್ನು ಹೊಸತಾಗಿ ತಯಾರಿಸಲು ನಿರ್ಧರಿಸಿತು. 2020ರ ನ.2ರಂದು ಬಿಡಿಎ ಈ ಬಗ್ಗೆ ಆಸಕ್ತ ಸಂಸ್ಥೆಗಳಿಂದ ಪ್ರಸ್ತಾವಗಳನ್ನು ಆಹ್ವಾನಿಸಿತ್ತು. ಈಗ ಪರಿಷ್ಕೃತ ನಗರ ಮಹಾ ಯೋಜನೆ ಅವಧಿಯನ್ನು 2031ರ ಬದಲು 2041ರವರೆಗೆ ವಿಸ್ತರಿಸಲಾಗಿದೆ.

'ಈ ಹಿಂದೆ ಸಿದ್ಧಪಡಿಸಿದ ಆರ್‌ಎಂಪಿಯನ್ನು ಸಂಪೂರ್ಣ ತಿರಸ್ಕರಿಸಿ ಹೊಸತಾಗಿ ಆರ್‌ಎಂಪಿ ತಯಾರಿಸುವುದರಲ್ಲಿ ಅರ್ಥವಿಲ್ಲ. ಹಳೆಯ ಯೋಜನೆಗೆ ಅತ್ಯವಶ್ಯಕವಾಗಿರುವ ಕೆಲವು ಅಂಶಗಳನ್ನು ಸೇರಿಸಿದ್ದರೆ ಸಾಕಿತ್ತು. ಈ ಬಾರಿಯಾದರೂ ಬಿಡಿಎ ಪ್ರಜಾಸತ್ತಾತ್ಮಕವಾಗಿ ಯೋಜನೆ ಸಿದ್ಧಪಡಿಸಬೇಕು. ಮೂಲಸೌಕರ್ಯದ ಜೊತೆಗೆ ಜನರ ಆರ್ಥಿಕ– ಸಮಾಜಿಕ ಅಭಿವೃದ್ಧಿಯ ಬಗ್ಗೆಯೂ ಕಾಳಜಿವಹಿಸಬೇಕು' ಎಂದು ಜನಾಗ್ರಹ ಸಂಸ್ಥೆಯ ಶ್ರೀನಿವಾಸ ಅಲವಿಲ್ಲಿ ಅಭಿಪ್ರಾಯಪಟ್ಟರು.

ನಂದಿನಿ ತುಪ್ಪ ನಕಲು ತಡೆಯಲು 'ಕ್ಯೂಆರ್ ಕೋಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿ ತುಪ್ಪದ ಪ್ಯಾಕ್‌ಗಳಿಗೆ ಕ್ಯೂಆರ್ ಕೋಡ್ ಮತ್ತು ಹೊಲೊಗ್ರಾಂ ಅಳವಡಿಸಲು ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಉದ್ದೇಶಿಸಿದೆ.

ಕೆಎಂಎಫ್‌ನ ನಕಲಿ ತುಪ್ಪ ಮಾಡುವುದನ್ನು ತಡೆಯಲು ಈ ಕ್ರಮ ಕೈಗೊಳಲಾಗುತ್ತಿದೆ. ಈ ಕಾರ್ಯ ಪ್ರಗತಿಯಲ್ಲಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.16ರಂದು ಮೈಸೂರು ಬಳಿಯ ಹೊಸಹುಂಡಿ ಗ್ರಾಮದ ಗೋದಾಮಿನಲ್ಲಿ ನಂದಿನಿ ನಕಲಿ ತುಪ್ಪ ಪತ್ತೆಯಾಗಿತ್ತು. ಆಹಾರ ಸುರಕ್ಷತಾ ಪ್ರಾಧಿಕಾರದ ಅಧಿಕಾರಿಗಳು ನಂದಿನಿ ತುಪ್ಪ ಕಲಬೆರಕೆಗೆ ಬಳಸುತ್ತಿದ್ದ ಡಾಲ್ಡಾ, ಪಾಮ್ ಆಯಿಲ್, ಬಣ್ಣ, ಯಂತ್ರಗಳು ಸೇರಿದಂತೆ ವಿವಿಧ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಪ್ರಕರಣದ ತನಿಖೆ ಪ್ರಗತಿಯಲ್ಲಿದ್ದು, ಸಾರ್ವಜನಿಕರು ಆತಂಕ ಪಡಬೇಕಾಗಿಲ್ಲ ಎಂದು ತಿಳಿಸಿದ್ದಾರೆ.

ಈ ಪ್ರಕರಣದ ಬಳಿಕ, ರಾಜ್ಯದಾದ್ಯಂತ ಪ್ರತಿ ದಿನ ಮಾರುಕಟ್ಟೆಯಲ್ಲಿಲಭ್ಯ ಇರುವ ನಂದಿನಿ ತುಪ್ಪದ ಮಾದರಿಗಳನ್ನು ಪಡೆದು ಪರೀಕ್ಷೆಗಳನ್ನು ಕೈಗೊಳ್ಳಲಾಗುತ್ತಿದೆ. ಎಲ್ಲ ಒಕ್ಕೂಟಗಳಲ್ಲಿ ಜಾಗೃತ ದಳ ರಚಿಸಿ ಪರಿಶೀಲಿಸಲು ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.


ಗ್ರಾಹಕರಿಗೆ ಅನುಮಾನಬಂದರೆ ಕೆಎಂಎಫ್ ಕೇಂದ್ರ ಪ್ರಯೋಗಾಲಯದಲ್ಲಿ ಮಾದರಿ ನೀಡಿ ಖಚಿತಪಡಿಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಮಾಹಿತಿಗೆ ಟೋಲ್ ಫ್ರೀ ಸಂಖ್ಯೆ: 18004258030, ಇ–ಮೇಲ್: customercare.nandini@kmf.coop, ನಂದಿನಿ ನೆರವು:080–66660000

ಎರಡು ವಾರ ಕಾಲಾವಕಾಶ

ಬೆಂಗಳೂರು: ಸರ್ಕಾರಿ ಪ್ರಾಧಿಕಾರ ಮತ್ತು ನಿಗಮ ಮಂಡಳಿಗಳ ನೇಮಕಾತಿಗಳಲ್ಲಿ ತೃತೀಯ ಲಿಂಗಿಗಳಿಗೆ ಶೇ 1ರಷ್ಟು ಸಮತಲ ಮೀಸಲಾತಿ (ಹಾರಿಜಾಂಟಲ್ ರಿಸರ್ವೇಷನ್) ಕಲ್ಪಿಸುವ ದಿಸೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಹೈಕೋರ್ಟ್ ಎರಡು ವಾರಗಳ ಕಾಲಾವಕಾಶ ನೀಡಿದೆ.

ಈ ಬಗ್ಗೆ 'ಸಂಗಮ' ಸ್ವಯಂ ಸೇವಾ ಸಂಸ್ಥೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ 'ಜೀವಾ' ಸಂಸ್ಥೆಯ ಮಧ್ಯಂತರ ಸೇರ್ಪಡೆ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.



ಬೆಳ್ಳಿ ಮತ್ತು ಕಂಚನ್ನು ಗೆಲ್ಲುವ ಮೂಲಕ ಭಾರತೀಯ ಪುರುಷರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ಸ್‌ನಲ್ಲಿ ಉತ್ಕೃಷ್ಟ ಪ್ರದರ್ಶನ ನೀಡಿದ್ದಾರೆ.

ಬೆಂಗಳೂರಿನಲ್ಲಿ 26 ಮಳಿಗೆ ಆರಂಭಿಸಿದ ಫಿಪೋಲಾ

ಬೆಂಗಳೂರು: ಮಾಂಸ ಮತ್ತು ಮೀನುಗಳ ರಿಟೇಲ್ ಮಾರಾಟ ಬ್ರ್ಯಾಂಡ್ ಆಗಿರುವ ಫಿಪೋಲಾ ರಿಟೇಲ್ ಇಂಡಿಯಾ ಕಂಪನಿಯು ಬೆಂಗಳೂರಿನ ವಿವಿಧೆಡೆ ಒಟ್ಟು 26 ಮಳಿಗೆಗಳನ್ನು ತೆರೆದಿದೆ. 2022ರ ಮಾರ್ಚ್ ವೇಳೆಗೆ ದಕ್ಷಿಣ ಭಾರತದ ಉಳಿದ ಭಾಗಗಳಲ್ಲಿ 34ಕ್ಕೂ ಅಧಿಕ ಮಳಿಗೆಗಳನ್ನು ಪ್ರಾರಂಭಿಸಲು ಮತ್ತು ವ್ಯಾಪ್ತಿಯನ್ನು ಹೆಚ್ಚಿಸಲು ಉದ್ದೇಶಿಸಿದೆ.

'ಇಲ್ಲಿ. ಹಲವು ಬಗೆಯ ಮೀನು, ಏಡಿ ಜೊತೆಗೆ ವಿವಿಧ ಬಗೆಯ ಕೋಳಿ ಮತ್ತು ಮೇಕೆ ಮಾಂಸಗಳೂ ಸಿಗುತ್ತವೆ' ಎಂದು ಫಿಪೋಲಾದ ಸಹಸ್ಥಾಪಕ ಸುಶೀಲ್ ಕಣುಗೋಲು ಹೇಳಿದರು. ಪ್ರಸಕ್ತ ಹಣಕಾಸು ವರ್ಷದಲ್ಲಿ ₹ 140 ಕೋಟಿ, ಮುಂದಿನ ಹಣಕಾಸು ವರ್ಷದಲ್ಲಿ ₹ 428 ಕೋಟಿ ಆದಾಯ ಸಂಗ್ರಹಿಸುವ ಗುರಿ ಇದೆ ಎಂದು ಸಿಒಒ ಸಂಜಯ್ ಕುಮಾರ್ ದಾಸ್ ತಿಳಿಸಿದರು.

ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ: ಇಬ್ಬರು ಯುವಕರು ಸಾವು

ಬೆಂಗಳೂರು: ಬೈಕ್‌ಗಳ ನಡುವೆ ನಡೆದ ಮುಖಾಮುಖಿ ಡಿಕ್ಕಿಯಲ್ಲಿ ಕೇರಳ ಮೂಲಕ ಜಿತಿನ್ ಜೋಶ್ (25) ಹಾಗೂ ಸೋನು (30) ಎಂಬುವರು ಮೃತಪಟ್ಟಿದ್ದಾರೆ. ಈ ಸಂಬಂಧ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಹುಸ್ಕೂರಿನಲ್ಲಿ ನೆಲೆಸಿದ್ದ ಇವರಿಬ್ಬರು ಕಟ್ಟಡ ಹಾಗೂ ಕಚೇರಿಗಳಿಗೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವ ಕೆಲಸ ಮಾಡಿಕೊಂಡಿದ್ದರು. ಭಾನುವಾರ ಮಧ್ಯರಾತ್ರಿ ಇಬ್ಬರೂ ಹೀರೊ ಹೊಂಡಾ ಬೈಕ್‌ನಲ್ಲಿ ಸಾಗುತ್ತಿದ್ದಾಗ ಎದುರಿನಿಂದ ವೇಗವಾಗಿ ಬಂದ ಕೆ.ಟಿ.ಎಂ.ಡ್ಯೂಕ್ ಬೈಕ್ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಜಿತಿನ್ ಮತ್ತು ಸೋನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಅಸುನೀಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕೆ.ಟಿ.ಎಂ. ಬೈಕ್ ಸವಾರರಾದ ಶರತ್ ಆದಿತ್ಯ (24) ಮತ್ತು ಸಂತೋಷ್ (23) ಗಂಭೀರವಾಗಿ ಗಾಯಗೊಂಡಿದ್ದು ಅವರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರು ಗುಣಮುಖರಾದ ಬಳಿಕ ಹೇಳಿಕೆ ಪಡೆದು ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಹೇಳಿದ್ದಾರೆ.

ವಿವಿ ರಿಜಿಸ್ಟ್ರಾರ್ ನೇಮಕ ರದ್ದು ಕೋರಿದ ಅರ್ಜಿ ವಜಾ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಹುದ್ದೆಗೆ ಪ್ರೊ. ಕೊಟ್ರೇಶ್ ಅವರನ್ನು ನೇಮಕ ಮಾಡಿದ ಆದೇಶ ರದ್ದುಪಡಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಸಾಮಾಜಿಕ ಕಾರ್ಯಕರ್ತ ಮೊಹಮ್ಮದ್ ಆರೀಫ್ ಜಮೀಲ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ಸೇವಾ ವಿಷಯಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನಾಗಿ ಪರಿಗಣಿಸಲಾಗದು' ಎಂದು ಅಭಿಪ್ರಾಯಪಟ್ಟ ನ್ಯಾಯಪೀಠ ಅರ್ಜಿ ವಜಾಗೊಳಿಸಿತು.

ಕಾಮಗಾರಿ ಮಾರ್ಗಸೂಚಿ ಉಲ್ಲಂಘನೆ ● ಕೇಬಲ್ ಅಳವಡಿಕೆ ವೇಳೆ ಸುರಕ್ಷತೆ ಕಡೆಗಣನೆ

ಅಪಾಯ ಆಹ್ವಾನಿಸುತ್ತಿದೆ ನೆಲದೊಳಗಿನ ವಿದ್ಯುತ್ ಕೇಬಲ್

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕಂಬ ಕಂಬಗಳ ನಡುವೆ ಜೋತಾಡುತ್ತಿದ್ದ ವಿದ್ಯುತ್ ಕೇಬಲ್‌ಗಳು ಇನ್ನು ನೆಲದೊಳಗೆ ಸೇರಿಕೊಳ್ಳಲಿವೆ... ಇಡೀ ಬೆಂಗಳೂರು ಸಿಂಗಾಪುರದಂತಾಗಲಿದೆ... ಎಂದೆಲ್ಲಾ ಕನಸು ಬಿತ್ತಿದ್ದ ಬೆಸ್ಕಾಂ, ಕಳಪೆ ಕಾಮಗಾರಿ ಮೂಲಕ ಅಪಾಯವನ್ನು ತಂದೊಡ್ಡಿದೆಯೇ ಎಂಬ ಆತಂಕ ಜನರನ್ನು ಕಾಡುತ್ತಿದೆ.

ಬೆಂಗಳೂರು ನಗರದಲ್ಲಿ ಕಂಬಗಳಲ್ಲಿನ ತಂತಿಗಳ ಮೂಲಕ ವಿದ್ಯುತ್ ಸರಬರಾಜು ಮಾಡುವುದನ್ನು ತಪ್ಪಿಸಿ ನೆಲದೊಳಗೆ ಕೇಬಲ್‌ಗಳನ್ನು ತೂರಿಸುವ ಯೋಜನೆಯನ್ನು 2018–19ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರ ಘೋಷಣೆ ಮಾಡಿತ್ತು. ಬೆಸ್ಕಾಂ ವ್ಯಾಪ್ತಿಯಲ್ಲಿನ 63 ಉಪ ವಿಭಾಗಗಳ ಪೈಕಿ 52 ಉಪ ವಿಭಾಗಗಳಲ್ಲಿ 11 ಕೆ.ವಿ ವಿದ್ಯುತ್ ಮಾರ್ಗಗಳನ್ನು ನೆಲದೊಳಗೆ ಹುದುಗಿಸುವ ಕಾಮಗಾರಿಯನ್ನು ಬೆಸ್ಕಾಂ ಆರಂಭಿಸಿದೆ.

4 ಹಂತಗಳ, ₹5,031.65 ಕೋಟಿಯ ಈ ಯೋಜನೆಯನ್ನು 27 ಪ್ಯಾಕೇಜ್‌ಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಕೆಲವೆಡೆ ಕಾಮಗಾರಿ ಕಳಪೆಯಾಗಿದ್ದು, ಅಪಾಯಕ್ಕೆ ಆಹ್ವಾನ ನೀಡುವಂತಿದೆ ಎಂಬ ಆತಂಕವನ್ನು ಸ್ಥಳೀಯರು ವ್ಯಕ್ತಪಡಿಸುತ್ತಿದ್ದಾರೆ. ಬೆಸ್ಕಾಂ ಜಾಲಹಳ್ಳಿ ವಿಭಾಗದ ವಿದ್ಯಾರಣ್ಯಪುರ, ಕೊಡಿಗೇಹಳ್ಳಿ, ವಿರೂಪಾಕ್ಷಪುರ, ಎಂ.ಎಸ್. ಪಾಳ್ಯದಲ್ಲಿ ಕಾಮಗಾರಿ ಕಳಪೆಯಾಗಿದೆ ಎಂದು ಸ್ಥಳೀಯರು ಬೆಸ್ಕಾಂಗೆ ದೂರು ನೀಡಿದ್ದಾರೆ.

'ಮಾರ್ಗಸೂಚಿ ಪ್ರಕಾರ ಓಪನ್ ಟ್ರಂಚ್ ವಿಧಾನದಲ್ಲಿ 1 ಮೀಟರ್ ಆಳದ ಕಾಲುವೆ ಅಗೆದು 245 ಮಿಲಿ ಮೀಟರ್ ಮರಳು ತುಂಬಿಸಬೇಕು. ಅದರ ಮಧ್ಯದಲ್ಲಿ ಕೇಬಲ್ ಇರುವಂತೆ ನೋಡಿಕೊಳ್ಳಬೇಕು. ಕೇಬಲ್ ಇರುವ ಜಾಗದಲ್ಲಿ ಮೇಲ್ಭಾಗದಲ್ಲಿ ಟೈಲ್ಸ್‌ಗಳನ್ನು ಹೊದಿಸಬೇಕು. ಬಳಿಕ ಅದರ ಮೇಲೆ ಮಣ್ಣು ಮುಚ್ಚಬೇಕು. ಆದರೆ, ವಿದ್ಯಾರಣ್ಯಪುರದ ಕೆಲವೆಡೆ ಒಂದರಿಂದ ಒಂದೂವರೆ ಅಡಿಯಷ್ಟೇ ಆಳದಲ್ಲೇ ಕೇಬಲ್ ಅಳವಡಿಸಲಾಗಿದೆ' ಎಂದು ಸ್ಥಳೀಯರು ದೂರಿದ್ದಾರೆ.

'ಅಡ್ಡ ಕೊರೆಯುವಿಕೆ (ಎಚ್‌ಡಿಡಿ) ವಿಧಾನದ ಕಾಮಗಾರಿಯಲ್ಲೂ ಲೋಪಗಳಿವೆ. ಕನಿಷ್ಠ 0.9 ಮೀಟರ್ ಆಳದಲ್ಲಿ ಕೇಬಲ್ ಅಳವಡಿಕೆಯಾಗಬೇಕು. ಆದರೆ, ಈಗ ಅಳವಡಿಕೆ ಮಾಡಿರುವುದರಲ್ಲಿ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ವ್ಯತ್ಯಾಸ ಇದೆ. ಆದ್ದರಿಂದ ನಿರ್ವಹಣೆ ಕ್ಲಿಷ್ಟಕರವಾಗಲಿದೆ' ಎಂದು ಆರೋಪಿಸುತ್ತಾರೆ.

'ಎರಡು ಕೇಬಲ್ ಅಳವಡಿಸುವಾಗ ಎರಡರ ನಡುವೆ 330 ಮಿಲಿ ಮೀಟರ್ ಅಂತರ ಇರಬೇಕು. ಮೂರು ಕೇಬಲ್ ಅಳವಡಿಸುವಾಗ ತಲಾ 280 ಮಿಲಿ ಮೀಟರ್ ಅಂತರ ಇರಬೇಕು. ಕೇಬಲ್‌ಗಳ ನಡುವೆ ಮರಳು ಮತ್ತು ಟೈಲ್ಸ್ ಅಳವಡಿಸಬೇಕು ಎಂದು ಮಾರ್ಗಸೂಚಿ ಹೇಳುತ್ತದೆ. ಆದರೆ, ಕೇಬಲ್‌ಗಳನ್ನು ಒಟ್ಟೊಟ್ಟಿಗೆ ಜೋಡಿಸಿ ಭೂಮಿಯಲ್ಲಿ ಹೂಳಲಾಗುತ್ತಿದೆ. ಕಾರಣಾಂತರದಿಂದ ಒಂದು ಕೇಬಲ್ ಹಾಳಾದರೆ, ಜೊತೆಯಲ್ಲಿರುವ ಕೇಬಲ್ ಕೂಡ ಹಾಳಾಗುತ್ತದೆ. ಜೋಡಣೆ ಕೆಲಸಕ್ಕೆ ಮತ್ತೆ ಕನಿಷ್ಠ ₹50 ಸಾವಿರ ಖರ್ಚು ಮಾಡಬೇಕಾಗುವುದು' ಎಂದು ವಿದ್ಯುತ್ ಗುತ್ತಿಗೆದಾರರೊಬ್ಬರು ವಿವರಿಸಿದರು.

ವಿದ್ಯಾರಣ್ಯಪುರದಲ್ಲಿ ಅಳವಡಿಕೆಯಾಗಿರುವ ಕೇಬಲ್ ಕಾಮಗಾರಿಯನ್ನು 'ಪ್ರಜಾವಾಣಿ' ತಂಡ ವೀಕ್ಷಣೆ ಮಾಡಿದಾಗ ಬಾಕ್ಸ್ ಚರಂಡಿ ಹಾದು ಹೋಗಿರುವ ಕಡೆ ರಸ್ತೆಯ ಮೇಲೆಯೇ ಎಚ್‌ಟಿಯುಜಿ ಕೇಬಲ್ ಅಳವಡಿಕೆ ಮಾಡಿರುವುದು ಕಂಡು ಬಂತು. ಟ್ರಾನ್ಸ್‌ಫಾರ್ಮರ್‌ಗಳನ್ನು ಪಾದಚಾರಿ ಮಾರ್ಗಗಳ ಮೇಲೆ ಅಳವಡಿಸಬಾರದು ಎಂದು ಹೈಕೋರ್ಟ್ ಪದೇ ಪದೇ ಹೇಳುತ್ತಲೇ ಇದೆ. ಹೊಸದಾಗಿ ಅಳವಡಿಕೆ ಮಾಡುತ್ತಿರುವ ಆರ್‌ಎಂಯುಗಳನ್ನು(ರಿಂಗ್ ಮೈನ್ ಯುನಿಟ್) ಪಾದಚಾರಿ ಮಾರ್ಗದಲ್ಲೇ ಅಳವಡಿಕೆ ಮಾಡಿರುವುದು ಗೋಚರಿಸಿತು.

ತಪಾಸಣೆ ನಡೆಸಿ: ಸದಾನಂದ ಗೌಡ



ಕೇಬಲ್ ಅಳವಡಿಕೆ ಕಾಮಗಾರಿಯಲ್ಲಿನ ಲೋಪದ ಬಗ್ಗೆ ತಪಾಸಣೆ ನಡೆಸುವಂತೆ ಸಂಸದ ಡಿ.ವಿ. ಸದಾನಂದಗೌಡ ಅವರು ಇಂಧನ ಸಚಿವ ಸುನಿಲ್‌ಕುಮಾರ್ ಅವರಿಗೆ ಮತ್ತು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಅವರಿಗೆ ಪತ್ರ ಬರೆದಿದ್ದಾರೆ. ತಪಾಸಣೆ ನಡೆಸಿ ವರದಿ ಬರುವ ತನಕ ಗುತ್ತಿಗೆದಾರರಿಗೆ ಬಾಕಿ ಮೊತ್ತ ಪಾವತಿಸಬಾರದು ಎಂದು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ 6 ಸಾವಿರ ಕಿಲೋ ಮೀಟರ್‌ನಲ್ಲಿ ಕೇಬಲ್ ಅಳವಡಿಕೆಯಾಗುತ್ತಿದೆ. ಕೆಲ ಪ್ರದೇಶದಲ್ಲಿನ ಕಳಪೆ ಕಾಮಗಾರಿ ಬಗ್ಗೆ ದೂರು ಬಂದಿದೆ. ಯೋಜನಾ ನಿರ್ವಹಣಾ ಸಲಹೆಗಾರರಿಂದ(ಪಿಎಂಸಿ) ವರದಿ ಪಡೆಯಲಾಗುವುದು. ಲೋಪವಾಗಿದ್ದರೆ ಕ್ರಮ ಕೈಗೊಳ್ಳಲಾಗುವುದು

ರಾಜೇಂದ್ರ ಚೋಳನ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ

ಅಪಾಯ ಹೇಗೆ?

ರಸ್ತೆ ಬದಿಯಲ್ಲೇ ಕೇಬಲ್‌ಗಳನ್ನು ಅಳವಡಿಕೆ ಮಾಡಲಾಗುತ್ತಿದೆ. ಅದೇ ಮಾರ್ಗದಲ್ಲಿ ಹಲವು ನಾಗರಿಕ ಸೌಲಭ್ಯ ಒದಗಿಸುವ ಪೈಪ್‌ಲೈನ್‌ಗಳೂ ಹಾದು ಹೋಗಿವೆ. ಅವುಗಳ ದುರಸ್ತಿಗೆ ಮುಂದಾಗುವ ಕಾರ್ಮಿಕರು ಸಲಾಕೆಯಿಂದ ಒಮ್ಮೆ ಅಗೆದರೂ 11 ಕೆ.ವಿ ವಿದ್ಯುತ್ ಹಾದು ಹೋಗುತ್ತಿರುವ ಮಾರ್ಗದಿಂದ ವಿದ್ಯುತ್ ಪ್ರವಹಿಸಿ ಸಾವು ಸಂಭವಿಸುವ ಅಪಾಯ ಇದೆ ಎಂಬುದು ಸ್ಥಳೀಯರ ಆತಂಕ.



ಫಲಕಗಳನ್ನು ಅಳವಡಿಸಿಯೇ ಇಲ್ಲ

ಎಚ್‌ಟಿಯುಜಿ ಕೇಬಲ್ ಹಾದು ಹೋಗಿರುವ ಮಾರ್ಗದಲ್ಲಿ ಎಲ್ಲಿಯೂ ಸುರಕ್ಷತಾ ಫಲಕಗಳನ್ನು ಅಳವಡಿಸಿಯೇ ಇಲ್ಲ. ಈ ಕೇಬಲ್ ಅಳವಡಿಕೆಯ ಬಹುಪಾಲು ಜಾಗದಲ್ಲಿ ಅನಿಲ ಪೂರೈಕೆ ಕೊಳವೆ ಮಾರ್ಗ ಕೂಡ ಹಾದು ಹೋಗಿದೆ. ಮುಂದಿನ ದಿನಗಳಲ್ಲಿ ಭಾರಿ ಅನುಹುತ ಸಂಭವಿಸುವ ಸಾಧ್ಯತೆ ಇದೆ.

ಫಲಕ ಅಳವಡಿಕೆ ಮಾಡದಿದ್ದರೆ ಅದೇ ಜಾಗವನ್ನು ಬಿಬಿಎಂಪಿ ಅಥವಾ ಜಲ ಮಂಡಳಿಯಿಂದ ಕಾಮಗಾರಿ ಆರಂಭಿಸಿದರೆ 11 ಕೆ.ವಿ ವಿದ್ಯುತ್ ಇರುವ ಕೇಬಲ್‌ಗಳನ್ನು ಮೀಟಿ ಅಪಾಯಕ್ಕೆ ಸಿಲುಕುವ ಆತಂಕವೂ ಇದೆ ಎನ್ನುತ್ತಾರೆ ಸ್ಥಳೀಯರು.

ವಿದ್ಯಾರಣ್ಯಪುರದಲ್ಲಿ ನೆಲದ ಮೇಲೆ ಬಿದ್ದಿರುವ ವಿದ್ಯುತ್ ಕೇಬಲ್
ಪ್ರಜಾವಾಣಿ ಚಿತ್ರಗಳು
ಎಂ.ಎಸ್. ಮಂಜುನಾಥ್

ಸಚಿವರಿಗೆ ದೂರು



ಬಿ.ಮುನೇಗೌಡ

ಕಳಪೆ ಕಾಮಗಾರಿ ಮತ್ತು ಅದರಿಂದ ಎದುರಾಗಲಿರುವ ಸಮಸ್ಯೆ ಬಗ್ಗೆ ಕೊಡಿಗೇಹಳ್ಳಿಯ ಬಿ. ಮುನೇಗೌಡ ಅವರು ಇಂಧನ ಸಚಿವ ಸುನಿಲ್‌ಕುಮಾರ್ ಅವರಿಗೆ ದೂರು ನೀಡಿದ್ದಾರೆ.

'ಜಾಲಹಳ್ಳಿ ವಿಭಾಗದಲ್ಲಿ ಕಳಪೆ ಕಾಮಗಾರಿ ನಡೆಯುತ್ತಿರುವುದು ಉದಾಹರಣೆಯಷ್ಟೇ. ಇಡೀ ಬೆಂಗಳೂರಿನಲ್ಲಿ ಇದೇ ರೀತಿ ಕಾಮಗಾರಿ ನಡೆಯುತ್ತಿದೆ. ನೆಲದಡಿ ಕೇಬಲ್ ಅಳವಡಿಕೆ ಹೆಸರಿನಲ್ಲಿ ಲೂಟಿ ನಡೆಯುತ್ತಿದೆ' ಎಂದು ಅವರು ದೂರಿದರು.

ಎಲ್ಲಾ ವಿಭಾಗದ ಕೆಲಸವನ್ನು ಸಿಸಿಬಿ, ಸಿಐಡಿ ಮತ್ತು ಲೋಕಾಯುಕ್ತಕ್ಕೆ ವಹಿಸಿ ತನಿಖೆ ಮಾಡಬೇಕು. ಇಡೀ ಬೆಸ್ಕಾಂ ವ್ಯಾಪ್ತಿಯ ಪ್ರತಿಯೊಂದ ಕೆಲಸದ ಸ್ಥಳ ಪರಿಶೀಲನೆ ಮಾಡಿ ಗುಣಮಟ್ಟದ ಬಗ್ಗೆ ವರದಿ ಪಡೆಯುವ ತನಕ ಬಿಲ್‌ಗಳನ್ನು ತಡೆ ಹಿಡಿಯಬೇಕು ಎಂದು ಆಗ್ರಹಿಸಿದರು.

'ಜಾಲಹಳ್ಳಿ ವಿಭಾಗದ ಕಾಮಗಾರಿಯನ್ನು ಏಷಿಯನ್ ಫ್ಯಾಬ್ ಟೆಕ್ ಲಿಮಿಟೆಡ್ ಕಾಮಗಾರಿ ನಿರ್ವಹಿಸುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ₹1,848 ಕೋಟಿ ಮೊತ್ತದ ಗುತ್ತಿಗೆಯನ್ನು ಅದೇ ಕಂಪನಿಗೆ ನೀಡಲಾಗಿದೆ. ಬೆಂಗಳೂರಿನಲ್ಲಿ ಸಾವಿರಾರು ಜನ ವಿದ್ಯುತ್ ಗುತ್ತಿಗೆದಾರರಿದ್ದಾರೆ. ₹20 ಕೋಟಿ ಮೊತ್ತದ ಕಾಮಗಾರಿಗಳನ್ನು ಒಗ್ಗೂಡಿಸಿ ಒಬ್ಬರಿಗೇ ನೀಡಲಾಗಿದೆ. ಈ ಬಗ್ಗೆಯೂ ತನಿಖೆ ನಡೆಯಬೇಕು' ಎಂದು ಒತ್ತಾಯಿಸಿದರು.

ವಿಧಾನಸಭಾ ಚುನಾವಣೆಗೆ ಕೆಆರ್‌ಎಸ್ ತಯಾರಿ

50 ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆಗೆ ಈಗಿನಿಂದಲೇ ತಯಾರಿ ನಡೆಸಿರುವ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು (ಕೆಆರ್‌ಎಸ್) ವಿವಿಧ ಕ್ಷೇತ್ರಗಳಿಗೆ 50 ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ.

ಪ್ರೆಸ್‌ಕ್ಲಬ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಪಕ್ಷದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ, 'ಪಕ್ಷದ ಕಚೇರಿಯಲ್ಲಿ ಡಿಸೆಂಬರ್ 12ರವರೆಗೆ ಆಕಾಂಕ್ಷಿಗಳ ಸಂದರ್ಶನ ನಡೆಸಿದ್ದೇವೆ. 123 ಮಂದಿ ಅರ್ಜಿ ಸಲ್ಲಿಸಿದ್ದು, ಅವರಲ್ಲಿ 70 ಮಂದಿ ಸಂದರ್ಶನಕ್ಕೆ ಹಾಜರಾಗಿದ್ದರು. ಮೊದಲ ಹಂತದಲ್ಲಿ 50 ಸಂಭಾವ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ' ಎಂದು ತಿಳಿಸಿದರು.

'ಉಳಿದ ಕ್ಷೇತ್ರಗಳಿಗೆ ಇದೇ ರೀತಿ ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತೇವೆ. ಪಕ್ಷದಲ್ಲಿ ಚುನಾವಣೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದ್ದೇವೆ' ಎಂದರು.

'ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಜಾತಿ ಓಲೈಕೆ ಹಾಗೂ ಕುಟುಂಬ ರಾಜಕಾರಣಕ್ಕೆ ಜೋತು ಬಿದ್ದಿವೆ. ಇದಕ್ಕೆ ಪ್ರತಿಯಾಗಿ ಪ್ರಾಮಾಣಿಕ, ಜನಪರ ರಾಜಕಾರಣದಲ್ಲಿ ಸಕ್ರಿಯರಾಗುವ ಹಾಗೂ ಹಣ, ಮದ್ಯದಂತಹ ಆಮಿಷ ಒಡ್ಡದೆಯೇ ಚುನಾವಣೆಯಲ್ಲಿ ಸ್ಪರ್ಧಿಸಲು ಈ ಅಭ್ಯರ್ಥಿಗಳನ್ನು ಸಜ್ಜುಗೊಳಿಸುತ್ತೇವೆ. ಇದೇ ಕಾರಣಕ್ಕೆ ಸಾಕಷ್ಟು ಮುಂಚಿತವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದೇವೆ' ಎಂದೂ ತಿಳಿಸಿದರು.

ಬೆಂಗಳೂರು ಹಾಗೂ ಆಸುಪಾಸಿನ ಕ್ಷೇತ್ರಗಳ ಸಂಭಾವ್ಯ ಅಭ್ಯರ್ಥಿಗಳು: ಆರೋಗ್ಯ ಸ್ವಾಮಿ ಚಿನ್ನಪ್ಪ (ಕ್ಷೇತ್ರ- ಕೆ.ಆರ್.ಪುರ), ಎಲ್.ಜೀವನ್ (ಬಸವನಗುಡಿ), ರಘುಪತಿ ಭಟ್ (ಜಯನಗರ), ಶಿವನಂಜೇಗೌಡ (ಬೆಂಗಳೂರು ದಕ್ಷಿಣ), ಅನುರಾಜ್ (ಆನೇಕಲ್), ಸೊಣ್ಣಪ್ಪ ಗೌಡ (ಹೊಸಕೋಟೆ), ಶಿವಕುಮಾರ್ (ರಾಮನಗರ).



'ಐಎಲ್‌ಐ' ರೋಗಿಗಳಿಗೆ ಕೋವಿಡ್ ಪರೀಕ್ಷೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಮತ್ತು ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಎದುರಿಸುತ್ತಿರುವ ರೋಗಿಗಳಿಗೆ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡಬೇಕು ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ. ತ್ರಿಲೋಕ್ ಚಂದ್ರ ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿದ್ದಾರೆ.

ಕೋವಿಡ್ ಸೋಂಕು ನಿಯಂತ್ರಿಸುವ ಸಂಬಂಧ ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್‌ಗಳ ಅಸೋಸಿಯೇಷನ್ (ಫಾನಾ) ಪದಾಧಿಕಾರಿಗಳು ಮತ್ತು 100ಕ್ಕೂ ಹೆಚ್ಚು ಆಸ್ಪತ್ರೆಗಳ ವ್ಯವಸ್ಥಾಪಕರ ಜತೆ ಸೋಮವಾರ ನಡೆಸಿದ ಸಭೆಯಲ್ಲಿ ಈ ಸೂಚನೆ ನೀಡಿದರು.

ಖಾಸಗಿ ಆಸ್ಪತ್ರೆಗಳ ಹೊರ ರೋಗಿ ವಿಭಾಗಕ್ಕೆ (ಒಪಿಡಿ) ತಪಾಸಣೆಗೆ ಬರುವ 'ಐಎಲ್‌ಐ' ಮತ್ತು 'ಸಾರಿ' ರೋಗಿಗಳಿಗೆ ಪರೀಕ್ಷೆಯನ್ನು ಕಡ್ಡಾಯವಾಗಿ ಕೈಗೊಳ್ಳಬೇಕು ಎಂದು ತಿಳಿಸಿದರು.

ನಗರದಲ್ಲಿ ಕೋವಿಡ್ ಸೋಂಕು ಹರಡಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಆಸ್ಪತ್ರೆಗೆ ಬರುವ ಎಲ್ಲರೂ ಲಸಿಕೆ ಪಡೆದಿರುವುದನ್ನು ಖಾತರಿಪಡಿಸಿಕೊಳ್ಳಬೇಕು ಎಂದು ಹೇಳಿದರು.

ನಗರದಲ್ಲಿ ಸದ್ಯ ಕೋವಿಡ್ ಪ್ರಕರಣಗಳು ನಿಯಂತ್ರಣದಲ್ಲಿವೆ. ಸರ್ಕಾರದ ಹಿಂದಿನ ಅದೇಶದಂತೆ ಮುಂಜಾಗ್ರತಾ ಕ್ರಮವಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಸೋಂಕಿತರಿಗೆ ಚಿಕಿತ್ಸೆ ನೀಡುವ ಸಲುವಾಗಿ ಹಾಸಿಗೆಗಳನ್ನು ಮೀಸಲಿಡಲು ಸಿದ್ಧರಾಗಿರಬೇಕು. ಅಲ್ಲದೆ ಮಕ್ಕಳ ಚಿಕಿತ್ಸೆಗಾಗಿಯೂ ಪ್ರತ್ಯೇಕ ಹಾಸಿಗೆ ವ್ಯವಸ್ಥೆ ಮಾಡಿಕೊಂಡಿರಬೇಕು ಎಂದು ತಿಳಿಸಿದರು.

ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ಇದ್ದರು.

ನಗರದಲ್ಲಿ ಇಂದು

ಡಿಸೈನೂರು: ಒಳಾಂಗಣ ವಿನ್ಯಾಸ ಕುರಿತು ಸಂವಾದ-ಅರುಣ್ ಬಾಲನ್, ಆಯೋಜನೆ-ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಇಂಟೀರಿಯರ್ ಡಿಸೈನರ್ಸ್ (ಐಐಐಡಿ), ಸ್ಥಳ-ರಂಗೋಲಿ ಕೇಂದ್ರ, ಎಂ.ಜಿ.ರಸ್ತೆ, ಬೆಳಿಗ್ಗೆ 9ರಿಂದ

ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ಅಂತರರಾಷ್ಟ್ರೀಯ ಸಂಗೀತ ಉತ್ಸವ: ವಿಷ್ಣು ವೆಂಕಟೇಶ್ (ಬೆಳಿಗ್ಗೆ 9.15), ರೂಪಾ ಶ್ರೀಕಾಂತ್ (10.20ಕ್ಕೆ), ಕೃತಿಕಾ ಶ್ರೀನಿವಾಸನ್ (11.25), ಆರ್. ಪ್ರಿಯದರ್ಶಿನಿ (12.30), ಎಸ್. ಹಿರಣ್ಮಯೀ (2.30), ಅನುರಾಧಾ ಮಧುಸೂದನ್ (ಸಂಜೆ 4), ಜಯತೀರ್ಥ ಮೇವುಂಡಿ (ಸಂಜೆ 6.45) ಅವರಿಂದ ವಿಶೇಷ ಸಂಗೀತ ಕಾರ್ಯಕ್ರಮಗಳು, ಆಯೋಜನೆ- ಶ್ರೀರಾಮಸೇವಾ ಮಂಡಲಿ ಟ್ರಸ್ಟ್, ಸ್ಥಳ-ಬೆಂಗಳೂರು ಗಾಯನ ಸಮಾಜದ ಸಭಾಂಗಣ, ಕೆ.ಆರ್.ರಸ್ತೆ



ಜಯತೀರ್ಥ ಮೇವುಂಡಿ

ನಟ ಪುನೀತ್ ರಾಜ್‌ಕುಮಾರ್ ಪ್ರತಿರೂಪದ ಕೇಕ್ ಪ್ರದರ್ಶನ: ಆಯೋಜನೆ-ಶುಗರ್ ಸ್ಕಲ್ಪ್ಟ್, ಬೇಕಿಂಗ್ ಅಕಾಡೆಮಿ ಬೆಂಗಳೂರು, ಸ್ಥಳ- ಸೇಂಟ್ ಜೋಸೆಫ್ ಶಾಲೆಯ ಮೈದಾನ, ಬೆಳಿಗ್ಗೆ 11ರಿಂದ ರಾತ್ರಿ 9ರವರೆಗೆ (ಜ.2ರವರೆಗೆ ಪ್ರದರ್ಶನ ಇರಲಿದೆ)

ಪಂ.ಬಸವರಾಜ ರಾಜಗುರು ಶತಮಾನೋತ್ಸವ: ಉದ್ಘಾಟನೆ-ಗಾಯಕ ಗಣಪತಿ ಭಟ್ ಹಾಸಣಗಿ, ಅತಿಥಿ-ಶಿಕ್ಷಣ ತಜ್ಞ ಗುರುರಾಜ ಕರಜಗಿ, ಅಧ್ಯಕ್ಷತೆ-ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ, ಆಯೋಜನೆ- ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ-ನಯನ ಸಭಾಂಗಣ, ಕನ್ನಡ ಭವನ, ಸಂಜೆ 4.30



ಗುರುರಾಜ ಕರಜಗಿ

'ಸ್ಯಾಂಡ್ ಆಫ್ ಟೈಮ್'-ಮರಳು ಚಿತ್ರ ಕಲಾವಿದ ರಾಘವೇಂದ್ರ ಹೆಗಡೆ ಅವರ ಮರಳು ಚಿತ್ರ ಪ್ರದರ್ಶನ: ಅತಿಥಿಗಳು- ರಿಕ್ಕಿ ಕೇಜ್, ಕೆ.ಸಿ. ರಾಮಮೂರ್ತಿ, ಚಂದ್ರನಾಥ ಆಚಾರ್ಯ, ಸ್ಥಳ-ಕರ್ನಾಟಕ ಚಿತ್ರಕಲಾ ಪರಿಷತ್ತು, ಸಂಜೆ 4.30 (ಡಿ.27ರವರೆಗೆ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಪ್ರದರ್ಶನ ಇರಲಿದೆ)



ಸ್ಯಾಂಡ್ ಆಫ್ ಟೈಮ್–ಮರಳು ಚಿತ್ರ ಪ್ರದರ್ಶನ

ಮಾರ್ಗಶೀರ್ಷೋತ್ಸವ: ವಿಶಾಖಾ ಹರಿ ಮತ್ತು ತಂಡದಿಂದ ಹರಿಕಥೆ, ಆಯೋಜನೆ ಮತ್ತು ಸ್ಥಳ-ಸುರಭಾರತಿ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ವಾಟರ್ ಟ್ಯಾಂಕ್ ಹತ್ತಿರ, ಎಚ್‌ಆರ್‌ಬಿಆರ್ ಬಡಾವಣೆ, ಸಂಜೆ 6.30

ಮಹಿಳೆಗೆ ನಿಂದನೆ: ಆರ್‌ಟಿಐ ಕಾರ್ಯಕರ್ತ ಬಂಧನ

ಬೆಂಗಳೂರು: ಕೆಲಸಕ್ಕೆ ಅಡ್ಡಿಪಡಿಸುವ ಜೊತೆಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎನ್ನಲಾದ ಆರ್‌ಟಿಐ ಕಾರ್ಯಕರ್ತ ಕೃಷ್ಣಮೂರ್ತಿಗೌಡ ಎಂಬಾತನ ವಿರುದ್ಧ ಬಿಬಿಎಂಪಿಯ ಕತ್ರಿಗುಪ್ಪೆ ವಾರ್ಡ್-163ರ ಸಹಾಯಕ ಎಂಜಿನಿಯರ್ ಶ್ವೇತಾ ದೂರು ನೀಡಿದ್ದಾರೆ. ಆರೋಪಿಯನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ.

'18ರಂದು ಅಧಿಕಾರಿಯೊಬ್ಬರ ಜೊತೆ ಕೆಲಸದ ವಿಚಾರವಾಗಿ ಚರ್ಚೆ ನಡೆಸುತ್ತಿದ್ದ ವೇಳೆ ಆರೋಪಿ ಏಕಾಏಕಿ ಕೊಠಡಿಗೆ ನುಗ್ಗಿ ಇಬ್ಬರಿಗೂ ಬೆದರಿಕೆ ಹಾಕಿದ್ದ. ಕೆಲಸದಿಂದ ತೆಗೆಸುವುದಾಗಿಯೂ ಹೆದರಿಸಿದ್ದ ಎಂದು ದೂರಿನಲ್ಲಿ ವಿವರಿಸಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.







1. ಜಯ ಕರ್ನಾಟಕ ಸಂಘಟನೆಯ ಕಾರ್ಯಕರ್ತರನ್ನು ಪೊಲೀಸರು ತಡೆಯಲು ಮುಂದಾದರು 2. ಕರ್ನಾಟಕ ಪ್ರದೇಶ ಕುರುಬರ ಸಂಘದ ಸದಸ್ಯರು ಸಂಗೊಳ್ಳಿ ರಾಯಣ್ಣ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು 3. ವಾಟಾಳ್ ನಾಗರಾಜ್ ಹಾಗೂ ಸಾ.ರಾ. ಗೋವಿಂದು ನೇತೃತ್ವದಲ್ಲಿ ಕನ್ನಡಪರ ಸಂಘಟನೆಯ ಕಾರ್ಯಕರ್ತರು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಭಾವಚಿತ್ರಕ್ಕೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು–ಪ್ರಜಾವಾಣಿ ಚಿತ್ರಗಳು

ಮೈಸೂರು ಬ್ಯಾಂಕ್ ವೃತ್ತ, ಮೆಜೆಸ್ಟಿಕ್‌ನ ಸಂಗೊಳ್ಳಿ ರಾಯಣ್ಣ ಪ್ರತಿಮೆ ಬಳಿ ವಿವಿಧ ಕನ್ನಡಪರ ಸಂಘಟನೆಗಳಿಂದ ಪ್ರತಿಭಟನೆ

ಎಂಇಎಸ್ ನಿಷೇಧಕ್ಕೆ ಹೋರಾಟಗಾರರ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್)ಯನ್ನು ರಾಜ್ಯದಲ್ಲಿ ನಿಷೇಧಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೇಗೌಡ ಬಣ), ಜಯ ಕರ್ನಾಟಕ, ಕರ್ನಾಟಕ ಪ್ರದೇಶ ಕುರುಬರ ಸಂಘ ಸೇರಿದಂತೆ ವಿವಿಧ ಕನ್ನಡಪರ ಸಂಘಟನೆಗಳ ಸದಸ್ಯರು ಮೈಸೂರು ಬ್ಯಾಂಕ್ ವೃತ್ತ ಹಾಗೂ ಮೆಜೆಸ್ಟಿಕ್ ಬಳಿಯ ಸಂಗೊಳ್ಳಿ ರಾಯಣ್ಣ ಪ್ರತಿಮೆ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು.

‘ಬೆಳಗಾವಿಯಲ್ಲಿ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಪ್ರತಿಮೆ ಭಗ್ನಗೊಳಿಸಿದವರನ್ನು ಕೂಡಲೇ ಬಂಧಿಸಬೇಕು. ಎಂ.ಇ.ಎಸ್ ಚಟುವಟಿಕೆಗಳಿಗೆ ರಾಜ್ಯದಲ್ಲಿ ನಿಷೇಧ ಹೇರಬೇಕು. ಕನ್ನಡ ಧ್ವಜ ಸುಟ್ಟ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಭಾವಚಿತ್ರಕ್ಕೆ ಹಾಗೂ ಎಂಇಎಸ್ ಹಾಗೂ ಶಿವಸೇನಾ ಧ್ವಜಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

‘ಮಹಾರಾಷ್ಟ್ರ ಏಕೀಕರಣ ಸಂಘಟನೆಗೆ ಧಿಕ್ಕಾರ’, ‘ಎಂ.ಇ.ಎಸ್. ಪುಂಡರಿಗೆ ಧಿಕ್ಕಾರ’ ಎಂಬ ಬರಹಗಳನ್ನು ಹೊಂದಿದ್ದ ಭಿತ್ತಿಪತ್ರಗಳನ್ನೂ ಪ್ರದರ್ಶಿಸಿದರು. ಪ್ರತಿಭಟನಾಕಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿಯೂ ನಡೆಯಿತು. ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಬಹುದು ಎಂಬುದನ್ನು ಮನಗಂಡ ಪೊಲೀಸರು ಕಾರ್ಯಕರ್ತರನ್ನು ಬಂಧಿಸಿ ಬಳಿಕ ಬಿಡುಗಡೆ ಮಾಡಿದರು.

‘ಎಂ.ಇ.ಎಸ್. ಸಂಘಟನೆಯನ್ನು ನಿಷೇಧಿಸಲು ಸರ್ಕಾರ ಮುಂದಾಗಬೇಕು. ಇನ್ನು ಎರಡು ದಿನಗಳೊಳಗೆ ಈ ಕುರಿತ ನಿರ್ಣಯ ಪ್ರಕಟಿಸಬೇಕು. ಇಲ್ಲದಿದ್ದರೆ ಬುಧವಾರ ಸಮಾನ ಮನಸ್ಕ ಸಂಘಟನೆಗಳ ಸದಸ್ಯರು ಸಭೆ ನಡೆಸಲಿದ್ದೇವೆ. ಆ ಸಭೆಯಲ್ಲಿ ಕರ್ನಾಟಕ ಬಂದ್ ಮಾಡುವ ಬಗ್ಗೆ ನಿರ್ಣಯ ಕೈಗೊಳ್ಳಲಿದ್ದೇವೆ’ ಎಂದು ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಹೇಳಿದರು.

‘ಬೆಳಗಾವಿ ಅಧಿವೇಶನದಲ್ಲೇ ಎಂ.ಇ.ಎಸ್.ನಿಷೇಧಿಸುವ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಹೋರಾಟದ ಸ್ವರೂಪವನ್ನು ತೀವ್ರಗೊಳಿಸಲಾಗುತ್ತದೆ’ ಎಂದು ಸಾ.ರಾ.ಗೋವಿಂದು ಎಚ್ಚರಿಸಿದರು.

‘ಮಹಾರಾಷ್ಟ್ರದವರು ಹಾಗೂ ಶಿವಸೇನಾದ ಗೂಂಡಾಗಳು ರಾಜ್ಯದೊಳಗೆ ಬಂದು ಎಂ.ಇ.ಎಸ್.ನ ಕಿಡಿಗೇಡಿಗಳ ಜೊತೆ ಸೇರಿಕೊಂಡು ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನಗೊಳಿಸಿದ್ದಾರೆ. ಕನ್ನಡಿಗರ ಆಸ್ತಿಪಾಸ್ತಿಗೂ ಹಾನಿ ಮಾಡಿದ್ದಾರೆ. ರಾಜ್ಯ ಸರ್ಕಾರವು ಅವರನ್ನು ಬಂಧಿಸುವ ಬದಲು ಕನ್ನಡಪರ ಹೋರಾಟಗಾರರ ಮೇಲೆ ದರ್ಪ ತೋರುತ್ತಿದೆ’ ಎಂದು ಕ.ರ.ವೇ (ಶಿವರಾಮೇಗೌಡ ಬಣ) ರಾಜ್ಯ ಘಟಕದ ಅಧ್ಯಕ್ಷ ಶಿವರಾಮೇಗೌಡ ಕಿಡಿಕಾರಿದರು.

‘ಕನ್ನಡಿಗರು ಶಾಂತಿ ಪ್ರಿಯರು. ಇದನ್ನೇ ದೌರ್ಬಲ್ಯವೆಂದು ಭಾವಿಸಬೇಡಿ. ಎಂ.ಇ.ಎಸ್. ಕೃತ್ಯಕ್ಕೆ ಹೇಗೆ ಪ್ರತ್ಯುತ್ತರ ನೀಡಬೇಕೆಂಬುದು ನಮಗೆ ತಿಳಿದಿದೆ. ಬೆಳಗಾವಿಯಲ್ಲಿ ಹಿಟ್ಲರ್ ಸಂಸ್ಕೃತಿ ನಿರ್ಮಾಣವಾಗಿದೆ. ಕನ್ನಡಪರ ಹೋರಾಟಗಾರರು ಬೆಳಗಾವಿ ಪ್ರವೇಶಿಸದಂತೆ ತಡೆಯುತ್ತಿರುವುದು ಸರಿಯಲ್ಲ. ಎಂ.ಇ.ಎಸ್.ಪುಂಡರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಬಾಯಿ ಮಾತಿಗಷ್ಟೇ ಹೇಳಲಾಗುತ್ತಿದೆ. ಈವರೆಗೂ ಕ್ರಮ ಜರುಗಿಸಿಲ್ಲ’ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ನಾಡಿನ ಐಕ್ಯತೆಗೆ ಧಕ್ಕೆ ತರುವವರಿಗೆ ತಕ್ಕ ಶಾಸ್ತಿಯಾಗಲೇಬೇಕು. ಕನ್ನಡಿಗರ ಭಾವನೆಯನ್ನು ಗೌರವಿಸಬೇಕು. ರಾಜಕಾರಣಿಗಳು ನಾಡಿನ ಸ್ವಾಭಿಮಾನ ಮಾರಲು ಹೊರಟಿದ್ದಾರೆ. ಕನ್ನಡಿಗರ ಹೋರಾಟ ಹತ್ತಿಕ್ಕುವ ಕೆಲಸವನ್ನು ಸರ್ಕಾರ ಮಾಡಬಾರದು’ ಎಂದರು.

ಸಂಚಾರ ಅಸ್ತವ್ಯಸ್ತ

ನಗರದ ಪ್ರಮುಖ ಸ್ಥಳಗಳಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದರಿಂದ ಸಂಚಾರ ಅಸ್ತವ್ಯಸ್ತಗೊಂಡಿತು. ಕೆಲವೆಡೆ ವಾಹನ ದಟ್ಟಣೆ ಉಂಟಾಗಿತ್ತು. ಬೇರೆ ಬೇರೆ ಊರುಗಳಿಗೆ ಹೋಗುವವರು ಮೆಜೆಸ್ಟಿಕ್ ತಲುಪಲು ಹರಸಾಹಸ ಪಡಬೇಕಾಯಿತು. ಶಾಲೆ, ಕಾಲೇಜು ಹಾಗೂ ಕಚೇರಿಗಳಿಗೆ ಹೊರಟಿದ್ದವರೂ ದಟ್ಟಣೆಯಲ್ಲಿ ಸಿಲುಕಿದರು.

‘ಸ್ವಾತಂತ್ರ್ಯ ಹೋರಾಟಗಾರರಿಗೆ ಅಪಮಾನ: ದೇಶದ್ರೋಹಕ್ಕೆ ಸಮ’

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣ ವಿಧಾನಸೌಧ): ದೇಶ ಭಕ್ತರು, ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದವರನ್ನು ಅಪಮಾನ ಮಾಡುವವರು ದೇಶ ದ್ರೋಹಿಗಳು, ಇವರನ್ನು ನಿರ್ದಾಕ್ಷಿಣ್ಯವಾಗಿ ಮಟ್ಟ ಹಾಕಬೇಕು ಎಂದು ವಿಧಾನಮಂಡಲದ ಎರಡೂ ಸದನಗಳಲ್ಲಿ ಪಕ್ಷ ಬೇಧ ಮರೆತು ಎಲ್ಲ ಸದಸ್ಯರು ಆಗ್ರಹಿಸಿದರು.

‘ಸಂಗೊಳ್ಳಿ ರಾಯಣ್ಣ, ಶಿವಾಜಿ, ರಾಣಿ ಚೆನ್ನಮ್ಮ ಎಲ್ಲರೂ ದೇಶಕ್ಕೆ ಸೇರಿದ ಆಸ್ತಿ ಮತ್ತು ನಮ್ಮೆಲ್ಲರಿಗೂ ಸ್ಫೂರ್ತಿ. ಅವರಿಗೆ ಅಪಮಾನ ಮಾಡುವವರನ್ನು ಸಹಿಸಬಾರದು. ಮುಂದೆಂದೂ ಇಂತಹ ಕಾರ್ಯವನ್ನು ಪುನರಾವರ್ತಿಸದಂತೆ ತಕ್ಕ ಪಾಠ ಕಲಿಸಬೇಕು’ ಎಂದೂ ಪ್ರತಿಪಾದಿಸಿದರು.

ಇತ್ತೀಚಿನ ಘಟನೆಗಳ ಬಗ್ಗೆ ಖಂಡನಾ ನಿರ್ಣಯವನ್ನು ಅಂಗೀಕರಿಸಿ ಪ್ರಧಾನಮಂತ್ರಿಯವರಿಗೆ ಕಳುಹಿಸಬೇಕು ಎಂದು ಸಲಹೆ ನೀಡಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಈ ಪ್ರಕರಣಗಳಲ್ಲಿ ಗುಪ್ತಚರ ವೈಫಲ್ಯ ಎದ್ದು ಕಾಣುತ್ತದೆ ಎಂದರು.

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಮಾತನಾಡಿ, ರಾಯಣ್ಣ ಅವರ ಪ್ರತಿಮೆ ವಿರೂಪಗೊಳಿಸಿದ ಪುಂಡರನ್ನು ಗಡಿಪಾರು ಮಾಡುವುದಲ್ಲ, ಗುಂಡಿಕ್ಕಬೇಕು. ಇವರಿಗೆ ಬೇರೆ ಭಾಷೆ ಅರ್ಥವಾಗುವುದಿಲ್ಲ. ಹೇಡಿತನದ ಕೃತ್ಯಗಳನ್ನು ಮಾಡುವವರ ಹಿಂದೆ ಇರುವವರನ್ನು ಪತ್ತೆ ಮಾಡಿ. ಇವರು ಕನ್ನಡಿಗರ ಕೈಗೆ ಸಿಕ್ಕರೆ ಛಿಂದಿ ಛಿಂದಿ ಆಗುತ್ತಾರೆ ಎಂದು ಆಕ್ರೋಶ ಭರಿತರಾಗಿ ನುಡಿದರು. ಜೆಡಿಎಸ್‌ನ ಡಾ.ಕೆ. ಅನ್ನದಾನಿ, ಜೆಡಿಎಸ್‌ನ ಎ.ಟಿ.ರಾಮಸ್ವಾಮಿ, ಕಾಂಗ್ರೆಸ್‌ನ ಎಚ್.ಕೆ.ಪಾಟೀಲ ಮಾತನಾಡಿದರು.

ಕನ್ನಡ ಬಾವುಟ ಧ್ವಂಸ

ಬಂಗಾರಪೇಟೆ (ಕೋಲಾರ): ಪುನೀತ್ ರಾಜ್‌ಕುಮಾರ್ ಬಡಾವಣೆಯ ನಾಮಫಲಕ ಮತ್ತು ಅದಕ್ಕೆ ಅಳವಡಿಸಿದ್ದ ಕನ್ನಡ ಧ್ವಜವನ್ನು ಭಾನುವಾರ ರಾತ್ರಿ ಜೆಸಿಬಿ ಬಳಸಿ ಧ್ವಂಸಗೊಳಿಸಲಾಗಿದೆ.

‘ಪುರಸಭೆ ಮಾಜಿ ಸದಸ್ಯ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ಎಂ.ಸಿ. ಜೆ. ವೇಲುಮುರುಗನ್ ಕೆಲ ವರ್ಷದ ಹಿಂದೆ ಕಾಮಸಮುದ್ರ ಮುಖ್ಯರಸ್ತೆಯ ದೇಶಿಹಳ್ಳಿ ರೈಲ್ವೆ ಗೇಟ್ ಸಮೀಪ ಈ ಬಡಾವಣೆ ನಿರ್ಮಿಸಿದ್ದರು. ಈಗ ಅವರೇ ಬಡಾವಣೆ ನಾಮಫಲಕ ಮತ್ತು ಕನ್ನಡ ಧ್ವಜ ಧ್ವಂಸಗೊಳಿಸಿದ್ದಾರೆ’ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಮೇಲ್ಮನೆಯಲ್ಲಿ ವಿರೋಧಪಕ್ಷಗಳ ಸಭಾತ್ಯಾಗ

(ವಿಧಾನಪರಿಷತ್): ಬೆಳಗಾವಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಭಗ್ನಗೊಳಿಸಿದ ಮತ್ತು ವಿವಿಧೆಡೆ ಕನ್ನಡ ಬಾವುಟ ಸುಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್‌ನಲ್ಲಿ ಸೋಮವಾರ ನಡೆದ ಚರ್ಚೆಗೆ ಗೃಹ ಸಚಿವ ಆರಗ ಜ್ಞಾನೇಂದ್ರ ನೀಡಿದ ಉತ್ತರವನ್ನು ಪ್ರತಿಭಟಿಸಿ ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರು ಸಭಾತ್ಯಾಗ ನಡೆಸಿದರು.

ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಈ ವಿಷಯದಲ್ಲಿ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿದರು. ಸಭಾಪತಿ ಬಸವರಾಜ ಹೊರಟ್ಟಿ ನಿಯಮ 68ರ ಅಡಿಯಲ್ಲಿ ಚರ್ಚೆಗೆ ಅನುಮತಿ ನೀಡಿದರು. 16 ಸದಸ್ಯರು ಮಾತನಾಡಿದರು. ಉತ್ತರ ನೀಡಿದ ಗೃಹ ಸಚಿವರು, ‘ದುಷ್ಕೃತ್ಯ ನಡೆಸಿರುವ ಕಿಡಿಗೇಡಿಗಳ ವಿರುದ್ಧ ದೇಶದ್ರೋಹ ಆಪಾದನೆಯಡಿ ಕ್ರಮ ಜರುಗಿಸುತ್ತೇವೆ’ ಎಂದರು. ಗೃಹ ಸಚಿವರ ಉತ್ತರಕ್ಕೆ ತೃಪ್ತರಾಗದ ಕಾಂಗ್ರೆಸ್ ಸದಸ್ಯರು, ‘ರಾಜ್ಯ ಒಬ್ಬ ಅಸಮರ್ಥ ಗೃಹ ಸಚಿವರ ಕೈಯಲ್ಲಿದೆ. ದುರ್ಬಲ ಗೃಹ ಸಚಿವರಿಂದ ರಾಜ್ಯದ ರಕ್ಷಣೆ ಸಾಧ್ಯವಿಲ್ಲ’ ಎಂದು ಟೀಕಿಸಿದರು.

ಸರ್ಕಾರದ ಉತ್ತರ ಸಮರ್ಪಕವಾಗಿಲ್ಲ ಎಂದು ಆಕ್ಷೇಪಿಸಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ನಡೆಸಿದರು. ಅದರ ಮರು ಕ್ಷಣದಲ್ಲೇ ಜೆಡಿಎಸ್ ಸದಸ್ಯರೂ ಸಭಾತ್ಯಾಗ ನಡೆಸಿದರು. ವಿಪಕ್ಷಗಳ ಸದಸ್ಯರ ಅನುಪಸ್ಥಿತಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ ನಡವಳಿಕೆಯ ವಿರುದ್ಧ ಖಂಡನಾ ನಿರ್ಣಯ ಅಂಗೀಕರಿಸಲಾಯಿತು.

ಶಿವಾಜಿ ಪ್ರತಿಮೆ ಧ್ವಂಸ ಯತ್ನ: ನಾಲ್ವರು ವಶಕ್ಕೆ

ಬೆಳಗಾವಿ: ತಾಲ್ಲೂಕಿನ ಹೊನಗಾ ಗ್ರಾಮದಲ್ಲಿ ನಾಲ್ವರು ಯುವಕರು ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಧ್ವಂಸ ಮಾಡಲು ಸೋಮವಾರ ಯತ್ನಿಸಿದ್ದರಿಂದ, ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಸಂಜೆ ಪ್ರತಿಮೆಯ ಕಟ್ಟೆಯೇರಿದ ಆ ಯುವಕರು ಗಲಾಟೆ ಆರಂಭಿಸಿದ್ದಾರೆ. ಪ್ರತಿಮೆ ಧ್ವಂಸ ಮಾಡಲು ಮುಂದಾಗಿದ್ದನ್ನು ಗಮನಿಸಿದ ಸ್ಥಳೀಯರು ತಡೆಯಲೆತ್ನಿಸಿದ್ದಾರೆ. ಕಾಕತಿ ಠಾಣೆ ಪೊಲೀಸರಿಗೆ ಮಾಹಿತಿ ನೀಡಿ, ಆರೋಪಿಗಳನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ.

‘ಶಿವಾಜಿ ಪ್ರತಿಮೆಗೆ ಯಾವುದೇ ಹಾನಿಯಾಗಿಲ್ಲ. ನಾಲ್ವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದೇವೆ’ ಎಂದು ಕಾಕತಿ ಸಿಪಿಐ ಗುರುನಾಥ ತಿಳಿಸಿದರು.

ಆ ಯುವಕರು, ‘ನೀವು ಕರ್ನಾಟಕದವರೋ, ಮಹಾರಾಷ್ಟ್ರದವರೋ? ಈ ಊರು ಕರ್ನಾಟಕದಲ್ಲಿದೆಯೋ, ಮಹಾರಾಷ್ಟ್ರದಲ್ಲೋ’ ಎಂದು ಕನ್ನಡದಲ್ಲಿ ಕೇಳುವ ವಿಡಿಯೊ ಹರಿದಾಡುತ್ತಿದೆ.

ಪ್ರತಿಮೆ ಸ್ಥಳಾಂತರ ವಿವಾದ: ಸಂಘಟನೆ ಅಧ್ಯಕ್ಷರಿಗೆ ನೋಟಿಸ್

ಬೆಂಗಳೂರು: ‘ಸಾರ್ವಜನಿಕ ಸ್ಥಳದಲ್ಲಿ ಅನಧಿಕೃತವಾಗಿ ಸ್ಥಾಪಿಸಲಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಯನ್ನು 4 ತಿಂಗಳ ಒಳಗೆ ಸ್ಥಳಾಂತರಿಸುವುದಾಗಿ ನ್ಯಾಯಾಲಯಕ್ಕೆ ಮುಚ್ಚಳಿಕೆ ನೀಡಿದ್ದರೂ ಪ್ರತಿಮೆ ಸ್ಥಳಾಂತರಿಸಿಲ್ಲ’ ಎಂಬ ಕಾರಣಕ್ಕೆ ಹರಪನಹಳ್ಳಿಯ ‘ಡಾ. ಬಿ.ಆರ್. ಅಂಬೇಡ್ಕರ್ ಯುವ ಸಂಘಟನೆ’ ಅಧ್ಯಕ್ಷ ರೇವಣ ಸಿದ್ದಪ್ಪ ಅವರಿಗೆ ಹೈಕೋರ್ಟ್ ಸಮನ್ಸ್ ಜಾರಿಗೊಳಿಸಲು ಆದೇಶಿಸಿದೆ.

ಈ ಕುರಿತಂತೆ ನೀಲಪ್ಪ ಮತ್ತಿತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಹೈಕೋರ್ಟ್‌ಗೆ ನೀಡಲಾಗಿದ್ದ ಭರವಸೆಯಂತೆ ಪ್ರತಿಮೆಯನ್ನು ಈವರೆಗೂ ಸ್ಥಳಾಂತರಿಸಿಲ್ಲ. ಪ್ರತಿಮೆ ತೆರವು ವಿಚಾರದಲ್ಲಿ ಪ್ರತಿವಾದಿ ಸಂಘಟನೆ ಸಾಕಷ್ಟು ತೊಂದರೆ ಉಂಟು ಮಾಡುತ್ತಿದೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, ‘ಪ್ರತಿಮೆ ತೆರವುಗೊಳಿಸುವುದಾಗಿ ಪ್ರಮಾಣಪತ್ರ ಸಲ್ಲಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಯುವ ಸಂಘಟನೆಯ ಅಧ್ಯಕ್ಷ ರೇವಣ ಸಿದ್ದಪ್ಪ ಮುಂದಿನ ವಿಚಾರಣೆಗೆ ಕೋರ್ಟ್ ಮುಂದೆ ಹಾಜರಾಗಬೇಕು. ಕೋರ್ಟ್ ಆದೇಶ ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿ ವಿಚಾರಣೆ ಮುಂದೂಡಿದೆ.

ಆಗಸ್ಟ್ 13ರಂದು ನಡೆದ ವಿಚಾರಣೆ ವೇಳೆ ರೇವಣ ಸಿದ್ದಪ್ಪ ನ್ಯಾಯಪೀಠಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದರು. ಅಂಬೇಡ್ಕರ್ ಪ್ರತಿಮೆಯನ್ನು 4 ತಿಂಗಳೊಳಗೆ ಪರ್ಯಾಯ ಜಾಗಕ್ಕೆ ಸ್ಥಳಾಂತರಿಸುವುದಾಗಿ ಮುಚ್ಚಳಿಕೆ ಬರೆದುಕೊಟ್ಟಿದ್ದರು. ಇದನ್ನು ಪರಿಗಣಿಸಿದ್ದ ನ್ಯಾಯಪೀಠ, ‘ಪ್ರತಿಮೆ ತೆರವುಗೊಳಿಸಿ ಡಿ.17ರೊಳಗೆ ಅನುಪಾಲನಾ ವರದಿ ಸಲ್ಲಿಸಿ’ ಎಂದು ಸೂಚಿಸಿ ಅರ್ಜಿ ವಿಲೇವಾರಿ ಮಾಡಿತ್ತು.



ಬೆಳಗಾವಿಯ ಅನಗೋಳದ ಕನಕದಾಸ ಕಾಲೊನಿಯಲ್ಲಿ ಮರುಪ್ರತಿಷ್ಠಾಪಿಸಿರುವ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಸಿದ್ದರಾಮಯ್ಯ ಸೋಮವಾರ ನಮನ ಸಲ್ಲಿಸಿದರು

‘ಕಾನೂನು ಸುವ್ಯವಸ್ಥೆ ಹಾಳಾಗಿದೆ’

ಬೆಳಗಾವಿ: ‘ಕಿಡಿಗೇಡಿಗಳು ಆಯುಧಗಳನ್ನು ಹಿಡಿದುಕೊಂಡು ಸಾರ್ವಜನಿಕವಾಗಿ ಸುತ್ತಾಡುತ್ತಿದ್ದಾರೆ. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟು ಹೋಗಿದೆ. ಗುಪ್ತಚರ ಇಲಾಖೆ ಸತ್ತು ಹೋಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಇಲ್ಲಿನ ಅನಗೋಳದ ಕನಕದಾಸ ಕಾಲೊನಿಯಲ್ಲಿ ಮರುಪ್ರತಿಷ್ಠಾಪಿಸಿರುವ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಪ್ರತಿಮೆಗೆ ಸೋಮವಾರ ನಮನ ಸಲ್ಲಿಸಿದ ಬಳಿಕ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

‘ರಾಯಣ್ಣ ಪ್ರತಿಮೆ ಭಗ್ನಗೊಳಿಸಿರುವ ಘಟನೆ ಖಂಡನೀಯ. ರಾಯಣ್ಣ ಒಂದೇ ಜಾತಿ, ಧರ್ಮಕ್ಕೆ ಸೀಮಿತವಾಗಿಲ್ಲ. ಬ್ರಿಟಿಷರ ವಿರುದ್ಧ ಹೋರಾಡಿದ ದೇಶಭಕ್ತನ ಪ್ರತಿಮೆಯನ್ನು ಕಿಡಿಗೇಡಿಗಳು ಭಗ್ನಗೊಳಿಸಿ, ಸಮಾಜದ ಶಾಂತಿ ಕದಡುತ್ತಿದ್ದಾರೆ. ಅವರನ್ನು ಕೂಡಲೇ ಬಂಧಿಸಬೇಕು. ಇದೇ ಬಡಾವಣೆಯ ಕೆರೆ ದಂಡೆ ಮೇಲೆ ರಾಯಣ್ಣನ ಬೃಹತ್ ಪ್ರತಿಮೆ ಪ್ರತಿಷ್ಠಾಪಿಸಬೇಕು. ಅದಕ್ಕೆ ಸರ್ಕಾರ ಸುರಕ್ಷತೆಯನ್ನೂ ಒದಗಿಸಬೇಕು’ ಎಂದರು.

‘ಎಂಇಎಸ್ ಸಂಘಟನೆಯನ್ನು ರಾಜ್ಯದಲ್ಲಿ ನಿಷೇಧಿಸಬೇಕು ಎನ್ನುವುದು ಜನರ ಒತ್ತಾಸೆಯಾಗಿದೆ’ ಎಂದರು.

ಎಂಇಎಸ್ ವಿರುದ್ಧ ಕನ್ನಡ ಸಂಘಟನೆಗಳು ಪ್ರತಿಭಟನೆ ನಡೆಸಲು ಪೊಲೀಸರು ಅಡ್ಡಿಪಡಿಸಿದ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ‘ಯಾರಿಗೆ ಅನ್ಯಾಯವಾದರೂ ಪ್ರತಿಭಟಿಸುವ ಹಕ್ಕಿದೆ. ಹಾಗಾಗಿ ಕನ್ನಡ ಸಂಘಟನೆಗಳಿಗೆ ಪ್ರತಿಭಟನೆಗೆ ಅವಕಾಶ ನೀಡಬೇಕು. ಎಂಇಎಸ್‌ನವರು ಪುಂಡರು. ಅವರಿಗೆ ಕಾನೂನಿನ ಮೇಲೆ ಗೌರವ ಇಲ್ಲದಂತಾಗಿದೆ. ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು. ಪ್ರತಿಮೆ ಭಗ್ನಗೊಳಿಸಿದ ಘಟನೆ ಕುರಿತು ಸ್ಥಳೀಯರಿಂದ ಮಾಹಿತಿ ಪಡೆದರು. ಮುಖಂಡ ಅಶೋಕ ಪಟ್ಟಣ, ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ರಾಜು ಸೇಠ್ ಇದ್ದರು.



ನಗರದಲ್ಲಿ ಸೋಮವಾರ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದ ಸದಸ್ಯರಿಗೆ ಪರಿಹಾರ ಧನ ಮತ್ತು ಕೊಳೆಗೇರಿ ಮಂಡಳಿಯ ಹಕ್ಕು ಪತ್ರಗಳನ್ನು ಅರ್ಹ ಫಲಾನುಭವಿಗಳಿಗೆ ವಸತಿ ಸಚಿವ ವಿ. ಸೋಮಣ್ಣ ವಿತರಿಸಿದರು

‘ಠಾಕ್ರೆ ಕೀಳು ಮಟ್ಟದ ರಾಜಕೀಯ ಬಿಡಲಿ’

ಬೆಂಗಳೂರು: ‘ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಕೀಳು ಮಟ್ಟದ ರಾಜಕೀಯ ಮಾಡುವುದನ್ನು ಕೈಬಿಡಲಿ’ ಎಂದು ವಸತಿ ಸಚಿವ ವಿ. ಸೋಮಣ್ಣ ಹೇಳಿದರು.

ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ನಾಗರಭಾವಿ ವಾರ್ಡ್‌ನಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದ ಸದಸ್ಯರಿಗೆ ಪರಿಹಾರ ಧನ ಮತ್ತು ಕೊಳೆಗೇರಿ ಮಂಡಳಿಯ ಹಕ್ಕುಪತ್ರಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಿ ಅವರು ಮಾತನಾಡಿದರು.

‘ರಾಷ್ಟ್ರೀಯ ಭಾವೈಕ್ಯತೆಗೆ ಧಕ್ಕೆ ತರುವ ಪ್ರಯತ್ನವನ್ನು ಯಾರೂ ಮಾಡಬಾರದು. ಭಾಷೆಗಳ ನಡುವೆ ಸ್ನೇಹ ಸಂಬಂಧ ಇರಬೇಕು’ ಎಂದು ಹೇಳಿದರು.

‘ರಾಜ್ಯದಲ್ಲಿ 1,900ಕ್ಕೂ ಹೆಚ್ಚು ಕೊಳೆಗೇರಿಗಳಿವೆ. ಸರ್ಕಾರದ ವತಿಯಿಂದ 3.5 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗುತ್ತಿದೆ’ ಎಂದರು.

ಬಿಜೆಪಿ ಯುವ ಮುಖಂಡ ಡಾ. ಅರುಣ್ ಸೋಮಣ್ಣ, ಗೋವಿಂದರಾಜನಗರ ಮಂಡಲದ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ, ಮುಖಂಡರಾದ ಮೋಹನ್ ಕುಮಾರ್, ವಾಗೇಶ್, ದಾಸೇಗೌಡ, ಪಲ್ಲವಿ ಚನ್ನಪ್ಪ, ರಾಮಪ್ಪ, ರಾಮಚಂದ್ರ, ಎಚ್. ರಮೇಶ್ ಇದ್ದರು.

ಕರ್ನಾಟಕ ಇನಾಂ ರದ್ದತಿ ಮಸೂದೆಗೆ ವಿಧಾನಸಭೆಯಲ್ಲಿ ಒಪ್ಪಿಗೆ

ಭೂ ಅಕ್ರಮಕ್ಕೆ ರಹದಾರಿ: ಸದಸ್ಯರ ಆತಂಕ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರ ಆಕ್ಷೇಪದ ನಡುವೆಯೂ ‘ಕರ್ನಾಟಕ ಇನಾಮು ರದ್ದತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ’ಗೆ ವಿಧಾನಸಭೆಯಲ್ಲಿ ಸೋಮವಾರ ಅಂಗೀಕಾರ ನೀಡಲಾಯಿತು. ಈ ಮಸೂದೆ ಇನ್ನಷ್ಟು ಭೂ ಅಕ್ರಮಕ್ಕೆ ರಹದಾರಿ ಆಗಲಿದೆ ಎಂದು ಹಲವು ಸದಸ್ಯರು ಆತಂಕ ವ್ಯಕ್ತಪಡಿಸಿದರು.

ರಾಜ್ಯದ ವಿವಿಧೆಡೆ ಇನಾಂ ಜಮೀನು ಸಾಗುವಳಿ ಮಾಡುತ್ತಿರುವ ರೈತರು ಪಹಣಿಗಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಇನ್ನೂ ಒಂದು ವರ್ಷ ಮುಂದುವರಿಸುವುದಕ್ಕೆ ಅವಕಾಶ ನೀಡಲಾಗುತ್ತದೆ ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು. ಭೂಮಿಯ ಹಕ್ಕನ್ನು ರೈತರಿಗೆ ನೀಡುವುದರಿಂದ ಅವರು ಬ್ಯಾಂಕ್‌ಗಳಿಂದ ಸಾಲ ಪಡೆಯಲು, ಸರ್ಕಾರಿ ಉದ್ದೇಶಕ್ಕೆ ಭೂಸ್ವಾಧೀನ ಮಾಡಿಕೊಂಡಾಗ ಪರಿಹಾರ ಪಡೆದುಕೊಳ್ಳಲು ಅನುಕೂಲವಾಗುತ್ತದೆ ಎಂದೂ ತಿಳಿಸಿದರು.

ರಾಜ್ಯದ ಲಕ್ಷಾಂತರ ಎಕರೆ ಇನಾಂ ಭೂಮಿಯನ್ನು ಕಳೆದ 50–60 ವರ್ಷಗಳಿಂದ ರೈತರು ಉಳುಮೆ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಒಟ್ಟು 1 ಲಕ್ಷ ಎಕರೆಗೂ ಹೆಚ್ಚು ಇನಾಂ ಭೂಮಿ ಇದೆ ಎಂದು ಅವರು ಹೇಳಿದರು. ಈ ಮಸೂದೆಯನ್ನು ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕು ಎಂದೂ ಸದಸ್ಯರು ಆಗ್ರಹಿಸಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ’30 ವರ್ಷಗಳ ಬಳಿಕ ಅರ್ಜಿ ಸಲ್ಲಿಸಲು ಮತ್ತೆ ಅವಕಾಶ ನೀಡುತ್ತಿರುವುದು ಏಕೆ‘ ಎಂದು ಪ್ರಶ್ನಿಸಿದರು. ಅಶೋಕ ಪ್ರತಿಕ್ರಿಯಿಸಿ, ’ಇನಾಂ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದರೂ ಅನೇಕ ಮಂದಿ ಅರ್ಜಿ ಸಲ್ಲಿಸಿರಲಿಲ್ಲ. ಅಂತವರಿಗೆ ಅನುಕೂಲ ಮಾಡಿಕೊಡಲು ಅರ್ಜಿ ಸಲ್ಲಿಸುವ ಅವಧಿಯನ್ನು ಒಂದು ವರ್ಷ ವಿಸ್ತರಿಸಲಾಗಿದೆ ಅಷ್ಟೇ. ಪಿ.ಎಸ್.ವಸ್ತ್ರದ್ ಸಮಿತಿಯ ಶಿಫಾರಸಿನ ಮೇರೆಗೆ ತಿದ್ದುಪಡಿ ತರಲಾಗಿದೆ‘ ಎಂದೂ ಸ್ಪಷ್ಟಪಡಿಸಿದರು.

ಭೂಮಾಪಕರಿಗೂ ಅವಕಾಶ: ಜಮೀನು ಗುರುತಿಸಲು ಅಗತ್ಯವಿರುವ ವಿವರಣೆ, ಪೋಡಿ, ಭೂಪರಿವರ್ತನೆ ನಕ್ಷೆ, ಇ-ಸ್ವತ್ತು ಮುಂತಾದವುಗಳ ಸಂದರ್ಭದಲ್ಲಿ ಅರ್ಜಿಗಳ ಶೀಘ್ರ ವಿಲೇವಾರಿಗಾಗಿ ಸರ್ಕಾರಿ ಭೂಮಾಪಕರಿಗೂ ನೀಡಲು ಅವಕಾಶ ಒದಗಿಸುವ ‘ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಮಸೂದೆ’ಗೆ ಒಪ್ಪಿಗೆ ನೀಡಲಾಯಿತು.

ಸದ್ಯದ ವ್ಯವಸ್ಥೆಯಲ್ಲಿ ಪರವಾನಗಿ ಪಡೆದ ಭೂಮಾಪಕರು ಮಾತ್ರ 11 ಇ ಅಡಿ ಸ್ಕೆಚ್ ನೀಡಬಹುದಾಗಿತ್ತು. ಕಾಯ್ದೆಗೆ ತಿದ್ದುಪಡಿ ಮೂಲಕ ಸರ್ಕಾರಿ ಭೂಮಾಪಕರಿಗೂ ಈ ಅವಕಾಶ ನೀಡಲಾಗುವುದು ಎಂದು ಅಶೋಕ ತಿಳಿಸಿದರು. ಬೆಂಗಳೂರಿನ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜನ್ನು ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ ಮಸೂದೆಗೆ ಒಪ್ಪಿಗೆ ನೀಡಲಾಯಿತು. ಈ ವಿ.ವಿಯಲ್ಲಿ ಶೇ 100ರಷ್ಟು ಕನ್ನಡಿಗ ವಿದ್ಯಾರ್ಥಿಗಳಿಗೆ ಅವಕಾಶ ನೀಡಬೇಕು ಎಂದು ಕಾಂಗ್ರೆಸ್‌ನ ಡಾ.ರಂಗನಾಥ್ ಒತ್ತಾಯಿಸಿದರು. ಇದಕ್ಕೆ ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಒಪ್ಪಿದರು.

ಸದಸ್ಯರ ಆಕ್ಷೇಪವೇನು?

ಹಲವು ವರ್ಷಗಳಿಂದ ಕೃಷಿ ಮಾಡಿಕೊಂಡಿರುವವರಿಗೆ ಅನುಕೂಲ ಮಾಡಿಕೊಡಲು ಈ ಮಸೂದೆಯನ್ನು ತಂದ ಹಾಗಿಲ್ಲ. ಸಂಡೂರಿನಲ್ಲಿ ಭತ್ತ ಬಿತ್ತಿ ಬೆಳೆಯುವವರು ಯಾರಿದ್ದಾರೆ. ಅಲ್ಲಿ ಗಣಿಗಾರಿಕೆ ಮಾಡಿ ಬಂಗಾರ ತೆಗೆಯುವವರೇ ಅಲ್ಲಿರುವುದು. ಅವರೇ ಅನುಕೂಲ ಮಾಡಿಕೊಡಲು ಈ ಮಸೂದೆ ತರಲಾಗಿದೆ.

ಎಚ್.ಕೆ.ಪಾಟೀಲ, ಕಾಂಗ್ರೆಸ್ ಸದಸ್ಯ

ಈ ಮಸೂದೆ ಇನ್ನಷ್ಟು ಭೂ ಅಕ್ರಮಕ್ಕೆ ದಾರಿ ಕೊಡಲಿದೆ. ಇನಾಂ ರದ್ದತಿ ಹೆಸರಿನಲ್ಲಿ ಶೇ 50ಕ್ಕೂ ಹೆಚ್ಚು ಮಂದಿ ಇದನ್ನು ದುರುಪಯೋಗ ಮಾಡಿಕೊಳ್ಳಲಿದ್ದಾರೆ. ಬೆಂಗಳೂರಿನ ಮೈಸೂರು ರಸ್ತೆಯ ವೆಂಕಟಾಪುರದಲ್ಲಿ ಪುರವಂಕರ ಸಂಸ್ಥೆಯವರು 66 ಎಕರೆ ಇನಾಂ ಜಮೀನನ್ನು ಪಡೆದಿದ್ದಾರೆ. ಅವರು 6 ಸಾವಿರ ಫ್ಲ್ಯಾಟ್‌ಗಳನ್ನು ನಿರ್ಮಿಸಿದ್ದಾರೆ. ಈ ಮಸೂದೆಯಿಂದ ಇನ್ನಷ್ಟು ಇಂತಹವರಿಗೆ ಅನುಕೂಲ ಆಗಲಿದೆ.

ಎ.ಟಿ.ರಾಮಸ್ವಾಮಿ, ಜೆಡಿಎಸ್ ಸದಸ್ಯ

ಈ ಮಸೂದೆಯಿಂದ ಅಕ್ರಮಕ್ಕೆ ಅವಕಾಶ ಆಗಲಿದೆ. ಇನಾಂ ಪಡೆದವರು ಒಬ್ಬರು ಇರುತ್ತಾರೆ. ಈಗ ಆ ಜಮೀನಿನಲ್ಲಿ ಕೃಷಿ ಮಾಡುತ್ತಿರುವವರು ಇನ್ನೊಬ್ಬರು ಇರುತ್ತಾರೆ. ಜಮೀನನ್ನು ಯಾರಿಗೆ ಮಂಜೂರು ಮಾಡುತ್ತೀರಿ.

ಕುಮಾರ ಬಂಗಾರಪ್ಪ, ಬಿಜೆಪಿ ಸದಸ್ಯ

ನಮ್ಮೂರಿನ ಕೆಲವು ಜಮೀನು ಮಾಲೀಕರು ಬೆಂಗಳೂರಿಗೆ ಸೇರಿಕೊಂಡಿದ್ದಾರೆ. ಅದನ್ನು ಊರಿನ ರೈತರಿಗೆ ಗೇಣಿಗೆ ಕೊಟ್ಟಿದ್ದಾರೆ. ಅವರು 25–30 ವರ್ಷಗಳಿಂದ ಕೃಷಿ ಮಾಡುತ್ತಿದ್ದಾರೆ. ಈಗ ಅರ್ಜಿ ಸಲ್ಲಿಸಲು ಅವಕಾಶ ನೀಡಿದರೆ ಬೆಂಗಳೂರಿನ ಜನರು ಊರಿಗೆ ಓಡಿ ಬಂದು ಜಮೀನಿನ ಮೇಲೆ ಹಕ್ಕು ಸ್ಥಾಪಿಸುತ್ತಾರೆ. ರೈತರಿಗೆ ಅನ್ಯಾಯವಾಗುತ್ತದೆ. ಇಂತಹ ಪಾಪದ ಕೆಲಸಕ್ಕೆ ನಮ್ಮ ಸಹಮತಿ ಇಲ್ಲ.

ಕೆ.ಎಂ. ಶಿವಲಿಂಗೇಗೌಡ, ಜೆಡಿಎಸ್ ಸದಸ್ಯ

ರೈಲಿನಿಂದ ಬಿದ್ದು ಎಂಜಿನಿಯರ್ ಸಾವು

ಹುಬ್ಬಳ್ಳಿ: ನಗರದ ರೈಲು ನಿಲ್ದಾಣದಲ್ಲಿ ಚಲಿಸುತ್ತಿದ್ದ ರೈಲಿನಿಂದ ಬಿದ್ದು ಕೆಆರ್‌ಐಡಿಎಲ್ ಸೂಪರಿಂಟೆಂಡಿಂಗ್ ಎಂಜಿನಿಯರ್ ರಂಗರಾಜು ಎಸ್.ಎ.(59) ಭಾನುವಾರ ರಾತ್ರಿ ಮೃತಪಟ್ಟಿದ್ದಾರೆ.

ಮೂಲತಃ ದಾವಣಗೆರೆಯರಾದ ಅವರು, ಬೆಂಗಳೂರಿನ ಬಸವೇಶ್ವರನಗರ ನಿವಾಸಿಯಾಗಿದ್ದರು.

ರಂಗರಾಜು ಅವರು ಬೆಂಗಳೂರಿಗೆ ತೆರಳಬೇಕಿದ್ದ ರೈಲು ಹತ್ತುವ ಬದಲು,



ರಂಗರಾಜು ಎಸ್.ಎ.

ಬೆಳಗಾವಿಗೆ ಹೋಗುವ ರೈಲು ಹತ್ತಿದ್ದರು. ಗೊತ್ತಾದ ತಕ್ಷಣ ಚಲಿಸುತ್ತಿದ್ದ ರೈಲಿನಿಂದ ಇಳಿಯಲು ಯತ್ನಿಸಿದಾಗ, ಪ್ಲಾಟ್‌ಫಾರ್ಮ್‌ನಲ್ಲಿ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ವಾರ್ತೆ

ಬಸವರಾಜಯ್ಯ

ಬೆಂಗಳೂರು: ಬೆಂಗಳೂರು ಉತ್ತರ ತಾಲ್ಲೂಕಿನ ಕಡಬಗೆರೆ ಗ್ರಾಮದ ನಿವಾಸಿ ಬಸವರಾಜಯ್ಯ (75) ಅವರು ಸೋಮವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಯಜಮಾನ್ ಸಿದ್ಧಗಂಗಪ್ಪ ಅವರ



ಮಗನಾಗಿದ್ದ ಅವರು ರಾಜರಾಜೇಶ್ವರಿ ನಗರ, ಕೆಂಗೇರಿ ಹಾಗೂ ಇತರೆಡೆ ಗ್ರಾಮಲೆಕ್ಕಿಗರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಇದೇ 21ರಂದು ಬೆಳಿಗ್ಗೆ 10.30ಕ್ಕೆ ಕಡಬಗೆರೆಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಬೊಮ್ಮಾಯಿ 3ಂಗಳಲ್ಲಿ ಅಧಿಕಾರದಿಂದ ಇಳಿಯಲಿದ್ದಾರೆ: ಬಸವಪ್ರಕಾಶ ಸ್ವಾಮೀಜಿ

ಬೆಳಗಾವಿ: ‘ಶಾಲೆಗಳಲ್ಲಿ ಮೊಟ್ಟೆ ವಿತರಣೆಗೆ ವಿರೋಧ ವ್ಯಕ್ತಪಡಿಸಿ ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ತೆರಳುತ್ತಿದ್ದ ನಮಗೆ ಸರ್ಕಾರ ಅವಮಾನ ಮಾಡಿದೆ. ಬಸವರಾಜ ಬೊಮ್ಮಾಯಿ ತಿಂಗಳಲ್ಲಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಲಿದ್ದಾರೆ’ ಎಂದು ಕೂಡಲಸಂಗಮ ಬಸವ ಧರ್ಮ ಪೀಠದ ಬಸವಪ್ರಕಾಶ ಸ್ವಾಮೀಜಿ ಆಕ್ರೋಶ ವ್ಯಕ್ತಪಡಿಸಿದರು.

ಸುವರ್ಣ ವಿಧಾನಸೌಧದ ಬಳಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, ‘ಸರ್ಕಾರ ಪೊಲೀಸರನ್ನು ಛೂ ಬಿಟ್ಟು ಕಾವಿ ಕುಲಕ್ಕೆ ಅವಮಾನ ಮಾಡಿದೆ. ಈ ಅನ್ಯಾಯವನ್ನು ಲಿಂಗಾಯತ ಹಾಗೂ ಜೈನ ಸಮುದಾಯ ಸಹಿಸಿಕೊಳ್ಳುವುದಿಲ್ಲ’ ಎಂದರು.

‘ಪೊಲೀಸರು ಶ್ರೀಗಳು ಹಾಗೂ ಬಸವ ತತ್ವ ಅನುಯಾಯಿಗಳ ಮೇಲೆ ಅವಾಚ್ಯ ಶಬ್ದ ಬಳಸಿದ್ದಾರೆ. ಈ ರೀತಿಯಾದರೆ ನಮ್ಮಂತಹ ಸ್ವಾಮೀಜಿಗಳ ಶಾಪ ಮುಖ್ಯಮಂತ್ರಿಗೆ ತಟ್ಟದೇ ಇರುವುದಿಲ್ಲ. ನಾವು ಸುವರ್ಣ ವಿಧಾನಸೌಧಕ್ಕೆ ಹೋಗುವಾಗ ಪೊಲೀಸರು ನಮ್ಮ ಮೇಲೆ ಲಾಠಿಪ್ರಹಾರವನ್ನೂ ನಡೆಸಿದ್ದಾರೆ’ ಎಂದರು.

‘ಮನೆಗಳಲ್ಲಿ ಯಾರು ಏನನ್ನಾದರೂ ತಿನ್ನಲಿ. ಆದರೆ, ಶಾಲೆಗಳಲ್ಲಿ ಮೊಟ್ಟೆ ಕೊಡುವುದಕ್ಕೆ ವಿರೋಧವಿದೆ. ಸಮಾಜದ ಆಹಾರದ ಪದ್ಧತಿ ಕಲುಷಿತಗೊಳಿಸಬಾರದು’ ಎಂದು ಒತ್ತಾಯಿಸಿದರು.

ನಾಲ್ಕು ದಿನಗಳ ಹಿಂದೆಯೇ ಸತ್ತಿದ್ದೇನೆ: ರಮೇಶ್ ಕುಮಾರ್

ಬೆಳಗಾವಿ (ಸುವರ್ಣ ವಿಧಾನಸೌಧ): ‘ನಾನು ನಾಲ್ಕು ದಿನಗಳ ಹಿಂದೆಯೇ ಸತ್ತು ಹೋಗಿದ್ದೇನೆ’ ಎಂದು ಕಾಂಗ್ರೆಸ್ ಶಾಸಕ ಕೆ.ಆರ್. ರಮೇಶ್ ಕುಮಾರ್ ಹೇಳಿದರು.

ಸೋಮವಾರ ವಿಧಾನಸಭೆಯ ಅಧಿವೇಶನದಲ್ಲಿ ಪಾಲ್ಗೊಳ್ಳಲು ಬಂದ ಅವರಿಂದ ಬೆಳಗಾವಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನ ಹಾಗೂ ಮಹಾರಾಷ್ಟ್ರ ಏಕೀಕರಣ ಸಮಿತಿ ಪುಂಡಾಟಿಕೆ ಕುರಿತು ಪ್ರತಿಕ್ರಿಯೆ ಪಡೆಯಲು ಮಾಧ್ಯಮ ಪ್ರತಿನಿಧಿಗಳು ಪ್ರಯತ್ನಿಸಿದರು. ಆಗ, ಅವರು ಹೀಗೆ ಪ್ರತಿಕ್ರಿಯಿಸಿದರು.

‘ಜೀವಂತ ಇರುವವರನ್ನು ಮಾತನಾಡಿಸಿ. ನಾನು ಜೀವಂತ ಇಲ್ಲ. ನಾಲ್ಕು ದಿನಗಳ ಹಿಂದೆಯೇ ಸತ್ತು ಹೋಗಿದ್ದೇನೆ’ ಎಂದು ಕೈ ಮುಗಿದು ವಿಧಾನಸಭೆಯ ಮೊಗಸಾಲೆಯತ್ತ ನಡೆದರು.

ನಾನಿಲ್ಲದೆ ಮೈಸೂರಿನ ಸಭೆ ಬೇಡ ಡಿಕೆಶಿಗೆ ಸಿದ್ದರಾಮಯ್ಯ ಸಲಹೆ

ಬೆಳಗಾವಿ (ಸುವರ್ಣ ವಿಧಾಸೌಧ): ‘ನಾನು ಇಲ್ಲದೆ ಮೈಸೂರಿನಲ್ಲಿ ನೀವು ಸಭೆ ಮಾಡಬೇಡಿ. ಅದು ಸರಿಯಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌ಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಮೇಕೆದಾಟು ಯೋಜನೆಯ ತ್ವರಿತ ಅನುಷ್ಠಾನಕ್ಕೆ ಆಗ್ರಹಿಸಿ ಹಮ್ಮಿಕೊಳ್ಳಲಿರುವ ಪಾದಯಾತ್ರೆಗೆ ಪೂರ್ವಭಾವಿಯಾಗಿ ಇದೇ 23ರಂದು ಮೈಸೂರಿನಲ್ಲಿ ಪಕ್ಷದ ಶಾಸಕರ ಸಭೆ ನಡೆಸಲು ಶಿವಕುಮಾರ್ ನಿರ್ಧರಿಸಿದ್ದರು. ಸದನ ನಡೆಯುತ್ತಿರುವ ಮಧ್ಯೆ ಸಭೆ ನಡೆಸಲು ಮುಂದಾಗಿರುವ ಶಿವಕುಮಾರ್ ಕ್ರಮಕ್ಕೆ ಮೈಸೂರು ಭಾಗದ ಶಾಸಕರು ಮತ್ತು ಮಾಜಿ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು.

ಸುವರ್ಣ ವಿಧಾನಸೌಧದ ಮೊಗಸಾಲೆಯಲ್ಲಿ ಪಕ್ಷದ ಶಾಸಕ ಕೆ.ಜೆ. ಜಾರ್ಜ್ ಜೊತೆ ಸಿದ್ದರಾಮಯ್ಯ ಮಾತನಾಡುತ್ತಿದ್ದ ವೇಳೆ ಅಲ್ಲಿಗೆ ಡಿ.ಕೆ. ಶಿವಕುಮಾರ್ ಬಂದರು. ಆಗ, ಶಿವಕುಮಾರ್ ಅವರನ್ನು ಕರೆದು ಸಿದ್ದರಾಮಯ್ಯ, ‘ಮೈಸೂರು - ಚಾಮರಾಜನಗರ ಭಾಗದ ಸಭೆ ಮಾಡಬೇಡಿ. ಸುದ್ದಿಗೋಷ್ಠಿಯನ್ನೂ ನಡೆಸಬೇಡಿ. ಕೊಡಗು ಜಿಲ್ಲೆಯಲ್ಲಿ ಬೇಕಾದರೆ ಸಭೆ ಮಾಡಿ’ ಎಂದರು.

ಸಿದ್ದರಾಮಯ್ಯ ಅವರಿಗೆ ಸಮಜಾಯಿಷಿ ಕೊಡಲು ಶಿವಕುಮಾರ್ ಮುಂದಾದರು. ‘ಇಲ್ಲ ಸರ್... ನಾನು ಧ್ರುವನಾರಾಯಣ್ ಜೊತೆ ಮಾತಾಡಿದ್ದೆ. ಹೋಗಲಿ, ಸಭೆ ಮಾಡಲ್ಲ ಬಿಡಿ’ ಎಂದರು.

‘ಎಲ್ಲರೂ ಅಧಿವೇಶನದಲ್ಲಿ ಇರುತ್ತಾರೆ. ಇಂಥ ಸಂದರ್ಭದಲ್ಲಿ ಅಲ್ಲಿ ಸಭೆ ನಡೆಸುವುದು ಬೇಡ. ನಾವಿಬ್ಬರು ಒಟ್ಟಿಗೆ ಇಲ್ಲದೇ ಇದ್ದರೆ ತಪ್ಪು ಸಂದೇಶ ರವಾನೆ ಆಗಲಿದೆ. ಬೇಕಾದರೆ ಕೊಡಗು ಭಾಗದಲ್ಲಿ ಸಭೆ ಮಾಡಿ’ ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

ಮಧ್ಯಪ್ರವೇಶಿಸಿದ ಕೆ. ಜೆ. ಜಾರ್ಜ್, ‘ನೀವು ಸಭೆ ಕರೆಯುವಾಗ ಸಾಹೇಬ್ರ ಗಮನಕ್ಕೆ ತರಬೇಕಾಗಿತ್ತು ಸರ್’ ಎಂದು ಶಿವಕುಮಾರ್‌ಗೆ ಹೇಳಿದರು.

ಚಿತ್ರಾವಳಿ



ಕರ್ನಾಟಕ ಲೇಖಕಿಯರ ಸಂಘವು ನಗರದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ವೈ.ಸಿ.ಭಾನುಮತಿ ಅವರಿಗೆ ‘ಎಚ್.ಎಸ್.ಪಾರ್ವತಿ ಪ್ರಶಸ್ತಿ’ಯನ್ನು ಪತ್ರಕರ್ತೆ ಡಾ.ವಿಜಯಾ ಪ್ರದಾನ ಮಾಡಿದರು. ಲೇಖಕಿ ಡಾ.ಕೆ. ಆರ್. ಸಂಧ್ಯಾ ರೆಡ್ಡಿ ಸಂಘದ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್, ವಿಮರ್ಶಕಿ ಎಚ್.ಎಲ್. ಪುಷ್ಪಾ, ರಂಗ ಕಲಾವಿದೆ ಎಂ.ಎಸ್.ವಿದ್ಯಾ ಇದ್ದಾರೆ –ಪ್ರಜಾವಾಣಿ ಚಿತ್ರ



ನಗರದಲ್ಲಿ ನಡೆದ 'ಬೆಂಗಳೂರು ಸಾಹಿತ್ಯ ಉತ್ಸವ'ದಲ್ಲಿ ಆಟಗಲಾಟ ಸಂಸ್ಥೆಯ ಮುಖ್ಯಸ್ಥ ಸುಬೋಧ್ ಶಂಕರ್ ಅವರು ಪತ್ರಕರ್ತ ಜೋಗಿ ಅವರಿಗೆ ಪುಸ್ತಕ ಬಹುಮಾನ ಪ್ರದಾನ ಮಾಡಿದರು. ಪತ್ರಕರ್ತ ಜಿ.ಎನ್.ಮೋಹನ್ ಇದ್ದಾರೆ

ದಶಕದ ಹಿಂದೆಯೇ ಗ್ರಾಮಸ್ಥರಿಂದ ಶ್ರದ್ಧಾಂಜಲಿ!

ತಮಿಳುನಾಡು ಪೊಲೀಸರಿಗೆ ನಕ್ಸಲ್ ಪ್ರಭಾ ಶರಣಾಗತಿ; ತಿಥಿ ಮಾಡಿದ್ದ ಕುಟುಂಬಸ್ಥರಿಗೆ ಆಶ್ಚರ್ಯ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ತಮಿಳುನಾಡು ಪೊಲೀಸರ ಮುಂದೆ ಭಾನುವಾರ ಶರಣಾಗಿರುವ ನಕ್ಸಲ್ ಹೊಸಗದ್ದೆ ಪ್ರಭಾ ಅಲಿಯಾಸ್ ಸಂಧ್ಯಾ ಮೃತಪಟ್ಟಿದ್ದಾರೆ ಎಂದು ಅವರ ಕುಟುಂಬಸ್ಥರು, ಗ್ರಾಮದವರು ದಶಕದ ಹಿಂದೆಯೇ ತಿಥಿ ನಡೆಸಿ, ಶ್ರದ್ಧಾಂಜಲಿ ಸಲ್ಲಿಸಿದ್ದರು.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಆಗುಂಬೆ ಸಮೀಪದ ಬಿದರಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸಗದ್ದೆ ಪ್ರಭಾ ಅವರ ಗ್ರಾಮ. ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡಿದ್ದ ಅವರು ತಂದೆಯ ಆರೈಕೆಯಲ್ಲೇ ಬೆಳೆದಿದ್ದರು.

ಎರಡು ದಶಕಗಳ ಹಿಂದೆ ನಕ್ಸಲ್ ಚಳವಳಿ ಮಲೆನಾಡಿನಲ್ಲಿ ವ್ಯಾಪಕಗೊಳ್ಳುತ್ತಿದ್ದ ಸಮಯದಲ್ಲೇ ನಕ್ಸಲ್ ಪಡೆ ಸೇರಿದ್ದರು. ನಂತರ ತಮ್ಮ ಹೆಸರನ್ನು ಪ್ರಭಾ ಎಂದು ಬದಲಿಸಿಕೊಂಡಿದ್ದರು. ಯೌವನದಲ್ಲಿ ಕಾಡು ಸೇರಿದ್ದ ಅವರು ನಂತರ ನಕ್ಸಲ್ ಚಟುವಟಿಕೆಯಲ್ಲಿ ಸಕ್ರಿಯರಾಗಿದ್ದ ಬಿ.ಜಿ. ಕೃಷ್ಣಮೂರ್ತಿ ಅವರನ್ನು ವರಿಸಿದ್ದರು.

ಕಾಯಿನ್‌ಬೂತ್‌ನಿಂದ ಬಂದಿತ್ತು ಮರಣದ ಕರೆ: ನಕ್ಸಲ್ ನಿಗ್ರಹ ಪಡೆ ಉಡುಪಿ ಜಿಲ್ಲೆಯ ಈದುವಿನಲ್ಲಿ ನಡೆಸಿದ ಎನ್‌ಕೌಂಟರ್‌ನಲ್ಲಿ ಕೆಲವು ನಕ್ಸಲರು ಹತರಾದ ನಂತರ ಪ್ರಭಾ ಸಹ ಭೂಗತವಾಗಿದ್ದರು. ಕುಟುಂಬಸ್ಥರ ಜತೆ ಸಂಪರ್ಕ ಕಡಿತಗೊಂಡಿತ್ತು. 2010ರ ಆಗಸ್ಟ್‌ನಲ್ಲಿ ಗ್ರಾಮದ ಮುಖಂಡರೊಬ್ಬರಿಗೆ ಕಾಯಿನ್‌ಬೂತ್‌ನಿಂದ ಕರೆ ಮಾಡಿದ್ದ ವ್ಯಕ್ತಿಯೊಬ್ಬರು, 'ನಿಮ್ಮೂರಿನ ಹುಡುಗಿ ಆರೋಗ್ಯ ಸಮಸ್ಯೆಯಿಂದ ಮೃತಪಟ್ಟಿದ್ದಾರೆ. ಅಂತ್ಯ ಸಂಸ್ಕಾರ ಮಾಡಿದ್ದೇವೆ. ಅವರ ಕುಟುಂಬಸ್ಥರಿಗೆ ವಿಷಯ ತಿಳಿಸಿ' ಎಂದಿದ್ದ. ಅಸ್ವಸ್ಥ ಇದ್ದ ಮಗಳು ಆರೋಗ್ಯದಲ್ಲಿ ಸೂಕ್ತ ಆರೈಕೆ ಸಿಗದೇ ಸತ್ತಿರಬಹುದು ಎಂದು ತಂದೆ ನಂಬಿದ್ದರು. ತಿಥಿ ಕಾರ್ಯ ಪೂರೈಸಿದ್ದರು. ಗ್ರಾಮಸ್ಥರು ಶ್ರದ್ಧಾಂಜಲಿ ಸಲ್ಲಿಸಿದ್ದರು.

ಪತಿ ಬಂಧನ ಶರಣಾಗತಿಗೆ ಕಾರಣ: ಕೇರಳ ಪೊಲೀಸರು ಈಚೆಗೆ ಪತಿ ಕೃಷ್ಣಮೂರ್ತಿ ಅವರನ್ನು ಬಂಧಿಸಿದ ನಂತರ ಪ್ರಭಾ ಖಿನ್ನತೆಗೆ ಒಳಗಾಗಿದ್ದರು. ಪಾರ್ಶ್ವವಾಯುವಿನಿಂದ ಬಲಗೈ ಸ್ವಾಧೀನ ಕಳೆದುಕೊಂಡಿದ್ದರು. ಸಮಾಜ ತೊರೆದು ಹೊರಗೀಗ ಆಗದ ಸ್ಥಿತಿ ತಲುಪಿದ್ದರು. ಹೀಗಾಗಿ, ಶರಣಾಗಲು ನಿರ್ಧರಿಸಿದ್ದರು ಗೊತ್ತಾಗಿದೆ.

ಪ್ರಭಾ ವಿರುದ್ಧ 41 ಪ್ರಕರಣಗಳು: ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ ಜಿಲ್ಲೆಯಲ್ಲಿ ಪ್ರಭಾ ವಿರುದ್ಧ 41 ಪ್ರಕರಣಗಳು ದಾಖಲಾಗಿವೆ. 'ಶಿವಮೊಗ್ಗ ಜಿಲ್ಲೆಯಲ್ಲಿ 4 ಪ್ರಕರಣಗಳಿವೆ. ವಾರಂಟ್ ಪಡೆದು ಶಿವಮೊಗ್ಗ ಕೇಂದ್ರ ಕಾರಾಗೃಹಕ್ಕೆ ಕರೆತರಲು ಪ್ರಯತ್ನಗಳು ನಡೆದಿವೆ. ನಂತರ ವಿಚಾರಣೆ ಆರಂಭಿಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮೀಪ್ರಸಾದ್ ಪ್ರತಿಕ್ರಿಯಿಸಿದರು.

ಪುಂಡರಿಗೆ ದೇಶದ್ರೋಹದ ದಂಡ

ಒಂದನೇ ಪುಟದಿಂದ

ಅಲ್ಲದೆ, ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದ ಪ್ರಮುಖ ಸ್ಥಳದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಗಳನ್ನು ಸ್ಥಾಪಿಸಲಾಗುವುದು. ಈ ಪ್ರತಿಮೆಗಳು ಸೂರ್ಯ- ಚಂದ್ರರು ಇರುವವರೆಗೂ ಇರಬೇಕು ಎಂದೂ ಮುಖ್ಯಮಂತ್ರಿ ಪ್ರಕಟಿಸಿದರು.

ಇದಕ್ಕೂ ಮುನ್ನ ಉಭಯ ಸದನಗಳಲ್ಲಿ ಎಲ್ಲ ಪಕ್ಷಗಳ ಸದಸ್ಯರು ಮಹಾರಾಷ್ಟ್ರದಲ್ಲಿ ಕನ್ನಡ ಬಾವುಟ ಸುಟ್ಟಿದ್ದು, ಬೆಂಗಳೂರಿನಲ್ಲಿ ಶಿವಾಜಿ ಪ್ರತಿಮೆಗೆ ಮಸಿ ಬಳಿದಿದ್ದು, ಬೆಳಗಾವಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ವಿರೂಪಗೊಳಿಸಿದ್ದನ್ನು, ಖಾನಾಪುರದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಅವಮಾನ ಮಾಡಿ ಕನ್ನಡ ಬಾವುಟ ಸುಟ್ಟಿದ್ದನ್ನು ಖಂಡಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಲು ಆಗ್ರಹಿಸಿದರು.

ವಿಧಾನಸಭೆಯಲ್ಲಿ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿ ಬೊಮ್ಮಾಯಿ, 'ದೇಶಭಕ್ತರ, ನಾಡಿನ ಭಕ್ತರ ಪ್ರತಿಮೆಗಳನ್ನು ವಿರೂಪಗೊಳಿಸುವುದು ಮತ್ತು ಮಸಿ ಬಳಿದು ಅವಮಾನ ಮಾಡುವವರ ವಿರುದ್ಧ ದೇಶ ದ್ರೋಹ ಕಾಯ್ದೆ ಹಾಕಿ, ಆ ಕಾಯ್ದೆಯ ಅನ್ವಯವೇ ವಿಚಾರಣೆ ನಡೆಸಲಾಗುವುದು. ಇಂತಹ ಕೃತ್ಯಗಳನ್ನು ನಡೆಸುವವರ ಮತ್ತು ಅದರ ಹಿಂದಿರುವವರ ವಿರುದ್ಧ ಗೂಂಡಾ ಕಾಯ್ದೆ ಹಾಕುತ್ತೇವೆ' ಎಂದರು.

> ರಾಯಣ್ಣ ಪ್ರತಿಮೆ ವಿರೂಪಗೊಳಿಸಿದವರು ಮತ್ತು ಶಿವಾಜಿ ಪ್ರತಿಮೆಗೆ ಮಸಿ ಬಳಿದವರನ್ನು ಗಡಿಪಾರು ಮಾಡಬೇಕು. ಈ ಕೃತ್ಯ ಎಸಗಿದವರು ಬುದ್ಧಿಹೀನರು
> **ಸಿದ್ದರಾಮಯ್ಯ**, ವಿರೋಧ ಪಕ್ಷದ ನಾಯಕ

> ಎಂಇಎಸ್‌ನವರು ಹೇಡಿಗಳು, ಅವರು ಗಂಡಸರೇ ಆದರೆ ಹಗಲಿನಲ್ಲಿ ಬಂದು ರಾಯಣ್ಣನ ಪ್ರತಿಮೆ ಮುಟ್ಟಲಿ, ಕನ್ನಡಿಗರು ಏನು ಎಂಬುದನ್ನು ತೋರಿಸುತ್ತೇವೆ
> **ಕೆ.ಎಸ್. ಈಶ್ವರಪ್ಪ**, ಗ್ರಾಮೀಣಾಭಿವೃದ್ಧಿ ಸಚಿವ

'ಇಷ್ಟು ದಿನ ಶಿಸ್ತ ಬಂಧನ ಆಗುತ್ತಿತ್ತು. ಇಂತಹ ಘಟನೆಗಳಿಗೆ ಪ್ರಚೋದನೆ ನೀಡುತ್ತಾ ಹಿಂದೆ ನಿಂತು ಕೆಲಸ ಮಾಡುವ ಪ್ರಮುಖರನ್ನು ಬಂಧಿಸುವ ಕೆಲಸ ಮಾಡಿದ್ದೇವೆ. 26 ಮಂದಿಯನ್ನು ಬಂಧಿಸಲಾಗಿದೆ' ಎಂದು ಹೇಳಿದರು.

'ರಾಜ್ಯದಲ್ಲಿ ಎಂಇಎಸ್ ಸಂಘಟನೆಯನ್ನು ನಿಷೇಧಿಸುವ ಸಂಬಂಧ ಕಾನೂನು ಪರಿಶೀಲಿಸಲಾಗುವುದು. ಅಲ್ಲದೆ, ಅಂತಹ ಸಂಘಟನೆಯ ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ವಿಚಾರದಲ್ಲಿ ಯಾವುದೇ ರಾಜಕೀಯ ಒತ್ತಡಗಳಿಗೂ ಮಣಿಯುವುದಿಲ್ಲ' ಎಂದು ತಿಳಿಸಿದರು.

'ರಾಜ್ಯದ ಗಡಿ ಭಾಗಗಳಲ್ಲಿ ಅಭಿವೃದ್ಧಿಗೆ ಇನ್ನಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಬಗ್ಗೆ ಸಂಕಲ್ಪ ಮಾಡುತ್ತೇವೆ. ಮಹಾರಾಷ್ಟ್ರದ ರಾಜಕೀಯ ಚಟುವಟಿಕೆಯಿಂದ ಇಂತಹ ಘಟನೆಗಳು ನಡೆಯುತ್ತಿವೆ. ಆದರೂ ರಾಜ್ಯಗಳ ಜನರ ಮಧ್ಯೆ ವಿಶ್ವಾಸಕ್ಕೆ ಕೊರತೆ ಇಲ್ಲ. ಸಾಮರಸ್ಯದಿಂದಲೇ ಇದ್ದಾರೆ. ಆದರೆ, ಗಡಿ ತಂಟೆ ಮಾಡುವ ಪುಂಡರಿಗೆ ತಕ್ಕ ಪಾಠ ಕಲಿಸಲಾಗುವುದು' ಎಂದು ಬೊಮ್ಮಾಯಿ ಹೇಳಿದರು.

'ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಬಂಧಿತರಾದವರನ್ನು ತನಿಖೆ ಮಾಡಿ, ಇವರ ಹಿಂದಿನ ಶಕ್ತಿಗಳು ಯಾರು ಮತ್ತು ಯಾರ ನಿರ್ದೇಶನದ ಮೇರೆಗೆ ಪಿತೂರಿ ಮಾಡಿದ್ದಾರೆ ಎಂಬುದನ್ನು ಬಯಲಿಗೆಳೆಯುತ್ತೇವೆ. ತನಿಖೆಯ ಬಳಿಕ ಅದನ್ನು ಖಂಡಿತಾ ಬಹಿರಂಗಪಡಿಸಿ ರಾಜ್ಯದ ಜನರ ಗಮನಕ್ಕೆ ತರುತ್ತೇವೆ' ಎಂದರು.

ಧಾರವಾಡ: 9 ಡಿಗ್ರಿ ಸೆಲ್ಸಿಯಸ್ ತಾಪಮಾನ

ಬೆಂಗಳೂರು: ರಾಜ್ಯದಲ್ಲಿ ಒಂದು ವಾರದಿಂದ ತಾಪಮಾನ ಕ್ಷೀಣಿಸುತ್ತಿದ್ದು, ಧಾರವಾಡದಲ್ಲಿ 9.7 ಡಿಗ್ರಿ ಸೆಲ್ಸಿಯಸ್ ಅತಿ ಕಡಿಮೆ ತಾಪಮಾನ ಸೋಮವಾರ ದಾಖಲಾಗಿದೆ.

ತಾಪಮಾನ ಕುಸಿತದಿಂದ ರಾಜ್ಯದಲ್ಲಿ ಚಳಿಯ ತೀವ್ರತೆಯೂ ಹೆಚ್ಚಾಗಿತ್ತು. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಸೋಮವಾರ ಮುಂಜಾನೆ ದಟ್ಟವಾದ ಮಂಜು ಮುಸುಕಿದ ವಾತಾವರಣವಿತ್ತು. ಮಂಜು ಆವರಿಸಿದ್ದರಿಂದ ಗೋಚರತೆ ಕ್ಷೀಣಿಸಿ, ವಾಹನಗಳ ಸಂಚಾರಕ್ಕೂ ಸಮಸ್ಯೆಯಾಗಿತ್ತು.

ಎಲ್ಲೆಲ್ಲಿ ಕಡಿಮೆ ತಾಪಮಾನ: ಆಗುಂಬೆ ಹಾಗೂ ಬಾಗಲಕೋಟೆಯಲ್ಲಿ 10 ಡಿಗ್ರಿ ಸೆಲ್ಸಿಯಸ್ ಕಡಿಮೆ ತಾಪಮಾನ ದಾಖಲಾಗಿದೆ. ಬೆಳಗಾವಿ ವಿಮಾನ ನಿಲ್ದಾಣ, ಬೀದರ್, ವಿಜಯಪುರ, ಹಾವೇರಿ 11, ಶಿವಮೊಗ್ಗ, ಚಿಂತಾಮಣಿ, ದಾವಣಗೆರೆ, ಕೊಪ್ಪಳ 12, ಚಿತ್ರದುರ್ಗ, ರಾಯಚೂರು 13, ಬೆಳಗಾವಿ, ಬೆಂಗಳೂರು, ಚಿಕ್ಕಮಗಳೂರು ಹಾಗೂ ಮಂಡ್ಯದಲ್ಲಿ ತಲಾ 14 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

'ಈ ವರ್ಷದ ಹವಾಮಾನ ವೈಪರೀತ್ಯಗಳಿಂದ ತಾಪಮಾನ ಕುಸಿತವಾಗುತ್ತಿದೆ. ಚಳಿಗಾಲ ಈಗಾಗಲೇ ಆರಂಭಗೊಂಡಿದ್ದು, ತಾಪಮಾನ ಕ್ಷೀಣಿಸಿ ಚಳಿಯ ತೀವ್ರತೆಯೂ ಹೆಚ್ಚಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನಗಳವರೆಗೆ ಒಣಹವೆ ಮುಂದುವರಿಯಲಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಸವೇಶ್ವರರ ಚಿತ್ರಕ್ಕೆ ಅವಮಾನ

ಒಂದನೇ ಪುಟದಿಂದ

ಆ ಗ್ರಾಮದ ಬಸವೇಶ್ವರ ವೃತ್ತಕ್ಕೆ ಹಾಕಿರುವ ಫೋಟೊಗೆ ಸೆಗಣಿ ಸವರಿ, ಅದೇ ವೃತ್ತದಲ್ಲಿದ್ದ ಕನ್ನಡ ನಾಮಫಲಕಕ್ಕೆ ಮಸಿ ಬಳಿದಿದ್ದಾರೆ. ಅಲ್ಲಿನ ಗ್ರಾಮ ಪಂಚಾಯ್ತಿ ಆವರಣದಲ್ಲಿದ್ದ ಕನ್ನಡ ಬಾವುಟವನ್ನೂ ಸುಟ್ಟು ಹಾಕಿದ್ದಾರೆ. ಕಿಡಿಗೇಡಿಗಳ ಕೃತ್ಯವನ್ನು ಕನ್ನಡಪರ ಸಂಘಟನೆಗಳ ಮುಖಂಡರು ಖಂಡಿಸಿದ್ದಾರೆ.

'ಮಹಾ ಮಾನವತಾವಾದಿ ಬಸವಣ್ಣನವರ ಫೋಟೊಗೆ ಸೆಗಣಿ ಮೆತ್ತಿ ಅವಮಾನಿಸಿರುವುದು ಖಂಡನೀಯ. ಅವಮಾನಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ರೊಟ್ಟಿ ಒತ್ತಾಯಿಸಿದ್ದಾರೆ.



ಖಾನಾಪುರ ತಾಲ್ಲೂಕಿನ ಹಲಸಿ ಗ್ರಾಮದಲ್ಲಿ ಬಸವೇಶ್ವರ ಚಿತ್ರಕ್ಕೆ ಸೆಗಣಿ ಮೆತ್ತಿ ಅವಮಾನಿಸಿರುವುದು

ಎಂಇಎಸ್ ನಿಷೇಧಕ್ಕೆ ಕರವೇ ಆಗ್ರಹ

ಒಂದನೇ ಪುಟದಿಂದ

'ಇದೇ 29ಕ್ಕೆ ಬೆಂಗಳೂರಿನಲ್ಲಿ ಹೋರಾಟಗಾರರ ಸಭೆ ಕರೆಯಲಾಗಿದೆ. ರಾಜ್ಯದಲ್ಲಿ ಎಂಇಎಸ್ ನಿಷೇಧಿಸುವಂತೆ ಆಗ್ರಹಿಸಿ ಮತ್ತು ಆ ಸಂಘಟನೆಯವರ ಪುಂಡಾಟ ಖಂಡಿಸಿ ಕರ್ನಾಟಕ ಬಂದ್‌ಗೆ ಕರೆ ನೀಡುವ ಬಗ್ಗೆ ಅಂದು ಚರ್ಚಿಸಲಾಗುವುದು' ಎಂದು ಕರವೇ ಪ್ರವೀಣ್ ಶೆಟ್ಟಿ ಬಣದ ಅಧ್ಯಕ್ಷ ಪ್ರವೀಣ್ ಶೆಟ್ಟಿ ತಿಳಿಸಿದರು.

ಎಂಇಎಸ್ ಕೃತ್ಯಗಳ ವಿರುದ್ಧ ಆಕ್ರೋಶ ವ್ಯಕ್ತವಾಯಿತು. ಕನ್ನಡ ಬಾವುಟಗಳು ರಾರಾಜಿಸಿದವು. ಮುಂಜಾಗ್ರತೆಯಾಗಿ ಟೋಲ್‌ನಲ್ಲಿ 200ಕ್ಕೂ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

ಆನಂದರಾವ್ ವೃತ್ತ, ಬೆಂಗಳೂರು-560009. ಫೋನ್: 080-22870060
ಫ್ಯಾಕ್ಸ್: 080-22875798 ಇ-ಮೇಲ್: dmekarnataka@yahoo.com

NO.: ME/Tender/46/2021-22 **Date: 20-12-2021**

ಮರು ಅಲ್ಪಾವಧಿ ಟೆಂಡರ್ ಅಧಿಸೂಚನೆ-ಎರಡು ಕವರ್ ಪದ್ಧತಿ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ **ಡಿಮಾನ್ಸ್, ಧಾರವಾಡ ಆಸ್ಪತ್ರೆಗೆ ಹಾಗೂ ಇತರೆ ವೈದ್ಯಕೀಯ ಕಾಲೇಜು / ಆಸ್ಪತ್ರೆಗಳಿಗೆ ಅವಶ್ಯಕವಾಗಿ ಬೇಕಾಗಿರುವ MRI ಉಪಕರಣವನ್ನು** ಖರೀದಿಸುವ ಸಲುವಾಗಿ ವೈದ್ಯಕೀಯ ಉಪಕರಣಗಳ / ಪರಿಕರಗಳ ಪ್ರತಿಷ್ಠಿತ ತಯಾರಕರು / ಅಧಿಕೃತ ಪ್ರತಿನಿಧಿಗಳಿಂದ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂ, ಇಎಂಡಿ ಮತ್ತು ವಿವರಗಳನ್ನು **http://www.eproc.karnataka.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಿ ಡೌನ್‌ಲೋಡ್ ಮಾಡಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬಹುದಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಬೇಕು.

ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 21-12-2021.
ಬಿಡ್ ಪೂರ್ವಭಾವಿ ಸಭೆ ದಿನಾಂಕ: 23-12-2021 ಅಪರಾಹ್ನ 3.00 ಗಂಟೆಗೆ.
ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 27-12-2021 ಸಾಯಂಕಾಲ 5.00 ಗಂಟೆಗೆ ಮುಂಚಿತವಾಗಿ.
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 28-12-2021.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು - 560009 ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 080-22870060/22287784/22873151 ವಿಸ್ತರಣೆ ಸಂಖ್ಯೆ: 305/207 ಸಂಪರ್ಕಿಸಬಹುದು. ಟೆಂಡರ್ ದಾಖಲೆ ಹಾಗೂ ಉಪಕರಣಗಳ ವಿವರಗಳನ್ನು ನಿರ್ದೇಶನಾಲಯದ ವೆಬ್‌ಸೈಟ್: **http://www.karunadu.gov.in/dmekarnataka**ನಲ್ಲಿ ವೀಕ್ಷಿಸಬಹುದಾಗಿದೆ.

ವಾಸಾಸಂಇ/ಬೆಂ.ನ/ಅಡ್ವರ್ಟೋ/2458/2021-22 ಸಹಿ/- ನಿರ್ದೇಶಕರು, ವೈದ್ಯಕೀಯ ಶಿಕ್ಷಣ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ, ಕಲಬುರಗಿ

ಸಂ. ಕಾನಿಅ/ಲೋಇ/ಕವಿ/ತಾಶಾ-2/ಟೆಂಡರ್ ಅಧಿಸೂಚನೆ/2021-22/5704 ದಿನಾಂಕ : 16-12-2021

:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ 01 ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ 142413, 2) ಕಾಮಗಾರಿ ಅಂದಾಜು ಮೊತ್ತ : ರೂ. 75.00 ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : 22-12-2021 (17.30 ಗಂಟೆ), 5) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 23-12-2021 (17.30 ಗಂಟೆ), 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 27-12-2021 (16.30 ಗಂಟೆ), 7) ಆರ್ಥಿಕ ಬಿಡ್ ತೆರೆಯುವ ದಿನಾಂಕ : 30-12-2021 (11.30 ಗಂಟೆ), 8) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ. 9) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 10) ಅಂತರ್ಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/824/ಎಂ.ಸಿ.&ಎ/2021-22

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರವರ ಕಚೇರಿ ಕನೀನಿನಿ ಘಎದಂಕಾ ವಿಭಾಗ ನಂ3 ಬೀಳಗಿ

ಸಂ:ಕನೀನಿನಿ:ಘಎದಂಕಾ;ವಿ3:ಡಿಬಿ:ಟೆಂಡರ:2021-22/1668&1669 ದಿನಾಂಕ:-18.12.2021

: : ಅಲ್ಪಾವಧಿ ಶೇಕಡಾವಾರು ಟೆಂಡರ ಅಧಿಸೂಚನೆ : :
(4701 ಕಾಮಗಾರಿ)
(ಇ-ಪ್ರಕ್ಯೂರ್ಮೆಂಟ್ ಮುಖಾಂತರ ಮಾತ್ರ)

ಮೆ:ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ಬೆಂಗಳೂರು ಇವರ ಪರವಾಗಿ ಈ ವಿಭಾಗದ ಅಡಿಯಲ್ಲಿ ಸಸಾಲಟ್ಟಿ ಶಿವಲಿಂಗೇಶ್ವರ ಏತ ನೀರಾವರಿ ಯೋಜನೆ, ಮಂಟೂರ-ಮಹಾಲಕ್ಷ್ಮೀ ಏತ ನೀರಾವರಿ ಯೋಜನೆ ಹಾಗೂ ಮೆಳ್ಳಿಗೇರಿ-ಹಲಗಲಿ ಏತ ನೀರಾವರಿ ಯೋಜನೆ ಕನ್ಸಲ್ಟೆನ್ಸಿ ಕಾಮಗಾರಿಗಳಿಗೆ ಅರ್ಹ (As per e-procurement portal) ಗುತ್ತಿಗೆದಾರರಿಂದ ಮೊಹರಾದ ಶೇಕಡವಾರು ದರದ ಅಲ್ಪಾವಧಿ ಟೆಂಡರನ್ನು ನಿಗದಿಪಡಿಸಿ ಕರೆಯಲಾಗಿದೆ. ಸದರಿ ಕಾಮಗಾರಿಗಳ ಇಂಡೆಂಟ್ ನಂ: KNNL/2021-22/LI/WORK_INDENT32119, KNNL/2021-22/LI/WORK_INDENT32120 ಗಳನ್ನು ಇ-ಪ್ರಕ್ಯೂರ್ಮೆಂಟ್ ಮೂಲಕ ಟೆಂಡರ ಕರೆಯಲಾಗಿದೆ.

1)ಈ ಕಾಮಗಾರಿಯ ಅಂದಾಜು ಮೊತ್ತ ರೂ.99.83 ಲಕ್ಷ ರಿಂದ ರೂ.199.81 ಲಕ್ಷಗಳು ಇರುತ್ತವೆ. 2) ಈ ಕಛೇರಿಯಲ್ಲಿ ಪೂರ್ವಬಾವಿ ಬಿಡ್ ಸಭೆ ದಿನಾಂಕ:20.12.2021 3) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿ ಪಡಿಸಿದ ದಿನಾಂಕ :-21.12.2021 ಸಂಜೆ 5.30 ಘಂಟೆವರೆಗೆ. 4) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:-27.12.2021 ಸಂಜೆ 4.00 ಘಂಟೆವರೆಗೆ. 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:29.12.2021 ಬೆಳಿಗ್ಗೆ 11.00 ಘಂಟೆಯ ನಂತರ ತೆರೆಯಲಾಗುವುದು 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ

ಗುತ್ತಿಗೆದಾರರ ಅರ್ಹತೆ/ ಟೆಂಡರ್ ನಿಯಮಗಳು/ ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ/ ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ: 08425-275228 ರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-(ಬಸಪ್ಪ ಬಿ)
ಕಾರ್ಯನಿರ್ವಾಹಕ ಇಂಜನೀಯರರು
ಕನೀನಿನಿ ಘಎದಂಕಾ ವಿಭಾಗ ನಂ3 ಬೀಳಗಿ

DIPR/BGK/RO-NO-411/MCA/2021-22

ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ಸಂಖ್ಯೆ: ನಸದೊ/ತಾಂ.ವಿ/ಟಿ.ಎನ್.ನಂ.12/2021-22 ದಿನಾಂಕ: 20-12-2021

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು **2021-22ನೇ ಸಾಲಿನ 15ನೇ ಹಣಕಾಸು ಯೋಜನೆ, ನಗರಸಭಾ ನಿಧಿಯಡಿ** ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ **ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್** ಮೂಲಕ ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆದಾರರಿಗೆ ಮೀಸಲಾದ ಕಾಮಗಾರಿ
1) DMA/2021-22/WS/WORK_INDENT124190
2) DMA/2021-22/WT/WORK_INDENT124223
3) DMA/2021-22/OW/WORK_INDENT124238

ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆದಾರರಿಗೆ ಮೀಸಲಾದ ಕಾಮಗಾರಿ
4) DMA/2021-22/BD/WORK_INDENT124237

ಸಾಮಾನ್ಯ ವರ್ಗದ ಕಾಮಗಾರಿಗಳು
5) DMA/2021-22/WT/WORK_INDENT124220
6) DMA/2021-22/OW/WORK_INDENT124227
7) DMA/2021-22/RD/WORK_INDENT124229
8) DMA/2021-22/RD/WORK_INDENT124232
9) DMA/2021-22/OW/WORK_INDENT124236
10) DMA/2021-22/EL/WORK_INDENT124235
11) DMA/2021-22/OW/WORK_INDENT124230
12) CMC/DBP/DNLUM/NIGHTSHELTER/2021-22
13) DMA/2021-22/OW/WORK_INDENT124240
14) DMA/2021-22/IND12814
15) CMC/DBP/DPR/ROPLANT/2021-22
16) DMA/2021-22/OW/WORK_INDENT115923/call-2
17) DMA/2019-20/OW/WORK_INDENT100505/call-2
18) DMA/2021-22/IND12815
19) DMA/2021-22/EL/WORK_INDENT124234

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (www.eproc.karnataka.gov.in) ಮುಖಾಂತರ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 05-01-2022ರ 17.00 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 06-01-2022ರ 17.01 ಗಂಟೆಗೆ.** ಕಾಮಗಾರಿಯ ಕಾಲಾವಧಿ 90 ದಿನಗಳಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ಪಡೆದು ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/-	ಸಹಿ/-	ಸಹಿ/-
ಉಪಾಧ್ಯಕ್ಷರು	ಅಧ್ಯಕ್ಷರು	ಪೌರಾಯುಕ್ತರು
ನಗರಸಭೆ,ದೊಡ್ಡಬಳ್ಳಾಪುರ.	ನಗರಸಭೆ,ದೊಡ್ಡಬಳ್ಳಾಪುರ.	ನಗರಸಭೆ,ದೊಡ್ಡಬಳ್ಳಾಪುರ.

ವಾಸಾಸಂಇ/ಬೆಂ.ಗ್ರಾ/322/ಎಎಎ/2021-22

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.

www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810

ಕೆಳಗೆ ಸೂಚಿಸಿರುವ ಅಲ್ಪಾವದಿ, ಐಟಂವಾರು ಟೆಂಡರ್ ಪ್ರಕಟಣೆಗಳ ಅಧಿಸೂಚನೆ ದಿನಾಂಕ: 17.12.2021

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಈ ಕೆಳಗಿನಂತೆ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರು ಭಾಗವಹಿಸಬಹುದು. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ಸಂಜೆ 4:00ರ ವರೆಗೆ ಈ ಕೆಳಗಿನಂತೆ ಸಲ್ಲಿಸಬಹುದಾಗಿರುತ್ತದೆ. ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 0.40 ಲಕ್ಷಗಳು ಹಾಗೂ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 84.69 ಲಕ್ಷಗಳಾಗಿರುತ್ತದೆ ಕನಿಷ್ಠ ಇ.ಎಂ.ಡಿ ರೂ.0.01 ಹಾಗು ಗರಿಷ್ಠ ಇ.ಎಂ.ಡಿ ಮೊತ್ತ ರೂ 1.69 ಲಕ್ಷಗಳಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕ್ರಮ ಸಂಖ್ಯೆ	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ	ಕರೆಯ/ಕಾರಿಗೆಂಡಂ ಸಂಖ್ಯೆ	ಗುತ್ತಿಗೆದಾರರ ಅರ್ಹತೆ	ಕೊನೆಯ ದಿನಾಂಕ
1.	16/2021-22	1 & 2	ಕರೆ-2	4ನೇ ದರ್ಜೆ & ಮೇಲ್ಪಟ್ಟು	27.12.2021
2.	17/2021-22	1 ರಿಂದ 91	ಕರೆ-1	3ನೇ ದರ್ಜೆ & ಮೇಲ್ಪಟ್ಟು	05.01.2022

ಕಾರ್ಯಪಾಲಕ ಇಂಜನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

Karnataka Neeravari Nigam Limited
(A Government of Karnataka Undertaking)
Office of The Executive Engineer, KNNL, No. 5, Bhadra Canal Division, Davanagere.
Ph.: 08192-264669 e-mail: eebcddvg@yahoo.co.in

No: EE/KNNL/BCD-5/DVG/AE-2/BUILDING-TENDER/2779/7/2021-22 DATE : 17/12/2021

CORRIGENDUM-1 (Through e-procurement only)

Ref: Short Term Re-Notification: No: EE/KNNL/BCD-5/DVG/AE-2/2701- IB/2768/10/2021-22 DATE\ : 15/12/2021.

The " Short term percentage tender" invited through e-portal by the undersigned vide reference. The Calender of Events are modified due to technical reasons as below.

Calender of Events

Sl.No		Earlier Dates	Revised Dates
1)	The Contractor can access e-tendering documents.	From 17.12.2021 to 23.12.2021 up to 4.00 PM	From 18.12.2021 to 27.12.2021 up to 4.00 PM
2)	Last Date and time for tender queries	21.12.2021 up to 4.00 PM	22.12.2021 up to 4.00 PM
3)	Last date for submission of completed tender documents.	23.12.2021 up to 4.00PM	27.12.2021 up to 4.00PM
4)	Opening of Technical Bid	24.12.2021 up to 4.30PM	28.12.2021 up to 4.30PM
5)	Opening of Financial Bid	After the Approval of Technical Bid	After the Approval of Technical Bid

All other conditions remain same.

Sd/-Executive Engineer,
KNNL, No.5 Bhadra Canal Division, Davangere.

ವಾಸಾಇ/ದಾವಣಗೆರೆ/541/ಎಂಸಿಎ/2021-22

ಕರ್ನಾಟಕ ಸರ್ಕಾರ - ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,
ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ನಂಜನಗೂಡು, ಮೈಸೂರು ಜಿಲ್ಲೆ

Telephone Nos E.O. Office:08221:226245 Email I.D. sstnanjangud@gmail.com

ಸಂಖ್ಯೆ: No.SST/E-Tender/Gutthige/1/2021-23 Date :16-12-2021

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
ಇ-ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ ಪ್ರಕಾರ)

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಒಳಾಂಗಣ, ಹೊರಾಂಗಣ, ಪಾರ್ಕಿಂಗ್ ಸ್ಥಳ ಹಾಗೂ ಕಪಿಲಾನದಿ ಸ್ನಾನಘಟ್ಟ ಇತ್ಯಾದಿ ಸ್ಥಳಗಳಲ್ಲಿ ಭದ್ರತಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದು ಕೆಲಸ ನಿರ್ವಹಿಸುಕೊಳ್ಳುವ ಬಗ್ಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999, ನಿಯಮವಳಿಗಳು 2000ರ ಪ್ರಕಾರ ಅರ್ಹ ನೊಂದಾಯಿತ ಸೆಕ್ಯೂರಿಟಿ ಏಜೆನ್ಸಿರವರುಗಳಿಂದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಅವಧಿಯು ಕೆಲಸದ ಆದೇಶ ನೀಡಿದ ದಿನಾಂಕದಿಂದ ಒಂದು ವರ್ಷ ಅವಧಿಯಾಗಿದ್ದು, ಆಪೇಕ್ಷೀಸುವ ಅರ್ಹ ಸೆಕ್ಯೂರಿಟಿ ಏಜೆನ್ಸಿರವರು ಷರತ್ತು ಮತ್ತು ನಿಬಂಧನೆಗಳನ್ನು ಗಮನಿಸಿ, ಭದ್ರತಾ ಸಿಬ್ಬಂದಿಗೆ ಮಾಸಿಕ ಸೇವಾಶುಲ್ಕ ದರವನ್ನು ಸೂಚಿಸಿ ದ್ವಿ-ಲಕೋಟೆ ಪದ್ಧತಿಯ ಪ್ರಕಾರ ಟೆಂಡರ್‌ಗಳನ್ನು **Website:https://eproc.karnataka.gov.in** ಮೂಲಕ ಸಲ್ಲಿಸುವುದು.

ಕ್ರ.ಸಂ.	ಟೆಂಡರ್‌ನ ವಿವರ	ಇ.ಎಂ.ಡಿ ಮೊತ್ತ
1	ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಒಳಾಂಗಣ, ಹೊರಾಂಗಣ, ಪಾರ್ಕಿಂಗ್ ಸ್ಥಳ ಹಾಗೂ ಕಪಿಲಾನದಿ ಸ್ನಾನಘಟ್ಟ ಇತ್ಯಾದಿ ಸ್ಥಳಗಳಲ್ಲಿ ಭದ್ರತಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದು ಕೆಲಸ ನಿರ್ವಹಿಸು ಕೊಳ್ಳುವ ಗುತ್ತಿಗೆ ಹಕ್ಕನ್ನು ಪಡೆದುಕೊಳ್ಳಲು ಗುತ್ತಿಗೆ ಹಕ್ಕಿನ ಬಗ್ಗೆ.	ರೂ.1,50,000=00

ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಇ-ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ

1	ಇ-ಪೋರ್ಟಲ್ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	20-12-2021	ರ ನಂತರ
2	ಇ-ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	07-01-2022	ಸಂಜೆ 5.00 ಗಂಟೆಯವರಗೆ
3	ಇ-ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	10-01-2022	ಬೆಳಿಗ್ಗೆ 11.00 ನಂತರ

ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಸ್ಥಾನ, ನಂಜನಗೂಡು

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ನಾ.ಬ.ದಂ.ಕಾಲುವೆ,
ವಿಭಾಗ ಸಂ.6, ಚಿಕ್ಕಹೊನ್ನಕುಣೆ-584111, ತಾ: ದೇವದುರ್ಗ, ಜಿ: ರಾಯಚೂರು.

ಸಂಖ್ಯೆ/ಕೃಭಾಜನಿನಿ/ನಾಬದಂಕಾ/ವಿ-6/ತಾಶಾ-2/Satff Qtr/ಟೆಂಡರ್/2021-22/727, ದಿನಾಂಕ: 18-12-2021.

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ (ನಿ.) ಬೆಂಗಳೂರು/ಆಲಮಟ್ಟಿ ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಂದ, ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮುಖಾಂತರ ಕರೆಯಲಾಗಿದ್ದು, ಕಾಮಗಾರಿಗಳನ್ನು percentage ಆಧಾರದಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ ಅಪ್ಲೋಡ್ ಮಾಡುವುದು.

Construction of Staff Quarters at Chikkahonnakuni camp.(Indent No.20478)

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು ಈ ಕೆಳಕಂಡಂತಿವೆ.

1) ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 20.12.2021 ರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. 2) Pre Bid ಸಭೆಯನ್ನು ವಿಭಾಗ ಕಛೇರಿಯಲ್ಲಿ ದಿನಾಂಕ: **22.12.2021ರ ಬೆಳ್ಳಗೆ:11.00 ಗಂಟೆಗೆ.** 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **29.12.2021 ರ ಸಂಜೆ: 4.00** ಗಂಟೆಯವರೆಗೆ. 4) ತಾಂತ್ರಿಕ ಬಿಡ್‌ನ್ನು (Two covers system) ದಿನಾಂಕ: 30.12.2021 ರ ಸಂಜೆ: 5.00 ಗಂಟೆಗೆ ಮೇಲಿನ ಕಛೇರಿಯಲ್ಲಿ ತೆರೆಯಲಾಗುವುದು. 5) ಆರ್ಥಿಕ ಬಿಡ್‌ನ್ನು (Two covers system) "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" ತೆರೆಯಲಾಗುವುದು.

ಕಾಮಗಾರಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು, ಸೂಚನೆಗಳು ಮತ್ತು ಷರತ್ತು/ನಿಬಂಧನೆಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಜಾಲತಾಣದಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಿಂದ ಕಛೇರಿಯ ದಿನಗಳಂದು ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ನಾಬದಂಕಾಲುವೆ, ವಿಭಾಗ ಸಂ.6, ಚಿಕ್ಕಹೊನ್ನಕುಣೆ-584111.

ವಾ.ಸಾ.ಸಂ.ಇ/ರಾಯಚೂರು/452/ಎಂ.ಸಿ.&ಎ/2021-22

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ

ಕಹಾಮ ಸಂಕೀರ್ಣ, ಡಾ: ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು-560 029
ಫೋನ್: 26096832/26096910 ಫ್ಯಾಕ್ಸ್: 080-25536105 Email: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್-374/2021-22 ದಿನಾಂಕ: 18.12.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ, ಬೆಂಗಳೂರು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://eproc.karnataka.gov.in ಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl No.	Item Description	Quantity	EMD (Rs.)
1	Master production of Two numbers of Television commercial (TVC) as a single project. (Net rate inclusive of GST shall be quoted)	Single job work as detailed in tender document	60,000/-

ಟೆಂಡರ್ ಪ್ರಾರಂಭವಾಗುವ ದಿನಾಂಕ	From 18.12.2021
ಟೆಂಡರ್ ಪೂರ್ವಭಾವಿ ಸಭೆ ದಿನಾಂಕ	23.12.2021 at 11.00 AM
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	on or before 27.12.2021 up to 5.00 PM
ತಾಂತ್ರಿಕ ಟೆಂಡರ್ ತೆರಯುವ ದಿನಾಂಕ	on 28.12.2021 at 5.05 PM
ವಾಣಿಜ್ಯ ಟೆಂಡರ್ ತೆರಯುವ ದಿನಾಂಕ	ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/-
ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಂಪೌಂಡ್, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ,
ಬೆಂಗಳೂರು 560029, (ಕರ್ನಾಟಕ). ದೂರವಾಣಿ ಸಂಖ್ಯೆ: 080-29753354/56,
ಇ-ಮೇಲ್: karbuildworkerswelfare@gmail.com

No. KBOCWWB/ Tenders/TKC-01/2021-22 **Date: 18.12.2021**

ಟೆಂಡರ್ ಪ್ರಕಟಣೆ

ಈ ಅಧಿಸೂಚನೆಯಲ್ಲಿ ವಿವರಿಸಿದ ಉಲ್ಲೇಖದ ನಿಯಮಗಳ ಪ್ರಕಾರ ಟೆಂಡರ್‌ಗಳನ್ನು (ಎರಡು ಬಿಡ್ ವ್ಯವಸ್ಥೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಈ ಕೆಳಗಿನ ಸರಕುಗಳು ಮತ್ತು ನಿಗಧಿಪಡಿಸಿದ ಅವಧಿಗಾಗಿ ಅರ್ಹ ಏಜನ್ಸಿಗಳಿಂದ ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಟೆಂಡರ್‌ನ ಹೆಸರು	ಟೆಂಡರ್ ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಇ.ಎಮ್.ಡಿ ಠೇವಣಿ ಮೊತ್ತ ರೂ.ಗಳಲ್ಲಿ
DOL/2021-22/ IND273	ಬೆಳಗಾವಿ ಪ್ರಾದೇಶಿಕ ಅಧೀನದ ಸಹಾಯಕ ಕಾರ್ಮಿಕ ಆಯುಕ್ತರು, ಬೆಳಗಾವಿ ವ್ಯಾಪ್ತಿಗೆ ಕಾರ್ ಪೆಂಟ್ರ ಟೂಲ್ ಕಿಟ್ ಗಳನ್ನು ಸರಬರಾಜು ಮಾಡುವುದು ಮತ್ತು ವಿತರಿಸುವುದು.	384.22	5,77,000/-

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಏಜೆನ್ಸಿಗಳು ಇ-ಪ್ರೊಕ್ಯೂರ್‌ಮೆಂಟ್ **www.eproc.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ-ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: 20-01-2022 ರಂದು ಸಂಜೆ 5.00 ಗಂಟೆಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-
ಜಂಟಿ ಕಾರ್ಯದರ್ಶಿ, ಕ.ಕ&ಇ.ನಿ.ಕಾ.ಕ.ಮಂಡಳಿ

DIPR/DDU/Zen/R.O:2456/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವೃದ್ಧಾಪ್ಯದ ಊರುಗೋಲು ವಾಟ್ಸ್ಆ್ಯಪ್



ಡಾ. ಅ. ಶ್ರೀಧರ

ಅಪರಿಚಿತ ದೂರವಾಣಿಯ ಸಂಖ್ಯೆಯಿಂದ ಕಳೆದ ವಾರ ನನ್ನ ಮೊಬೈಲ್‌ಗೆ ಬಂದ ಸಂದೇಶವೊಂದನ್ನು ತಕ್ಷಣದಲ್ಲಿ 'ಅಳಿಸಬೇಕೆ', 'ಉಳಿಸಬೇಕೆ' ಎನ್ನುವುದರ ಗೊಂದಲ ಕೊಂಚ ಹೆಚ್ಚಾಗಿಯೇ ಇತ್ತು. ದಿನನಿತ್ಯವೂ ಹೀಗೆ ಬರುವ ಸಂದೇಶಗಳನ್ನು ತಕ್ಷಣದಲ್ಲಿ ಡಿಲೀಟ್ ಮಾಡುವುದು ಹೊಸ ನಮೂನೆಯ ಕೈಗುಣವಾಗಿದ್ದರಿಂದಲೋ ಏನೋ ಅಳಿಸಬಿಡುವ ತವಕ ಕೈಬೆರಳನಿದು. ಆದರೆ ಒಲ್ಲೆನೆಂದು ಹಿಂದೆ ಸರಿದಂತ್ತಿತ್ತು ಮನಸ್ಸು. ಅಂತೂ ಹಲವಾರು ಗಂಟೆಗಳ ಸಮಯ ಸುಮ್ಮನಿದ್ದು ಬೇಕಾಬಿಟ್ಟಿ ಬಂದಿದ್ದ ಸಂದೇಶಗಳನ್ನು ಒಟ್ಟಾರೆ ಡಿಲೀಟ್ ಮಾಡುವ ಸಮಯದಲ್ಲಿ ಜಿಜ್ಞಾಸೆ ಮೂಡಿಸಿದ್ದ ಸಂದೇಶದತ್ತ ನಿಗಾ ಹೋಗುವಂತೆ ಮಾಡಿದ್ದು ಮೊಬೈಲಿನ ತೆರೆಯ ಮೇಲೆ ಮೂಡಿದ್ದ ವಾಟ್ಸ್ಆ್ಯಪ್ ಸೂಚನೆ. ಅದು 'ಮಾನಸಗಂಗೋತ್ರಿ' ಬ್ಯಾಚ್ ಎನ್ನುವ ಎರಡೇ ಪದಗಳ ಶೀರ್ಷಿಕೆ. ಗಳಿಗೆಗಿಂತಲೂ ಕಡಿಮೆ ಸಮಯದಲ್ಲಿ ಗಮನ ಸೆಳೆದ ಈ ಶೀರ್ಷಿಕೆಯನ್ನು ತೆಗೆದಾಗ ಐವತ್ತು ವರ್ಷಗಳ ಹಿಂದೆ ಜೊತೆಯಲ್ಲಿದ್ದ ಕಾಲೇಜಿನ ಸಹಪಾಠಿಗಳೆಲ್ಲರನ್ನು ಒಟ್ಟುಗೂಡಿಸಬೇಕೆಂಬ ಹಂಬಲದ ವಾಟ್ಸ್ಆ್ಯಪ್ ಗುಂಪು(ಗ್ರೂಪ್)ನಿಂದ ಬಂದ ವಿನಂತಿ. ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗವೊಂದರ ತರಗತಿಯಲ್ಲಿದ್ದ ಇಪ್ಪತ್ತು-ಇಪ್ಪತ್ತೈದು ಸಹಪಾಠಿಗಳನ್ನು ಹುಡುಕಾಡುವ ಉದ್ದೇಶ ಮೂಡಿದ್ದು ಒಂದಿಬ್ಬರಲ್ಲಿ. ದೇಶ-ವಿದೇಶಗಳಲ್ಲಿ ಚದುರಿ ಚೆಲ್ಲಾಪಿಲ್ಲಿಯಾಗಿರುವವರನ್ನು ಒಂದೆಡೆಗೆ ಸೇರಿಸುವ ಹರಸಾಹಸವದು. ಎಪ್ಪತ್ತರ ವಯೋಮಾನದ ಆಸುಪಾಸಿನಲ್ಲಿರುವವರು ಇಪ್ಪತ್ತರ ಪ್ರಾಯತದತ್ತ ಸಾಗುವ ಅತಿ ಪ್ರಯಾಸದ ಮಾನಸಿಕ ಉತ್ಖನನ.

ಆದರೆ ಇದು ಸಾರಾಗವಾಗಿ ಸಾಗುವಂತೆ ಮಾಡಿದ್ದು ಆಧುನಿಕ ಮೊಬೈಲ್ ತಂತ್ರಜ್ಞಾನದ ಕೊಡುಗೆಯಾದ ವಾಟ್ಸ್ಆ್ಯಪ್ ಸಂದೇಶದ ಸೌಲಭ್ಯಗಳು. ಆ ಎರಡು ವರ್ಷದ ಕಾಲೇಜಿನ ದಿನಗಳು ಕೇವಲ ದಿನಗಳಷ್ಟೇ ಆಗಿರಲಿಲ್ಲವೆನ್ನುವುದನ್ನು ಐವತ್ತು ವರ್ಷಗಳ ನಂತರವೂ ಹೊರಹೊಮ್ಮಿಸಿದ ರೀತಿಯು ಮನುಷ್ಯಜೀವಿಯ ಮೆದುಳು ಎಂತೆಂಥ ಭಾವನಾತ್ಮಕ ಬಲಗಳ ಗುಡಾಣವಾಗಿರಬಲ್ಲದೆನ್ನವುದು. ವ್ಯಕ್ತಿಯೊಬ್ಬರ ಜೀವಮಾನದ ಕಟ್ಟಕೊನೆಯ ಹಂತದಲ್ಲಿ ಮತ್ತೊಮ್ಮೆ ಹೊಸಚಿಗುರಿನಂತೆದ್ದು ಬರುವ ನೆನಪುಗಳು ಗತಿಸಿದ ಜೀವಮಾನದುದ್ದಕ್ಕೂ ಎದುರಾದ ಸಂತೋಷ, ಸಂಕಟ, ಸಾಧನೆ, ಕೊರತೆ, ಸೋಲು, ಗೆಲವುಗಳ ಸಂಗ್ರಹಿತ ಅನುಭವಗಳೆಲ್ಲವನ್ನು ಒಮ್ಮೆಲೇ ಪಕ್ಕಕ್ಕೆ ತಳ್ಳಿತ್ತು. ಹದಿಹರೆಯ ಮುಗಿದ ತಕ್ಷಣದ ಕಾಲಘಟ್ಟವನ್ನು ಸರಾಗವಾಗಿ ಮೇಲ್ಮನಕ್ಕೆ ಎಳೆದು ತಂದಿಟ್ಟು ವೃದ್ಧಾಪ್ಯವೆನ್ನುವುದು ಜೀವಕೋಶಗಳ ಅವರೋಹಣವಷ್ಟೇ ಹೊರತು ಮನದಾಳದ ಸರಕುಗಳಿಗಿದು ಅನ್ವಯಿಸದು ಎನ್ನುವುದನ್ನು ಸ್ಪಷ್ಟಪಡಿಸಿತ್ತು. ಈ ಭಾವಗಳನೇನೂ ಅಪರೂಪ ಅಥವಾ ಅಪರಿಚಿತವಲ್ಲದಿದ್ದರೂ ಅವುಗಳಿಂದಾಗುವ ಮಾನಸಿಕ ಬದಲಾವಣೆಗಳು ಹೃದಯವನ್ನು ತಟ್ಟುವಂಥದ್ದು.

> ವಯಸ್ಸು ಕಳೆದಂತೆಲ್ಲಾ ನೋವುಗಳ ನೆನಪುಗಳು ಅಸಹಾಯಕತೆಯನ್ನು ಹುಟ್ಟಿಸುವುದು ಸಹಜ. ಆದರೆ ಹದಿಹರೆಯದ ಸಮಯದಲ್ಲಿನ ಅಥವಾ ವಿದ್ಯಾರ್ಥಿದಿಸೆಯನ್ನು ನೆನಪಿಸಿಕೊಳ್ಳುವ ವಾಟ್ಸ್ಆ್ಯಪ್ ಗುಂಪುಗಳು ಮನೋವಿಲಾಸವನ್ನು ತರಬಲ್ಲದು.

ಇಂತಹದೊಂದು ಸ್ಥಿತಿಯನ್ನು ಮರುರಚಿಸುವುದಕ್ಕೆ ಈ ವಾಟ್ಸ್ಆ್ಯಪ್ ಗುಂಪು ಪ್ರೇರಣೆಯಾಯಿತು ಎನ್ನುವುದೇ ಸಂತಸದ ವಿಷಯ. ಬಹುಶಃ ಇಂತಹ ಅನುಭವಗಳನ್ನು ಸವಿಯುವ ಸಲುವಾಗಿಯೇ ರೂಪುಗೊಂಡಿದೆ ವಾಟ್ಸ್ಆ್ಯಪ್ ಸಂದೇಶದ ವ್ಯವಸ್ಥೆ ಎನ್ನಲೂಬಹುದು.

ಹದಿಹರೆಯವನ್ನು ದಾಟುತ್ತಿದ್ದ ಸಮಯದ ಎರಡು ವರ್ಷಗಳಲ್ಲಿ ಸಹಪಾಠಿಗಳಾಗಿದ್ದವರು, ಸುಮಾರು ಐವತ್ತು ವರ್ಷಗಳ ಕಾಲ ಸಂಪರ್ಕದಲ್ಲಿಯೇ ಇರದಿದ್ದವರು, ಏಕಾಏಕಿ ಸಂಪರ್ಕಕ್ಕೆ ಬಂದಾಗ ವಿನೂತನ ಮನಃಸ್ಥಿತಿಯು ರೂಪುಗೊಳ್ಳಬಲ್ಲದೆನ್ನುವುದಕ್ಕೆ ಈ ವಾಟ್ಸ್ಆ್ಯಪ್ ಗುಂಪೇ ಸಾಕ್ಷಿ. ಅದು ರೂಪುಗೊಂಡ ಇಪ್ಪತ್ತನಾಲ್ಕು ತಾಸುಗಳಲ್ಲಿ ಸಹಪಾಠಿಗಳ ವೃತ್ತಿ, ವಿವಾಹ, ಮಕ್ಕಳು, ಕುಟುಂಬಕ್ಕೆ ಸಂಬಂಧಿಸಿದ ಸಮಸ್ಯೆ, ನೋವು, ಹಿತಗಳೆಲ್ಲದರ ತುಣುಕುಗಳು ಬಲವಾದ ಆತ್ಮೀಯತೆ, ಮಾನವೀಯತೆಯ ಭಾವನೆಗಳನ್ನು ಹೊರತಂದಿದ್ದವು. ವಿದ್ಯಾರ್ಥಿಯಾಗಿದ್ದಾಗಲೇ ವಿವಾಹವಾಗಿದ್ದ ಸಹಪಾಠಿಯ ಪತಿ ತೀರಿಕೊಂಡಿದ್ದ ವಿಷಯ, ಅದರ ಜೊತೆಯಲ್ಲಿಯೇ ಎನ್ನುವಂತೆ ಅಳಿಯನ ಸಾವು ಒಬ್ಬರ ನೋವಿನ ಅನುಭವವಾಗಿದ್ದರೆ, ಇನ್ನೊಬ್ಬರದು ಐದು ದಶಕಗಳ ಅವಧಿಯಲ್ಲಿ ಶರೀರದ ಅವಯಗಳೆಲ್ಲವು ಒಂದಲ್ಲ ಒಂದು ರೀತಿಯಲ್ಲಿ ರಿಪೇರಿಯಾಗಿದ್ದರೂ ಉತ್ಸಾಹ, ಉಲ್ಲಾಸಗಳೇನು ಕುಂದದಂತೆ ಕಾಪಾಡಿಕೊಂಡಿದ್ದ ಮನೋಚೈತನ್ಯ. ಹೀಗೆ, ವೇಗವಾಗಿ ವೃದ್ಧಿಸುತ್ತಿದ್ದ ವಯೋಮಾನದಲ್ಲಿಯೂ ಪ್ರತಿಯೊಬ್ಬರ ಗತಯೌವನದ ಅನುಭವಗಳನ್ನು ಮತ್ತೆ ಚಿಗುರುವಂತೆ ಮಾಡಿದ್ದು ಆಧುನಿಕ ತಂತ್ರಜ್ಞಾನದ ಸಲಕರಣೆ, ಸೌಲಭ್ಯಗಳು ಎನ್ನುವುದನ್ನಂತೂ ಅಲ್ಲಗಳೆಯುವಂತಿಲ್ಲ.

ನಮ್ಮ ನರಮಂಡಲದ ಪಾತಾಳದಲ್ಲಿ ಊಹಿಸಲೂ ಆಗದಷ್ಟು ಪ್ರಮಾಣದಲ್ಲಿ ನೆನಪಿಗೆ ಬರುವಂತಹ ಹಿತಾಹಿತ ಸಂಗತಿಗಳು ಅವಿತುಕೊಂಡಿರುತ್ತವೆ. ಆದರೆ ಇವುಗಳನ್ನು ಹೊರತರುವ ಪ್ರೇರಣೆ ಮತ್ತು ಉದ್ದೇಶ ಬಹುಮುಖ್ಯ. ದ್ವೇಷ, ಅಸೂಯೆ, ಅಸಹಾಯಕತೆ, ದಂತಕತೆಗಳನ್ನೂ ಇದು ಅನಾಯಾಸವಾಗಿ ಪ್ರಸರಣಗೊಳಿಸಬಲ್ಲದು. ಒಟ್ಟಿನಲ್ಲಿ ಹೇಳುವುದಾದರೆ, ಬೃಹನ್ ಮತಿಗೊಳಿಸಿಕೊಳ್ಳಲು ಮತಿ ವಿಸ್ತಾರವಾಗಬೇಕು; ಇದಕ್ಕೆ ಬೇಕೇ ಬೇಕು ನೆನಪುಗಳು. ವಯಸ್ಸು ಕಳೆದಂತೆಲ್ಲಾ ನೋವುಗಳ ನೆನಪುಗಳು ಅಸಹಾಯಕತೆಯನ್ನು ಹುಟ್ಟಿಸುವುದು ಸಹಜ. ಆದರೆ ಹದಿಹರೆಯದ ಸಮಯದಲ್ಲಿನ ಅಥವಾ ವಿದ್ಯಾರ್ಥಿದಿಸೆಯನ್ನು ನೆನಪಿಸಿಕೊಳ್ಳುವ ವಾಟ್ಸ್ಆ್ಯಪ್ ಗುಂಪುಗಳು ಮನೋವಿಲಾಸವನ್ನು ತರಬಲ್ಲದು. ಅದರಲ್ಲಿಯೂ ಮಾನಸಿಕವಾಗಿ ಕುಂದುತ್ತಿರುವ ಹಿರಿಯ ಜೀವಿಗಳಿಗೆ ಇಂತಹದೊಂದು ಸೌಲಭ್ಯದಿಂದ ಸಿಗುವ ನೆಮ್ಮದಿ ಅಮೋಘ.

(ಲೇಖಕ: ಮನೋವಿಜ್ಞಾನಿ)



ಮಾತನಾಡಬೇಕೆ? ಮಾತನಾಡಿದರೆ ಹೇಗೆ?

ರಘು ವಿ.

ಮಾತು ಕಲಿಯುವುದು ಕಷ್ಟ; ಕಲಿತ ಮೇಲೆ ನಿಲ್ಲಿಸುವುದು ಕಷ್ಟ!

ಈ ಮಾತನ್ನು ಒಬ್ಬ ಶಿಕ್ಷಕನಾಗಿ ನಾನು ಹೇಳುವಾಗ ಬಹಳ ಹಿಂಜರಿಕೆಯಾಗುತ್ತದೆ. ಮಗುವಿಗೆ ಸರಿಯಾದ ವಯಸ್ಸಿಗೆ ಮಾತು ಬಾರದಿದ್ದಾಗ ಆತಂಕಕ್ಕೊಳಗಾಗುವ ತಂದೆ-ತಾಯಂದಿರೇ ಮುಂದೆ, 'ಸರ್, ಇವನು ತುಂಬ ಮಾತಾಡ್ತಾನಂತೆ. ಇವರ ಮಿಸ್ಸು ದಿನಾ ಡೈರೀಲಿ ಬರೆದು ಕಳಿಸ್ತಾರೆ' ಎಂದು ಹೇಳುತ್ತಾರೆ. ತರಗತಿಯಲ್ಲಿ ಹೆಚ್ಚಿಗೆ ಮಾತನಾಡುವ ಹಕ್ಕು ಕೇವಲ ಶಿಕ್ಷಕರಿಗೆ ಮಾತ್ರವೆ? ಮನೆಯಲ್ಲಿ ಮಕ್ಕಳ ಮಾತು ಕೇಳುವ ತಾಳ್ಮೆ ಹಿರಿಯರಿಗಿದೆಯೆ? ಇತ್ಯಾದಿ ಪ್ರಶ್ನೆಗಳು ಅಲೆಯಂತೆ ಎದ್ದು ನಾನು ಮಗುವಿನತ್ತ ಒಂದು ನಗೆ ಬೀರಿ, ಅಪ್ಪ-ಅಮ್ಮನಿಗೆ ಸಮಾಧಾನ ಹೇಳುತ್ತೇನೆ. ಪ್ರಸ್ತುತ ಶಿಕ್ಷಣದಲ್ಲಿ ಮಕ್ಕಳ ಭಾಗವಹಿಸುವಿಕೆಗೆ ಹೆಚ್ಚು ಒತ್ತು ಕೊಡಲಾಗುತ್ತಿದೆ ಎಂಬುದು ಸಮಾಧಾನದ ಅಂಶ. ಮನುಷ್ಯಕುಲವೊಂದೇ ತನ್ನ ಸಂವಹನದ ಸಂಕೇತವನ್ನು ಬಹಳ ಅಚ್ಚುಕಟ್ಟಾಗಿ ರೂಪಿಸಿಕೊಂಡು ಅದನ್ನು ತನ್ನ ಸಂತಾನಕ್ಕೆ ವರ್ಗಾಯಿಸಿಕೊಂಡು ಬರುತ್ತಿದೆ. ಶಬ್ದ(ಪದ) ವಿನ್ಯಾಸವನ್ನಾಗಲೀ ಅಕ್ಷರ ಸಂಕೇತವನ್ನಾಗಲೀ ವಿಶಿಷ್ಟವಾಗಿ ರೂಪಿಸಿಕೊಂಡಿರುವ ಮನುಷ್ಯ ಅದರಲ್ಲಿಯೂ ತನ್ನ ವೈವಿಧ್ಯವನ್ನು ಕಾಪಾಡಿಕೊಂಡು ಬಂದಿದ್ದಾನೆ. ಅಸ್ಪಷ್ಟ ಉಗ್ಗು, ತೊದಲು ನುಡಿಯಿಂದ ಪ್ರಾರಂಭವಾಗುವ ಮಾತಿನ ಕಲಿಕೆ ಆ ಬಳಿಕ ನಿರರ್ಗಳ ವಾಗ್ಝರಿಯಾಗಿ ಪರಿವರ್ತಿತವಾಗುವುದೇ ಒಂದು ಅಚ್ಚರಿ. ಇದೊಂದು ಸಂತಸದ ವಿಚಾರ.

ಮನುಷ್ಯ ಹುಟ್ಟಿನಿಂದ ಮೂಕ, ಮೌನಿ. ಭಾಷೆ - ಮಾತು - ಅವನು ಅನುಕರಣೆಯಿಂದ ಕಲಿತ ಸಂಕೇತ. ಮಾತಿನ ಮೂಲಕವೇ ಅವನು ಮತ್ತೆ ಮೌನದ ಮಹಾಮನೆಯನ್ನು ತಲುಪಬೇಕು, ತಲುಪುತ್ತಾನೆ. ಖಲೀಲ್ ಗಿಬ್ರಾನ್ ಮಾತನ್ನು ಕುರಿತು ಬಹಳ ಸೊಗಸಾಗಿ ಹೇಳುತ್ತಾನೆ:

'ನಿಮ್ಮ ಆಲೋಚನೆಗಳೊಂದಿಗೆ ನೀವು ಶಾಂತಿಯನ್ನು ಸಾಧಿಸಲಾಗದಾಗ ನೀವು ಮಾತನಾಡುತ್ತೀರಿ. ನಿಮ್ಮ ಹೃದಯದ ಏಕಾಂತತೆ ಅಸಹನೀಯವಾದಾಗ ನೀವು ತುಟಿಗಳಿಂದ ಬದುಕಹೊರಡುತ್ತೀರಿ; ಶಬ್ದವು ನಿಮ್ಮ ಗಮನ ಬದಲಿಸುವಿಕೆ ಹಾಗೂ ಕಾಲಕ್ಷೇಪ. ಅಲ್ಲದೆ, ನಿಮ್ಮ ಮಾತುಗಳ ಮೂಲಕ ನಿಮ್ಮ ಆಲೋಚನೆಗಳನ್ನು ಅರೆಜೀವ ಮಾಡಿರುತ್ತೀರಿ. ಏಕೆಂದರೆ ಆಲೋಚನೆ ಎಂಬುದು ಆಕಾಶದ ಹಕ್ಕಿ. ಅದು ಪದಗಳ ಪಂಜರದಲ್ಲಿ ಗರಿ ಬಿಚ್ಚಿ ಹಾರಲಾಗದು.'

ಬಹಳ ಪರಿಣಾಮಕಾರಿಯಾದ ರೂಪಕದ ಮೂಲಕ ಅವನು ಮಾತಿನ ಮಿತಿಯನ್ನು ತಿಳಿಸಿಬಿಡುತ್ತಾನೆ.

ಜಲಾಲುದ್ದೀನ್ ರೂಮಿ ಇದನ್ನು ಇನ್ನಷ್ಟು ಚಂದವಾಗಿ ಹೇಳುತ್ತಾನೆ: 'ತುಟಿಗಳು ಮೌನವಹಿಸಿದಾಗ, ಹೃದಯವು ನೂರು ನಾಲಗೆಯಾಗುತ್ತದೆ.' ಮತ್ತೆ ಹೇಳುತ್ತಾನೆ, 'ಕೇಳಿ, ನಿಮ್ಮ ಬಾಯಿ ಭದ್ರಪಡಿಸಿ ಮತ್ತು ಸಿಂಪಿಯಂತೆ ಮೌನವಾಗಿರಿ. ಏಕೆಂದರೆ, ಮಿತ್ರ, ನಿನ್ನ ಆ ನಾಲಗೆಯೇ ನಿನ್ನ ಆತ್ಮದ ಶತ್ರು.'

ಮಾತನಾಡದೇ ಇರುವುದು ಮಹಾದರ್ಶವೇನೋ ಸರಿ. ಆದರೆ ಆಡದಿದ್ದರೆ ಜಗದ ವ್ಯವಹಾರ ಹೇಗೆ? ಅದಕ್ಕೆ ಕಗ್ಗದ ತಿಮ್ಮಗುರು ಎನ್ನುತ್ತಾರೆ: 'ಆಳವನು ನೋಡಿ ಬಗೆದಾಡುವ ಮಾತಿಂಗೆ ರೂಢಿಯರ್ಥವದೊಂದು ಗೂಢಾರ್ಥವೊಂದು, ವಾರಿಧಿಯ ದಾಂಟುವುಡುಪಕೆ ಗಾಳಿಪಟವೊಂದು ಕೋಲು ಹುಟ್ಟೊಂದು ಬಲ.' ಆಡುವ ಪದದ ರೂಢಾರ್ಥ ಮತ್ತು ಗೂಢಾರ್ಥ ತಿಳಿದಿರಬೇಕು. ಏಕೆಂದರೆ ನೀರನ್ನು ದಾಟುವ ದೋಣಿ, ಹಡಗುಗಳಿಗೆ ಹಾಯಿಪಟವೂ ಬೇಕು ಮತ್ತು ನೀರನ್ನು ಹಿಂದೆ ತಳ್ಳುವ ಉಪಕರಣ, ಕೋಲು; ಎರಡೂ ಬೇಕು. ಅಂದರೆ ಮಾತಿನ ಅರ್ಥದ ಆಳ, ಎತ್ತರ, ವಿಸ್ತಾರ ಮತ್ತು ಪ್ರಯೋಜನವನ್ನು ಬಳಸುವವರೂ ಅದನ್ನು ಬಳಸಿಕೊಳ್ಳುವವರೂ ಸರಿಯಾಗಿ ಅರಿತಿರಬೇಕು ಎಂಬುದು ಕಗ್ಗದ ಕವಿಯ ಆಶಯ.

ಮಾತನಾಡುವುದು ಚಂದವೇನೋ ಸರಿ. ಆದರೆ ಯಾವ ಬಗೆಯ ಮಾತು ಅದಾಗಿರಬೇಕು? ಮಾತು ಭಾವವನ್ನು ಹೊರಸೂಸುತ್ತದೆ. ಇಲ್ಲಿ ಪದಗಳ ಆಯ್ಕೆ ಬಹಳ ಮುಖ್ಯಪಾತ್ರವನ್ನು ವಹಿಸುತ್ತದೆ. ಯಾರಿಗೆ ಪದಶ್ರೀಮಂತಿಕೆಯಿದೆಯೋ ಅವರು ಮಾತಿನ ಮಹಾರಾಜರು. ಏಕೆಂದರೆ ಎದೆಯ ಭಾವವನ್ನು ಸ್ಪಷ್ಟವಾಗಿ, ಪರಿಣಾಮಕಾರಿಯಾಗಿ ವ್ಯಕ್ತಪಡಿಸಬೇಕಾದರೆ ಅದಕ್ಕೆ ಲಗತ್ತಾದ ಪದ ಅಂಟಿಸಬೇಕು. ಅಂಚೆಯ ಪತ್ರ ತಲುಪಬೇಕಾದರೆ ಅದರ ತೂಕಕ್ಕೆ ತಕ್ಕಂತಹ ನಿಗದಿತ ಮೌಲ್ಯದ ಅಂಚೆಚೀಟಿಯನ್ನು ಲಗತ್ತಿಸುವಂತೆ ಇದು. ಸಂದರ್ಭ, ಭಾವ, ರಾಗದ ಛಾಯೆ ಇವೆಲ್ಲ ಪದದಲ್ಲಿ ಪ್ರತಿಫಲಿಸಬೇಕು. ಇಲ್ಲವಾದರೆ ಸಂವಹನಶಿಲ್ಪದಲ್ಲಿ ಆ ಪದ ಒಡಕು ಇಟ್ಟಿಗೆ ಇಟ್ಟಂತಾಗುತ್ತದೆ.

ದುರ್ಬಲ ಪದಗಳಿಂದ ಕಟ್ಟಿದ ಮಾತಿನ ಸೇತುವೆ ಭಾವದ ಸರಕನ್ನು ದಾಟಿಸುವಲ್ಲಿ ಸೋಲುತ್ತದೆ. ಮಾತು ಪರಿಣಾಮಕಾರಿಯಾಗಿ ಇರಬೇಕು ಎನ್ನುವಾಗ ಬೇಂದ್ರೆಯವರು ಕತ್ತಿ ಝಳಪಿಸಿದಂತೆ ಹೇಳುವುದು ಹೀಗೆ: 'ಉಸಿರ ಹೆದೆಗೆ ಹೂಡಿದ ಗರಿಯ ಗುರಿಯ ನಿರಿಯಿಟ್ಟು ಬರುತಿದೆ ತೂರಿ ಲೀಲೆಯಲನಾಯಾಸ.' ಇದನ್ನೇ ಬಹಳ ನವಿರಾಗಿ ಅಣ್ಣನವರು 'ನುಡಿದರೆ ಮುತ್ತಿನ ಹಾರದಂತಿರಬೇಕು' ಎನ್ನುತ್ತಾರೆ. ಈ ಹೊತ್ತು ಸಂವಹನಶಾಸ್ತ್ರವೇ ಒಂದು ಶಾಖೆಯಾಗಿ ಬೆಳೆದಿದೆ. ಆದರೂ ಜಗತ್ತಿನಲ್ಲಿ ತಮ್ಮನ್ನು ಅರ್ಥಮಾಡಿಕೊಳ್ಳಲಿಲ್ಲವೆಂಬ ಕೊರಗು ಉಳಿದಿದೆ, ಹಾಗೇ ಇತರರು ಹೇಳಿದ್ದು ತಮಗೆ ಅರ್ಥವಾಗಲಿಲ್ಲ ಎನ್ನುವವರೂ ಇದ್ದಾರೆ. ಈ ನಿಟ್ಟಿನಲ್ಲಿ ಕೆ.ಎಸ್.ನ. ಅವರ ಮಾತು ನೆನಪಾಗುತ್ತದೆ: 'ನನ್ನೆದೆಯು ನಿನ್ನೆದೆಯು ನಡುವೆ ಕ್ಷಾರೋದಧಿಯು, ಕಾಡಿನಲಿ ಅತ್ತಂತೆ ಎಲ್ಲ ಹಾಡು.'

ಈಉಪ್ಪಿನಸಮುದ್ರಹಾಲಿನಸಮುದ್ರವಾದಾಗಲೇಅಲ್ಲಿಸೊಗದಸಂವಹನಸಾಧ್ಯ.ಆದರೆಅದುಸಾಧ್ಯವೇ?ಸಾಧ್ಯ! ಹಾಗಾದಾಗ ಮಾತು ನಿಂತುಹೋಗುತ್ತದೆ, ಮೌನವೇ ಮಾತಾಗುತ್ತದೆ. ರಮಣರ ಬಹುದೊಡ್ಡ ಉಪದೇಶ: 'ಚುಮ್ಮ ಇರು'. ಪದಗಳು ತಲುಪಿಸಲಾಗದ್ದನ್ನು ಮೌನ ತಲುಪಿಸುತ್ತದೆ. ಮಾತನಾಡುವ ಮುನ್ನ ಮಾತನಾಡಲೇಬೇಕೇ ಎಂದು ಆಲೋಚಿಸಿ ಆಡತೊಡಗಿದರೆ ಮಾತು ಕಡಿಮೆಯಾಗುತ್ತ ಬರುತ್ತದೆ; ಕೊನೆಗೆ ಅದು ಮೌನದಲ್ಲಿ ನೆಲಗೊಳ್ಳುತ್ತದೆ. ಮಾತಿನ ನದಿ ಮೌನದ ಸಮುದ್ರ ಸೇರುವವರೆಗೂ ಅದರ ಗದ್ದಲ ಅನಿವಾರ್ಯ. ಒಮ್ಮೆ ಅದು ಸಮುದ್ರ ಸೇರಿದ ಮೇಲೆ ಮುಗಿಯಿತು. ಅಲ್ಲಿ ಮೌನವೇ ಮಾತು. ಇಂತಹ ಸ್ವಭಾವ ನಮ್ಮದಾದರೆ ಬದುಕು ಸುಂದರವಾಗುತ್ತದೆ.

(ಲೇಖಕ: ಶಿಕ್ಷಣತಜ್ಞ)

ತಲೆನೋವಿಗೆ ಕಾರಣಗಳು ಹಲವು

ತಲೆನೋವನ್ನು ಎಲ್ಲರೂ ಆಗಾಗ ಅನುಭವಿಸುತ್ತಲೇ ಇರುತ್ತಾರೆ. ಇದಕ್ಕೆ ಕಾರಣಗಳೂ ಹಲವು, ಪರಿಹಾರದ ದಾರಿಗಳೂ ಹಲವು...



ಡಾ. ಅನಿತಾ ರವಿ

ತಲೆನೋವು ಅಥವಾ ಶಿರಶೂಲ. ಪ್ರತಿಯೊಬ್ಬರೂ ಜೀವನದಲ್ಲಿ ಒಮ್ಮೆಯಾದರೂ ಈ ನೋವನ್ನು ಅನುಭವಿಸಿಯೇ ಇರುತ್ತಾರೆ! ಅದು ಜೀವನಶೈಲಿಯಲ್ಲಾದ ಬದಲಾವಣೆಯಿಂದಾಗಿಯೋ, ಇಲ್ಲ ಮತ್ತೊಂದು ರೋಗದ ಲಕ್ಷಣವಾಗಿಯಾದರೂ ಕಾಣಿಸುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ತಲೆನೋವಿನ ಸಮಸ್ಯೆ ಚಿಕ್ಕವಯಸ್ಸಿನಲ್ಲಿಯೇ ಹೆಚ್ಚು ಕಂಡುಬರುತ್ತಿರುವುದು ಆತಂಕದ ವಿಷಯ. ಇದಕ್ಕೆ ಕಾರಣ ಇಂದಿನ ಜೀವನಶೈಲಿ!

ಈಗಿರುವ ಕೋವಿಡ್ ಕಾಲ ಘಟ್ಟದಲ್ಲಿ ನಮ್ಮ ಜೀವನಶೈಲಿಗಳೆಲ್ಲವೂ ಮೊದಲಿನಂತಿರದೆ ಬುಡ ಮೇಲಾಗಿದೆ! ವರ್ಕ್ ಫ್ರಂ ಹೋಂ, ಆನ್‌ಲೈನ್ ಕ್ಲಾಸ್ - ಹೀಗೆ ಮನೆಯಿಂದ ಹೊರಗೆ ಹೋಗಲು ಕಾರಣಗಳೇ ಇಲ್ಲದೆ, ಆಹಾರ-ವಿಹಾರದಲ್ಲಿ ವಿಪರೀತ ವ್ಯತ್ಯಾಸ ಉಂಟಾಗಿದೆ. ಬೆಳಗ್ಗೆ ಏಳುವುದರಿಂದ ಹಿಡಿದು ರಾತ್ರಿ ಮಲಗುವವರೆಗೂ ಯಾವುದಕ್ಕೂ ನಿರ್ದಿಷ್ಟ ಸಮಯವಿಲ್ಲದಿರುವುದು, ಸೇವಿಸುವ ಆಹಾರದಲ್ಲಿ, ದೇಹಕ್ಕೆ ವ್ಯಾಯಾಮ, ವಿಶ್ರಾಂತಿ ಯಾವುದಕ್ಕೂ ಶಿಸ್ತು ಎಂಬುದು ಇಲ್ಲವಾಗಿರುವುದು. ಮೊಬೈಲ್-ಕಂಪ್ಯೂಟರ್‌ಗಳ ಅತಿಯಾದ ಬಳಕೆಯಿಂದ ಮಾನಸಿಕ ಒತ್ತಡ ಹೆಚ್ಚಾಗಿ ಕೋಪ, ಭಯ, ದುಃಖ - ಹೀಗೆ ದೈಹಿಕ ಮಾನಸಿಕ ಆರೋಗ್ಯವೆಂಬುದು ಗಣನೀಯವಾಗಿ ಕ್ಷೀಣಿಸಿದೆ. ಅದರಲ್ಲೂ ತಲೆನೋವೆಂದು ವೈದ್ಯರ ಬಳಿ ಬರುವವರ ಸಂಖ್ಯೆ ಹೆಚ್ಚು.


ಕಾರಣಗಳು

- ಅತಿಯಾದ ಖಾರ, ಹುಳಿ, ರೂಕ್ಷ, ಮಸಾಲೆಯುಕ್ತ, ಎಣ್ಣೆಯಲ್ಲಿ ಕರಿದ ಆಹಾರ ಸೇವಿಸುವುದು; ಕೃತಕ ಆಹಾರ ಸಂರಕ್ಷಕಗಳನ್ನು ಬಳಸಿ ತಯಾರಿಸಿದ ದೂಷಿತ ಆಹಾರ ಸೇವನೆ, ಪ್ರತಿದಿನವೂ ಒಂದು ನಿರ್ದಿಷ್ಟ ಸಮಯದಲ್ಲಿ ಆಹಾರ ಸೇವಿಸದಿರುವುದು, ಹಸಿವಾಗದೆ ಆಹಾರ ಸೇವಿಸುವುದು, ಮೇಲಿಂದ ಮೇಲೆ ಏನಾದರೂ ತಿನ್ನುತ್ತಲೇ ಇರುವುದು. ಅಜೀರ್ಣವಾದ ಆಹಾರ, ಉಪವಾಸ. ಜೀರ್ಣಾಂಗದಲ್ಲಿ ಕ್ರಿಮಿಗಳ ತೊಂದರೆ ಉಂಟಾದಾಗ, ಅತಿಯಾದ ಮದ್ಯಪಾನ, ದೇಹಕ್ಕೆ ಅಗತ್ಯವಿಲ್ಲದಿದ್ದರೂ ಅತಿಯಾದ ನೀರಿನ ಸೇವನೆ. ಅತಿಯಾದ ಕಾಫೀ-ಟೀ ಸೇವನೆಯನ್ನು ಹಠಾತ್ ಆಗಿ ನಿಲ್ಲಿಸುವುದು.
- ಮಲ, ಸೀನು, ಕಣ್ಣೀರನ್ನು ತಡೆಯುವುದು, ಪ್ರತಿದಿನವೂ ದೂಳು, ಹೊಗೆಯ ಸೇವನೆ, ತೀಕ್ಷ್ಣವಾದ ಬಿಸಿಲಿನಲ್ಲಿ ತಿರುಗಾಡುವುದು, ಕಣ್ಣುಗಳಿಗೆ ತೊಂದರೆ ಆಗುವಷ್ಟು ಬೆಳಕಿರುವ ವಸ್ತುಗಳನ್ನು ತುಂಬಾ ಸಮಯ ದಿಟ್ಟಿಸಿ ನೋಡುವುದು (ಮೊಬೈಲ್, ಕಂಪ್ಯೂಟರ್, ಟಿ.ವಿ.), ಗಾಢವಾದ ವಾಸನೆಯುಳ್ಳ ವಸ್ತುಗಳನ್ನು ಆಘ್ರಾಣಿಸುವುದರಿಂದ (ಪರ್ಫ್ಯೂಮ್), ಕಿವಿಗಡಚಿಕ್ಕುವ ಶಬ್ದವನ್ನು ಆಲಿಸುವುದು.
- ಎತ್ತರದ ದಿಂಬಿನ ಮೇಲೆ ತಲೆ ಇಟ್ಟು ಮಲಗುವುದು, ವಿಪರೀತ ಮಾತನಾಡುವುದರಿಂದ, ಅತಿಯಾದ ಶೀತಗಾಳಿಯ ಸೇವನೆ.
- ಹಗಲಿನಲ್ಲಿ ನಿದ್ರೆ ಮಾಡುವುದು, ರಾತ್ರಿ ಜಾಗರಣೆ ಮಾಡುವುದು ಇಲ್ಲವೇ ಬೆಳಗಿನ ಜಾವದವರೆಗೂ ಮಲಗದಿರುವುದು.
- ಅತಿಯಾದ ಯೋಚನೆ, ಭಯ, ಕೋಪ, ಉದ್ವೇಗಗೊಳ್ಳುವುದು.

ಒಂದೇ ಬಗೆಯದಲ್ಲ!

ತಲೆನೋವಿನ ತೀವ್ರತೆ ಸಾಧಾರಣದಿಂದ, ಇನ್ನು ನೋವು ತಡೆಯಲಾಗುದಿಲ್ಲ ಎನ್ನುವಷ್ಟರವರೆಗೂ ಉಂಟಾಗುತ್ತದೆ.

- **ಒತ್ತಡದಿಂದುಟಾಗುವ ತಲೆನೋವು:** ಒತ್ತಡದ ಕಾರಣದಿಂದ ತಲೆಯ ಮತ್ತು ಕುತ್ತಿಗೆಯ ಮಾಂಸಖಂಡಗಳಲ್ಲಿ ಸೆಳೆತ ಉಂಟಾಗಿ, ತಲೆಯ ಹಿಂಭಾಗದಲ್ಲೂ, ಕುತ್ತಿಗೆಯ ಹಿಂಭಾಗದಲ್ಲೂ ನಿರಂತರವಾಗಿ ಅಷ್ಟೇನೂ ತೀವ್ರವಲ್ಲದ ಮಂದ ನೋವು ಕಾಣಿಸುತ್ತದೆ. ಇದರಿಂದ ಕೆಲಸ-ಕಾರ್ಯಗಳಿಗೇನು ಅಡ್ಡಿ ಉಂಟಾಗದಿದ್ದರೂ, ಉಪಚಾರದ ನಂತರ ನೋವು ಪರಿಹಾರವಾದರೂ,ಈ ಬಗೆಯ ನೋವನ್ನು ಕಡೆಗಣಿಸುವಂತಿಲ್ಲ.
- **ಆಹಾರ-ವಿಹಾರದಲ್ಲುಂಟಾದ ವೈಪರೀತ್ಯದಿಂದಾಗಿ ಉಂಟಾಗುವ ತಲೆನೋವು:** ಇದರಲ್ಲಿ ಸಂಜೆಯಾಗುತ್ತಲೇ ತಲೆಯ ಒಂದು ಬದಿಯಲ್ಲಿ (ಒಮ್ಮೆ ಎಡ, ಮತ್ತೊಮ್ಮೆ ಬಲ), ಹುಬ್ಬುಗಳ ಮೇಲೆ, ಕಣ್ಣುಗಳಲ್ಲಿ ನೋವು, ತಲೆ ಸಿಡಿದು ಹೋಗುವುದೇನೋ ಎನ್ನುವಷ್ಟು ವಿಪರೀತ ಸಿಡಿಯುವ ನೋವು. ಬೆಳಕನ್ನು ನೋಡಲಾಗದಿರುವುದು. ಅದರೊಂದಿಗೆ ಹೊಟ್ಟೆ ತೊಳೆಸಿದಂತಾಗಿ ವಾಂತಿ ಬರುವಂತಾಗುವುದು. ವಾಂತಿ ಬಂದ ನಂತರ ಸಮಾಧಾನ ಆಗುವುದು. ರಾತ್ರಿ ಮಲಗಿ ಬೆಳಗ್ಗೆ ಏಳುವಾಗ ನೋವು ಕಡಿಮೆ ಆಗಿರುವುದು. ಕೆಲವೊಮ್ಮೆ ವೈದ್ಯಕೀಯ ಸಲಹೆ, ಔಷಧಗಳಿಲ್ಲದೇ 2-3 ದಿನಗಳವರೆಗೂ ಬಾಧಿಸುವುದು. 3, 5, 10, 15 ದಿನಗಳಿಗೊಮ್ಮೆ ಪದೇ ಪದೇ ಕಾಣಿಸಿ ತೊಂದರೆ ಮಾಡುವುದು.
- ಪ್ರತಿದಿನವೂ ಧೂಳು, ಹೊಗೆಸೇವನೆ, ಎಸಿ ಇರುವ ಸ್ಥಳಗಳಲ್ಲಿ ಸದಾ ಇರುವುದು - ಇವೆಲ್ಲವೂ ತಲೆಬುರುಡೆಯಲ್ಲಿರುವ ಸೈನಸ್ (ಪೊಳ್ಳಾದ ಭಾಗ) ನಲ್ಲಿ ಉರಿಯೂತ ಉಂಟಾಗಿ ಅದರಿಂದಾಗಿ ಮೂಗಿನಲ್ಲಿ ಯಾವಾಗಲೂ ನೀರು ಸೋರುವುದು, ಸೀನುತ್ತಾ ಇರುವುದು ಕಣ್ಣುಗಳಲ್ಲಿ ನೀರು ಬರುವುದು, ತಲೆಯ ಮುಂಭಾಗದಲ್ಲಿ ಮತ್ತು ಹುಬ್ಬುಗಳ ಮೇಲೆ ಸಾಧಾರಣದಿಂದ ತೀವ್ರವಾಗಿ ನೋವು ಉಂಟಾಗುವುದು.
- **ಪದೇ ಪದೇ ಬರುವ ತಲೆನೋವು:** ತಲೆನೋವು ಬಂದಾಗ ಸ್ವಯಂ ಔಷಧ ಮಾಡಿಕೊಳ್ಳುವುದರಿಂದ (ನೋವುನಿವಾರಕ ಮಾತ್ರೆಗಳನ್ನು ವೈದ್ಯಕೀಯ ಸಲಹೆ ಇಲ್ಲದೆ ಪದೇ ಪದೇ ಸೇವಿಸುವುದು) ಉಂಟಾಗುವುದು.



ಪರಿಹಾರಗಳು

- ಯಾವ ಕಾರಣದಿಂದ ತಲೆನೋವು ಬರುತ್ತಿದೆಯೋ ಅಂತಹ ಕಾರಣಗಳನ್ನು /ತಪ್ಪುಗಳನ್ನು ಮಾಡದಿರುವುದೇ (ನಿದಾನಸ್ಯ ಪರಿವರ್ಜನಮ್) ಅತ್ಯಂತ ಪರಿಣಾಮಯುಳ್ಳ ಪರಿಹಾರ.
- ಮಲಬದ್ಧತೆ ಉಂಟಾಗದಂತೆ ನೋಡುವುದು. ಮಲಬದ್ಧತೆ ಉಂಟಾದಲ್ಲಿ ಶೀಘ್ರವೇ ವೈದ್ಯರ ಸಲಹೆಯಂತೆ ಪರಿಹರಿಸಿಕೊಳ್ಳುವುದು.
- ಪ್ರತಿದಿನವೂ ಹಾಲು, ತುಪ್ಪವನ್ನು ಆಹಾರದಲ್ಲಿ ಬಳಸುವುದು.
- ಮೊಬೈಲ್, ಕಂಪ್ಯೂಟರ್ ನೋಡುವಾಗ ಸರಿಯಾದ ಭಂಗಿಯಲ್ಲಿ ಕುತ್ತಿಗೆಗೆ ಶ್ರಮವಾಗದಂತೆ ಕುಳಿತು ಕೊಳ್ಳುವುದು.
- ಒಂದು ಚಮಚ ಕೊತ್ತಂಬರಿಬೀಜವನ್ನು ಚೆನ್ನಾಗಿ ತೊಳೆದು ಒಂದು ಲೋಟ ಕುಡಿಯುವ ನೀರಿನಲ್ಲಿ 1-2 ಗಂಟೆಗಳ ಕಾಲ ನೆನೆಸಿ ನಂತರ ಕುಡಿಯಬೇಕು. ಮೇಲೆ ತಿಳಿಸಿದಂತೆ ಜೀರಿಗೆಯನ್ನು ರಾತ್ರಿ ನೆನೆಸಿಟ್ಟು ಮರುದಿನ ಬೆಳಿಗ್ಗೆ ಎದ್ದು ಕುಡಿಯಬೇಕು.
- ಬೂದುಗುಂಬಳದ (ಹಸಿ/ ಬೇಯಿಸಿದ) ಒಂದು ಲೋಟದಷ್ಟು ರಸವನ್ನು ಕುಡಿಯಬೇಕು. ಇದರಿಂದ ಆಹಾರಸೇವನೆಯ ವ್ಯತ್ಯಾಸದಿಂದುಂಟಾದ ಅಸಿಡಿಟಿ, ಅಜೀರ್ಣ ಹತೋಟಿಗೆ ಬರುವುದು. ತಲೆನೋವು ಬಹಳ ಬೇಗ ಶಮನವಾಗುವುದು.
- ತಲೆಗೆ ಎಣ್ಣೆಯನ್ನು ಹಚ್ಚಿ ಮೃದುವಾಗಿ ಒತ್ತಿ ಮಸಾಜ್ ಮಾಡಬೇಕು; ಬಟ್ಟೆಯೊಂದನ್ನು ಬಿಸಿನೀರಿನಲ್ಲಿ ಅದ್ದಿ ಹಿಂಡಿ ಅದರಿಂದ ಹಣೆಯ ಭಾಗಕ್ಕೆ ಹಿತವಾಗಿ ಶಾಖ ಕೊಡಬೇಕು.
- ನೆಲ್ಲಿಕಾಯಿಯ ಪುಡಿಯನ್ನು ನೀರು ಸೇರಿಸಿ ಅದರ ಕಲ್ಕವನ್ನು ಹಣೆಯ ಮೇಲೆ ಲೇಪಿಸುವುದು.
- ಹಸಿ ಶುಂಠಿಯನ್ನು ಅಥವಾ ಅರಿಸಿನದ ಕೊಂಬನ್ನು ನೀರಿನಲ್ಲಿ ತೇಯ್ದು ಬಿಸಿ ಮಾಡಿ ಹಣೆಗೆ ಹಚ್ಚಬೇಕು. ಇದು ಶೀತದಿಂದ ಉಂಟಾದ ತಲೆನೋವನ್ನು ಶಮನ ಮಾಡುವುದು.
- ದೂಳು ಹೊಗೆಯಿರುವಲ್ಲಿ ಹೋಗುವಾಗ ಮೂಗು, ಬಾಯಿ ಮುಚ್ಚುವಂತಹ ವಸ್ತ್ರವನ್ನು ಬಳಸುವುದು. (ಈಗ ಮಾಸ್ಕ್ ಅನ್ನು ಬಳಸುತ್ತಿರುವುದರಿಂದ ಈ ಸಮಸ್ಯೆ ಕಡಿಮೆ ಆಗಿದೆ.)
- 15 ದಿನಕ್ಕೊಮ್ಮೆ ಯಾದರೂ ಅಭ್ಯಂಗಸ್ನಾನವನ್ನು ಮಾಡುವುದು.
- ಒತ್ತಡವನ್ನು ಕಡಿಮೆ ಮಾಡಲು ಬೆಳಗಿನ ಪ್ರಶಾಂತ ವಾತಾವರಣದಲ್ಲಿ ಸ್ವಲ್ಪ ಸಮಯ ವಾಕ್ ಮಾಡುವುದು, ದೇಹಕ್ಕೆ ಶ್ರಮವಾಗದಿರುವಷ್ಟು ವ್ಯಾಯಾಮ, ಮನಸ್ಸನ್ನು ಶಾಂತವಾಗಿಡಲು ಪ್ರಾಣಾಯಾಮ, ಮನಸ್ಸನ್ನು ಮುದಗೊಳಿಸಲು ಸುಶ್ರಾವ್ಯವಾದ ಸಂಗೀತವನ್ನು ಆಲಿಸುವುದು.

ರಾತ್ರಿ ಸರಿಯಾದ ಸಮಯಕ್ಕೆ ಮಲಗಿ 6-7 ಗಂಟೆಗಳ ಸುಖವಾದ ನಿದ್ರೆಯನ್ನು ಮಾಡಿ ಬೆಳಗ್ಗೆ ಸೂರ್ಯೋದಯದ ಮೊದಲು ಏಳುವುದು; ನಿರ್ದಿಷ್ಟ ಸಮಯದಲ್ಲಿ ಆಹಾರ ಸೇವಿಸುವುದು; ಒಳ್ಳೆಯ ಚಿಂತನೆಯನ್ನೇ ಮಾಡುವುದು ದೈಹಿಕ ಮಾನಸಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿಡುವ ಉತ್ತಮ ಉಪಾಯ.

ಯಾವುದೇ ರೀತಿಯ ತಲೆನೋವು ಬಂದರೂ ತಡಮಾಡದೆ ವೈದ್ಯರ ಸಲಹೆ ಮೇರೆಗೆ ಔಷಧವನ್ನು ಸೇವಿಸುವುದು ಒಳ್ಳೆಯದು.

(ಲೇಖಕಿ: ಆಯುರ್ವೇದವೈದ್ಯೆ)



ಸುಭಾಷಿತ

ಅಸೂಯೆಯು ಮನುಷ್ಯನ ಅಂತರಂಗದಲ್ಲಿರುವ ಪ್ರಬಲ ಶತ್ರು. -ಬರ್ಟ್ರಾಂಡ್ ರಸೆಲ್

ಶ್ರೀಕಾಂತ್ ಚಾರಿತ್ರಿಕ ಸಾಧನೆ ಭರವಸೆಯ ಬೆಳಕು ಲಕ್ಷ್ಯ

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆಲ್ಲುವ ಮೂಲಕ ಭಾರತದ ಕಿದಂಬಿ ಶ್ರೀಕಾಂತ್ ಅವರು ಐತಿಹಾಸಿಕ ಸಾಧನೆ ಮೆರೆದರು. ಸ್ಪೇನ್‌ನ ಯುವೆಲಾದಲ್ಲಿ ನಡೆದ ಟೂರ್ನಿಯಲ್ಲಿ ಹೋದ ಬಾರಿಯ ಚಾಂಪಿಯನ್ ಪಿ.ವಿ. ಸಿಂಧು ಎಂಟರ ಘಟ್ಟದಲ್ಲಿ ಸೋತ ನಿರಾಶೆಯನ್ನು ಶ್ರೀಕಾಂತ್ ಮರೆಸಿದರು. ಅಲ್ಲದೇ ಭಾರತದ ಪುರುಷರ ಬ್ಯಾಡ್ಮಿಂಟನ್ ಬೆಳವಣಿಗೆಯ ದೃಷ್ಟಿಯಿಂದ ಇನ್ನಷ್ಟು ಭರವಸೆ ಮೂಡಿಸಿದರು. ಕಂಚಿನ ಪದಕ ಗೆದ್ದ ಲಕ್ಷ್ಯ ಸೇನ್ ಕೂಡ ಶ್ರೀಕಾಂತ್ ಅವರೊಂದಿಗೆ ಸಂಭ್ರಮಕ್ಕೆ ಇನ್ನಷ್ಟು ಮೆರುಗು ಮೂಡಿಸಿದರು. ವಿಶ್ವ ಚಾಂಪಿಯನ್‌ಷಿಪ್‌ನ ನಾಲ್ಕು ದಶಕಗಳಿಗಿಂತಲೂ ಹೆಚ್ಚಿನ ಇತಿಹಾಸದಲ್ಲಿ ಪುರುಷರ ವಿಭಾಗದಲ್ಲಿ ಭಾರತಕ್ಕೆ ಸಂದ ನಾಲ್ಕನೇ ಪದಕ ಇದಾಗಿದೆ. ಇಷ್ಟು ಸುದೀರ್ಘ ಅವಧಿಯಲ್ಲಿ ಫೈನಲ್ ತಲುಪಿದ ಮೊದಲ ಆಟಗಾರನೆಂಬ ಹೆಗ್ಗಳಿಕೆ ಶ್ರೀಕಾಂತ್ ಅವರದ್ದಾಗಿದೆ. 1983ರಲ್ಲಿ ಪ್ರಕಾಶ್ ಪಡುಕೋಣೆ ಮತ್ತು 2019ರಲ್ಲಿ ಬಿ. ಸಾಯಿಪ್ರಣೀತ್ ಕಂಚಿನ ಪದಕ ಗೆದ್ದಿದ್ದರು. ಈ ವರ್ಷದಲ್ಲಿ ಇಬ್ಬರು ಪದಕಗಳನ್ನು ಗೆದ್ದಿರುವುದು ಕೂಡ ದಾಖಲೆ. ಈ ಬಾರಿ ನಾಲ್ಕರ ಘಟ್ಟದ ಪಂದ್ಯದಲ್ಲಿ ಶ್ರೀಕಾಂತ್ ಮತ್ತು ಲಕ್ಷ್ಯ ಮುಖಾಮುಖಿಯಾಗಿದ್ದು ಕೂಡ ವಿಶೇಷ. ತಮಗಿಂತಲೂ ಎಂಟು ವರ್ಷ ದೊಡ್ಡವರಾದ ಶ್ರೀಕಾಂತ್ ವಿರುದ್ಧ ಸೆಣಸಿದ 20 ವರ್ಷದ ಲಕ್ಷ್ಯ ಆಟ ಕೌಶಲಪೂರ್ಣವಾಗಿತ್ತು. ಭವಿಷ್ಯದ ತಾರೆಯಾಗುವ ಎಲ್ಲ ಲಕ್ಷಣಗಳೂ ಅವರಲ್ಲಿವೆ. ದಿಗ್ಗಜ ಕೋಚ್ ಪುಲ್ಲೇಲ ಗೋಪಿಚಂದ್ ಅವರ ಅಕಾಡೆಮಿಯಲ್ಲಿ ಹಲವು ವರ್ಷಗಳಿಂದ ತರಬೇತಿ ಪಡೆಯುತ್ತಿರುವ ಶ್ರೀಕಾಂತ್ ಅವರಿಗೆ ಈ ಪದಕ ಹೊಸ ಚೈತನ್ಯ ನೀಡುವ ಎಲ್ಲ ಸಾಧ್ಯತೆಗಳು ಇವೆ. ಏಕೆಂದರೆ ಈ ವರ್ಷ ಅವರಿಗೆ ಅಷ್ಟೊಂದು ಒಳ್ಳೆಯ ಫಲಿತಾಂಶಗಳು ಲಭಿಸಿರಲಿಲ್ಲ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಆಡಲು ಅರ್ಹತೆ ಗಿಟ್ಟಿಸದೇ ನಿರಾಶೆಗೊಂಡಿದ್ದರು. ಕೋವಿಡ್ ಕಾಲಘಟ್ಟದಲ್ಲಿ ಟೂರ್ನಿಗಳ ಆಯೋಜನೆಯಲ್ಲಿ ಆದ ಏರುಪೇರು ಮತ್ತು ಅದರಿಂದ ಶ್ರೇಯಾಂಕದಲ್ಲಿ ಕುಸಿತ ಕಂಡಿದ್ದರಿಂದ ಅವರು ಅರ್ಹತೆ ಪಡೆದಿರಲಿಲ್ಲ. ಕಳೆದ ಎರಡು ತಿಂಗಳಲ್ಲಿ ನಡೆದ ಪ್ರಮುಖ ಟೂರ್ನಿಗಳಲ್ಲಿ ಅವರು ನಿರಾಶೆ ಅನುಭವಿಸಿದ್ದೇ ಹೆಚ್ಚು. ಇತ್ತೀಚೆಗೆ ಇಂಡೊನೇಷ್ಯಾ ಮಾಸ್ಟರ್ಸ್ ಟೂರ್ನಿಯ ನಾಕೌಟ್ ಹಂತದಲ್ಲಿ ಎಡವಿದ್ದರು. ಅದರಿಂದಾಗಿ ಅವರು ವಿಶ್ವ ಟೂರ್ನಿಯಲ್ಲಿ ಪದಕ ಸಾಧನೆ ಮಾಡುವ ಬಗ್ಗೆ ಹೆಚ್ಚು ನಿರೀಕ್ಷೆಗಳೇನೂ ಇರಲಿಲ್ಲ. ಸ್ಪೇನ್‌ಗೆ ತೆರಳಲು ವೀಸಾ ಸಿಕ್ಕಿದ್ದೂ ಕೊನೆಯ ಕ್ಷಣದಲ್ಲಿ. ಆ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿದ ಅವರ ಮನೋಬಲಕ್ಕೆ ಯಶಸ್ಸು ದೊರೆತಿದೆ. ಫೈನಲ್‌ನಲ್ಲಿ ಸಿಂಗಪುರದ ಲೋಹ್ ಕಿನ್ ಯೂ ವಿರುದ್ಧದ ಸೋಲಿನಲ್ಲಿ ಆದ ಲೋಪಗಳನ್ನು ತಿದ್ದಿಕೊಂಡರೆ ಮುಂದಿನ ವರ್ಷದ ಏಷ್ಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಸಾಧನೆ ಮಾಡುವ ಅವಕಾಶ ಅವರಿಗೆ ಇದೆ.



ಆಟದ ಅಂತಿಮ ಹಂತದಲ್ಲಾಗುವ ಲೋಪಗಳನ್ನು ನಮ್ಮ ಆಟಗಾರರು ತಿದ್ದಿಕೊಂಡರೆ ಹೊಸ ವರ್ಷದಲ್ಲಿ ಮತ್ತಷ್ಟು ಸಂಭ್ರಮದ ಹೊನಲು ಹರಿಯುವ ಸಾಧ್ಯತೆ ಇದೆ

ಈ ಟೂರ್ನಿಯಲ್ಲಿ ಮೂಡಿದ ಮತ್ತೊಂದು ಆಶಾಕಿರಣವೆಂದರೆ ಲಕ್ಷ್ಯ ಸೇನ್. ಉತ್ತರಾಖಂಡದ ಲಕ್ಷ್ಯ ಸಬ್ ಜೂನಿಯರ್ ಹಂತದಿಂದಲೂ ಬೆಂಗಳೂರಿನ ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ತಂದೆ ಡಿ.ಕೆ. ಸೇನ್ ಮತ್ತು ಅನುಭವಿ ಕೋಚ್ ವಿಮಲ್ ಕುಮಾರ್ ಅವರು ಲಕ್ಷ್ಯಗೆ ಮಾರ್ಗದರ್ಶನ ನೀಡಿದ್ದಾರೆ. ಯೂತ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಮತ್ತು ಏಷ್ಯನ್ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿರುವ ಲಕ್ಷ್ಯ, ಭಾರತದ ಬ್ಯಾಡ್ಮಿಂಟನ್ ಕ್ಷೇತ್ರಕ್ಕೆ ಭವಿಷ್ಯದ ಧ್ವಜಧಾರಿಯಾಗುವ ಭರವಸೆ ಮೂಡಿಸಿದ್ದಾರೆ. ದೇಶದ ಕೆಲವು ಸೀನಿಯರ್ ಆಟಗಾರರು ತಮ್ಮ ವೃತ್ತಿಜೀವನದ ಕೊನೆಯ ಹಂತದತ್ತ ಸಾಗುತ್ತಿರುವ ಈ ಹೊತ್ತಿನಲ್ಲಿ ಲಕ್ಷ್ಯ ಅವರಂತಹ ಯುವಪ್ರತಿಭೆ ಬೆಳಕಿಗೆ ಬಂದಿರುವುದು ಶುಭಸೂಚನೆ.

ಚೀನಾ, ಕೊರಿಯಾ ಮತ್ತು ಜಪಾನ್ ಆಟಗಾರರ ಪ್ರಾಬಲ್ಯ ಹೆಚ್ಚಿರುವ ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಒಂದು ದಶಕದಿಂದ ಭಾರತ ಛಾಪು ಮೂಡಿಸುತ್ತಿದೆ. ಈ ಅವಧಿಯಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ 10 ಪದಕಗಳು ದೇಶದ ಮುಡಿಗೇರಿವೆ. ಅದರಲ್ಲಿ ಮಹಿಳೆಯರದ್ದೇ ಸಿಂಹಪಾಲು. 2011ರಲ್ಲಿ ಜ್ವಾಲಾ ಗುಟ್ಟಾ ಮತ್ತು ಅಶ್ವಿನಿ ಪೊನ್ನಪ್ಪ ಜೋಡಿಯು ಡಬಲ್ಸ್ ವಿಭಾಗದಲ್ಲಿ ಕಂಚು ಗೆದ್ದಿತು. ಅದಾದ ನಂತರ ಸಿಂಗಲ್ಸ್‌ನಲ್ಲಿ ಸಿಂಧು ಐದು ಪದಕ ಗೆದ್ದರು. ಅದರಲ್ಲಿ ಒಂದು ಚಿನ್ನದ ಪದಕ. ಸೈನಾ ನೆಹ್ವಾಲ್ ಒಂದು ಬೆಳ್ಳಿ ಮತ್ತು ಒಂದು ಕಂಚು ಗಳಿಸಿದರು. ಸೂಪರ್ ಸೀರಿಸ್ ಟೂರ್ನಿಗಳ ಸಂಖ್ಯೆಯಲ್ಲಿ ಹೆಚ್ಚಳ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿದ ಪೈಪೋಟಿ, ದೇಶದಲ್ಲಿ ತರಬೇತಿಗೆ ಅತ್ಯಾಧುನಿಕ ತಂತ್ರಜ್ಞಾನ ಬಳಕೆ ಮತ್ತು ಪ್ರೋತ್ಸಾಹದ ಹೆಚ್ಚಳದಿಂದಾಗಿ ಈ ಸಾಧನೆ ಸಾಧ್ಯವಾಗುತ್ತಿದೆ. ವಿದೇಶಿ ಕೋಚ್‌ಗಳ ನೆರವು ಸುಲಭವಾಗಿ ಲಭಿಸುತ್ತಿರುವುದರಿಂದ ಆಟಗಾರರ ಕೌಶಲದಲ್ಲಿ ಸುಧಾರಣೆ ಕಂಡುಬರುತ್ತಿದೆ. ಫಿಟ್‌ನೆಸ್ ಮಟ್ಟವೂ ಹೆಚ್ಚುತ್ತಿದೆ. ಆದರೆ, ಟೋಕಿಯೊ ಒಲಿಂಪಿಕ್ಸ್ ಸೇರಿದಂತೆ ಇತ್ತೀಚಿನ ಕೆಲವು ಪ್ರಮುಖ ಟೂರ್ನಿಗಳಲ್ಲಿ ಸಿಂಧು ನಾಕೌಟ್ ಹಂತದಲ್ಲಿ ಎಡವಿದ್ದು ಹೆಚ್ಚು. ಅದರಲ್ಲೂ ಚೀನಾ ತೈಪೆಯ ತೈ ಜು ಯಿಂಗ್ ವಿರುದ್ಧ ಅವರು ಸತತವಾಗಿ ಸೋಲನುಭವಿಸುತ್ತಿದ್ದಾರೆ. ಇದರಿಂದಾಗಿ ಚಿನ್ನದ ಪದಕ ಅವರಿಂದ ದೂರ ಉಳಿಯುತ್ತಿದೆ. ಶ್ರೀಕಾಂತ್ ಕೂಡ ಫೈನಲ್‌ನಲ್ಲಿ ಇನ್ನಷ್ಟು ಚುರುಕುತನ ತೋರಬೇಕಿತ್ತು. ಆಟದ ಅಂತಿಮ ಹಂತದಲ್ಲಾಗುವ ಲೋಪಗಳನ್ನು ನಮ್ಮ ಆಟಗಾರರು ತಿದ್ದಿಕೊಂಡರೆ ಹೊಸ ವರ್ಷದಲ್ಲಿ ಮತ್ತಷ್ಟು ಸಂಭ್ರಮದ ಹೊನಲು ಹರಿಯುವ ಕನಸು ಕೈಗೂಡಬಹುದು.

ದಿನದ ಟ್ವೀಟ್




ತರ್ಕರಹಿತ ನಿಲುವು

ಚುನಾವಣಾ ಬಾಂಡ್‌ಗಳನ್ನು ಆಧಾರ್/ಮತದಾರರ ಗುರುತಿನ ಚೀಟಿಗೆ ಜೋಡಿಸಿ, ಅದನ್ನು ಸಾರ್ವಜನಿಕ ಅವಗಾಹನೆಗೆ ಮುಕ್ತಗೊಳಿಸಿದ ಮೇಲಷ್ಟೇ ಆಧಾರ್ ಅನ್ನು ಮತದಾರರ ಗುರುತಿನ ಚೀಟಿಗೆ ಜೋಡಿಸಬೇಕು. ಅದಕ್ಕಿಂತ ಮೊದಲೇ ಅಲ್ಲ, ಅಲ್ಲವೇ? ಪ್ರಜೆಗಳು ಮಾತ್ರ ಉತ್ತರದಾಯಿಗಳಾಗಿರಬೇಕು, ಆದರೆ ರಾಜಕೀಯ ಪಕ್ಷಗಳಿಗೆ ಅಂತಹ ಅಗತ್ಯ ಇಲ್ಲವೇ? ಯಾವ ಬಗೆಯ ತರ್ಕ ಇದು?

ಸುಮಂತ್ ರಾಮನ್, ಟಿ.ವಿ.ನಿರೂಪಕ, ವಿಶ್ಲೇಷಕ

ಕಿಡಿನುಡಿ



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ (ನರೇಗಾ), ಹಣಕಾಸಿನ ಕೊರತೆಯಿಂದ ಡಿಸೆಂಬರ್‌ನಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ, ಅಂದರೆ ಕೇವಲ ನಾಲ್ಕು ಕೋಟಿ ಮಾನವ ದಿನಗಳಷ್ಟೇ ಕೆಲಸ ನೀಡಲಾಗಿದೆ. ಗ್ರಾಮೀಣ ಭಾಗದಲ್ಲಿನ ಸಂಕಷ್ಟಗಳು ಮತ್ತು ನಿರುದ್ಯೋಗದ ಪ್ರಮಾಣವನ್ನು ಪರಿಗಣಿಸುವುದಾದರೆ, ಈ ಯೋಜನೆಯಡಿ ಹೆಚ್ಚು ಕೆಲಸ ನೀಡಬೇಕಾಗಿತ್ತು. ಮೋದೀಜಿ, ಜಾಹೀರಾತುಗಳು ಮತ್ತು ಕಾರ್ಯಕ್ರಮಗಳಿಗೆ ಬೇಕಾದಷ್ಟು ಹಣ ಇರುತ್ತದೆ, ಆದರೆ ನರೇಗಾ ಯೋಜನೆಗೆ ನೀಡುವುದಕ್ಕೆ ಮಾತ್ರ ಹಣ ಇಲ್ಲವೇ?

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 21-12-1996

• ಹೊಯ್ಸಳರ ನಾಡಿನಲ್ಲಿ ನುಡಿ ಸಮ್ಮೇಳನ

ಹಾಸನ, ಡಿ. 20– ಹೊಯ್ಸಳ ಶಿಲ್ಪಕಲೆಯ ತವರು, ಜಗತ್ತಿನ ವಿಸ್ಮಯಗಳಲ್ಲಿ ಒಂದಾಗಿರುವ ಗೊಮ್ಮಟನ ಆವಾಸಸ್ಥಾನದ ಜಿಲ್ಲೆ ಹಾಸನದಲ್ಲಿ ಅಖಿಲ ಭಾರತ 65ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕೊನೇ ಗಳಿಗೆಯ ಭಾರೀ ಸಿದ್ಧತೆ ಸಾಗಿದೆ.

ಶನಿವಾರದಿಂದ ನಾಲ್ಕು ದಿನಗಳ ಕಾಲ ನಡೆಯುವ ಈ ಸಮ್ಮೇಳನಾಧ್ಯಕ್ಷತೆಯನ್ನು ಸುಮನೋಹರ ಕವಿ ಚೆನ್ನವೀರ ಕಣವಿ ವಹಿಸಲಿದ್ದು, ಪ್ರಧಾನಿ ಎಚ್.ಡಿ. ದೇವೇಗೌಡರು ಉದ್ಘಾಟಿಸಲಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳ ಇತಿಹಾಸದಲ್ಲಿ ನಾಲ್ಕು ದಿನ ಮೇಳ ನಡೆಯುತ್ತಿರುವುದು ಇದೇ ಪ್ರಥಮ ಸಲ.

50 ವರ್ಷಗಳ ಹಿಂದೆ

ಮಂಗಳವಾರ, 21-12-1971

• ಭುಟ್ಟೊ- ಪಾಕ್ ಅಧ್ಯಕ್ಷ ಪ್ರಮಾಣವಚನ ಸ್ವೀಕಾರ

ನವದೆಹಲಿ, ಡಿ. 20– ಜನರಲ್ ಯಾಹ್ಯಾ ಖಾನರ ನಾಯಕತ್ವದ ಮಿಲಿಟರಿ ಆಡಳಿತಕ್ಕೆ ಜನತೆಯ ವಿರೋಧ ಹೆಚ್ಚುತ್ತಿದ್ದಂತೆ, ಎಡಪಂಥೀಯ ಜನತಾ ಪಕ್ಷದ ನಾಯಕ ಜಡ್. ಎ.ಭುಟ್ಟೊ ಅವರು ಇಂದು ಪಾಕಿಸ್ತಾನದ ಅಧ್ಯಕ್ಷರಾಗಿ ನೇಮಕಗೊಂಡರು.

ವಿಶ್ವಸಂಸ್ಥೆಯಲ್ಲಿ ಅವರಿಗೆ ತುರ್ತಾಗಿ ಕರೆ ಕಳುಹಿಸಲಾಯಿತು. ವಿಶ್ವಸಂಸ್ಥೆಯಿಂದ ಹಿಂತಿರುಗಿದ ಕೂಡಲೇ ಅವರಿಗೆ ಅಧಿಕಾರವನ್ನು ವಹಿಸಿಕೊಡಲಾಯಿತು ಎಂದು ರೇಡಿಯೊ ಪಾಕಿಸ್ತಾನ್ ವರದಿ ಮಾಡಿದೆ.

ಭುಟ್ಟೊ ಅವರನ್ನು ಪಾಕಿಸ್ತಾನದ ಅಧ್ಯಕ್ಷರಾಗಿ ಹಾಗೂ ಮಿಲಿಟರಿ ಆಡಳಿತಗಾರರನ್ನಾಗಿ ನೇಮಕ ಮಾಡಲಾಗಿದೆ ಎಂದು ರೇಡಿಯೊ ತಿಳಿಸಿದೆ.

ಅವರು ಔಪಚಾರಿಕವಾಗಿ ಪ್ರಮಾಣ ವಚನ ಸ್ವೀಕರಿಸಿದರು.

• ಮನರಂಜನೆ ಮೇಳಕ್ಕೆ ಲೈಸೆನ್ಸ್ ಕಾರ್ಪೊರೇಷನ್ ಸಭೆಯಲ್ಲಿ ಬಿಸಿ ಚರ್ಚೆ

ಬೆಂಗಳೂರು, ಡಿ. 20– ಮನರಂಜನೆ-ಪ್ರದರ್ಶನವಾದ ನಗರದ ಸುಭಾಷ್ ನಗರದ ರಾಷ್ಟ್ರೀಯ ಮೇಳಕ್ಕೆ ಲೈಸೆನ್ಸ್ ನೀಡುವ ವಿಷಯವು ನಗರ ಕಾರ್ಪೊರೇಷನ್ ಸಭೆಯಲ್ಲಿ ಕೋಪಾವೇಶಗಳನ್ನು ಹುಟ್ಟುಹಾಕಿತು.

ಆರೋಗ್ಯ ಕ್ಷೇತ್ರದಲ್ಲಿನ ಮೂಲಸೌಕರ್ಯ ವೃದ್ಧಿಯು ಈ ದುರಿತ ಕಾಲದಲ್ಲಿನ ಅತ್ಯುತ್ತಮ ಕಾರ್ಯ

ಜಡತ್ವ ಬೇಡ: ಸನ್ನದ್ಧತೆ ಅಗತ್ಯ



ವಿಶ್ಲೇಷಣೆ

ಪ್ರೊ. ಶ್ರೀಲತಾ ರಾವ್ ಶೇಷಾದ್ರಿ

ಕೋವಿಡ್ ಸೋಂಕಿನ ವಿರುದ್ಧ ಈಗಾಗಲೇ ನಡೆಯುತ್ತಿರುವ ಹೋರಾಟದಲ್ಲಿ ಓಮೈಕ್ರಾನ್ ರೂಪಾಂತರ ತಳಿಯ ಹೊಸ ಸವಾಲನ್ನು ನಾವೀಗ ಎದುರುಗೊಂಡಿದ್ದೇವೆ. ಭಾರತದಲ್ಲಿ ಓಮೈಕ್ರಾನ್ ಸೋಂಕಿನ ಮೊದಲ ಎರಡು ಪ್ರಕರಣಗಳು ಪತ್ತೆಯಾದದ್ದು ಬೆಂಗಳೂರಿನಲ್ಲೇ. ಓಮೈಕ್ರಾನ್ ಪ್ರಕರಣಗಳು ನಿಧಾನಕ್ಕೆ ಏರಿಕೆಯಾಗುತ್ತಿವೆ. ರಾಜ್ಯದಲ್ಲಿ ಪ್ರಕರಣಗಳ ಸಂಖ್ಯೆ 19ಕ್ಕೆ ಏರಿಕೆಯಾಗಿದೆ. ಈ ತಿಂಗಳ 19ರವರೆಗಿನ ವರದಿಯ ಪ್ರಕಾರ, ರಾಷ್ಟ್ರ ಮಟ್ಟದಲ್ಲಿ ಓಮೈಕ್ರಾನ್ ಸೋಂಕಿತರ ಸಂಖ್ಯೆ 151.

ಓಮೈಕ್ರಾನ್ ಕುರಿತಾದ ಪುರಾವೆಗಳು ಇನ್ನೂ ಆರಂಭಿಕ ಹಂತಗಳಲ್ಲಿವೆ. ಆದರೆ ಇದು ಅತಿವೇಗವಾಗಿ ಹರಡಬಲ್ಲದು ಹಾಗೂ ಲಸಿಕೆ ಹಾಕಿಸಿಕೊಂಡವರಿಗೂ ಸೋಂಕು ತಗುಲಿಸಬಲ್ಲದು ಎಂಬಂತೆ ಗೋಚರವಾಗುತ್ತಿದೆ. 2022ರ ಫೆಬ್ರುವರಿ ವೇಳೆಗೆ ತೀವ್ರವಾಗಬಹುದಾದಂತಹ ಸಾಂಕ್ರಾಮಿಕದ 'ಮೂರನೇ ಅಲೆ'ಯನ್ನು ಓಮೈಕ್ರಾನ್ ಉಂಟುಮಾಡಬಹುದು ಎಂದು ತಜ್ಞರು ಊಹಿಸುತ್ತಿದ್ದಾರೆ.

2021ರ ಮಾರ್ಚ್ ಸುತ್ತಮುತ್ತ, ಭಾರತದಲ್ಲಿ ಆರಂಭವಾದ ಕೋವಿಡ್ ಸಾಂಕ್ರಾಮಿಕದ ಎರಡನೇ ಅಲೆಯು ಸುಮಾರು ನಾಲ್ಕು ತಿಂಗಳುಗಳ ಕಾಲ ಕಾಡಿಸಿತ್ತು. 'ಡೆಲ್ಟಾ ವೇರಿಯಂಟ್' ಎಂದು ವಿಜ್ಞಾನಿಗಳು ನಾಮಕರಣ ಮಾಡಿದ ಕೊರೊನಾ ವೈರಸ್‌ನ ರೂಪಾಂತರ ತಳಿಯಿಂದ ಇದು ಉಂಟಾಯಿತು. 2021ರ ಏಪ್ರಿಲ್ 30ರಂದು, ಮೊದಲ ಬಾರಿಗೆ ಸೋಂಕಿತರ ಸಂಖ್ಯೆ 4 ಲಕ್ಷ ದಾಟಿ ಮೇ ತಿಂಗಳ ನಂತರ ನಿಧಾನವಾಗಿ ಇಳಿಮುಖವಾಗತೊಡಗಿತು. ಸಾಂಕ್ರಾಮಿಕವು ಆರಂಭವಾದಾಗಿನಿಂದ ದಾಖಲಾಗಿರುವ 4.77 ಲಕ್ಷ ಸಾವುಗಳ ಪೈಕಿ 2.5 ಲಕ್ಷಕ್ಕೂ ಹೆಚ್ಚು ಸಾವುಗಳು ಎರಡನೇ ಅಲೆ ಸಂದರ್ಭದಲ್ಲೇ ಘಟಿಸಿವೆ.

ಭಾರತದಲ್ಲಿ ಈ ವರ್ಷ ಜೂನ್– ಜುಲೈನಲ್ಲಿ ಎರಡನೇ ಅಲೆ ಪ್ರಕರಣಗಳ ಸಂಖ್ಯೆ ತಗ್ಗಿತು. ಕೋವಿಡ್ ಸಾವುಗಳ ನಿಯಂತ್ರಣ ಹಾಗೂ ಕಾಯಿಲೆಯ ವಿರುದ್ಧ ರಕ್ಷಣೆ ನೀಡುವಲ್ಲಿ ಲಸಿಕೆಗಳು ಮುಖ್ಯ ಪಾತ್ರ ವಹಿಸಿದವು. ನಿಧಾನವಾಗಿ ಜನರ ಚಟುವಟಿಕೆಗಳ ಮೇಲಿನ ನಿರ್ಬಂಧಗಳನ್ನೂ ಸಡಿಲಿಸಲಾಯಿತು. ಉದಾಹರಣೆಗೆ, ಕೆಲವು ಸುರಕ್ಷಾ ನಿಯಮಗಳ ಜೊತೆಗೆ ಜುಲೈ ಮೊದಲ ವಾರದಲ್ಲಿ ಮಾಲ್‌ಗಳನ್ನು ಪುನಃ ತೆರೆಯಲಾಯಿತು. ಸೆಪ್ಟೆಂಬರ್ ನಂತರ, ಅನೇಕ ಉದ್ಯೋಗಿಗಳು ವಾರದ ಕೆಲವು ದಿನ ಕಚೇರಿಗಳಿಂದಲೇ ಕೆಲಸ ಮಾಡಲು ಆರಂಭಿಸಿದರು. ಮಕ್ಕಳೂ ಶಾಲೆಗಳಿಗೆ ಹಿಂತಿರುಗಿದ್ದಾರೆ. ಅರ್ಹ ವಿದ್ಯಾರ್ಥಿಗಳಿಗೆ ಕಡ್ಡಾಯ ಲಸಿಕೆಯೊಂದಿಗೆ, ಸುರಕ್ಷಾ ನಿಯಮಗಳ ಪಾಲನೆಯೊಂದಿಗೆ ಕಾಲೇಜುಗಳೂ ಆರಂಭವಾಗಿವೆ.

ಆದರೆ ಸಹಜ ಜನಜೀವನಕ್ಕೆ ಹೆಚ್ಚು ತೆರೆದುಕೊಳ್ಳುವುದರಿಂದ ಹೆಚ್ಚಿನ ಅಪಾಯವೂ ಇದೆ. ನೆನಪಿಡಿ, ಸಂತೃಪ್ತ ಭಾವ ತಾಳಲು ಅವಕಾಶವೇ ಇಲ್ಲ. ಡೆಲ್ಟಾ ರೂಪಾಂತರ ತಳಿಯ ಪ್ರವೇಶ ಹಾಗೂ ಇದರಿಂದ ಕಡೆಗೆ ನಮ್ಮ ಆರೋಗ್ಯ ಸಂಪನ್ಮೂಲಗಳ ಮೇಲೆ ಬಿದ್ದಂತಹ ಒತ್ತಡಕ್ಕೆ, ವೈರಸ್ ಅನ್ನು 'ಸೋಲಿಸಿದ್ದೇವೆ' ಎಂಬಂಥ ಸಂತೃಪ್ತ ಭಾವದಲ್ಲಿ ಬೀಗಿದ್ದುದೇ ಕಾರಣವಾಗಿತ್ತು ಎಂಬುದನ್ನು ನಾವು ಮರೆಯಬಾರದು.

ಓಮೈಕ್ರಾನ್ ರೂಪಾಂತರ ತಳಿ ಒಡ್ಡಲಿರುವ ಸವಾಲುಗಳು ಡೆಲ್ಟಾ ರೂಪಾಂತರಿಗಿಂತ ಭಿನ್ನವಾಗಿರುತ್ತವೆ. ಹೀಗಾಗಿ, ಎರಡು ಕ್ಷೇತ್ರಗಳಲ್ಲಿ ಆರೋಗ್ಯ ವ್ಯವಸ್ಥೆ ಸಿದ್ಧವಾಗಿ ಇರಬೇಕಾದುದು ಅಗತ್ಯ.

ಮೊದಲನೆಯದು, ತಡೆಗಟ್ಟುವಿಕೆ. ಇದು ಆಶಾ ಹಾಗೂ ಎಎನ್‌ಎಂನಂತಹ (ಮಹಿಳಾ ಆರೋಗ್ಯ ಸಹಾಯಕಿಯರು) ಮುಂಚೂಣಿ ಕಾರ್ಯಕರ್ತರ ಪ್ರಾಥಮಿಕ ಹೊಣೆಗಾರಿಕೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ, ಆರೋಗ್ಯ ವ್ಯವಸ್ಥೆಯ ಜೊತೆಗೆ ಸಮುದಾಯಗಳಿಗೆ ಸಂಪರ್ಕದ ಮೊದಲ ಬಿಂದುವಾಗಿರುವವರು ಈ ಕಾರ್ಯಕರ್ತರೇ. ಸಾಂಕ್ರಾಮಿಕದ ಸಂದರ್ಭದಲ್ಲಿ ಮನೆಮನೆ ಸಮೀಕ್ಷೆ, ಸೋಂಕು ಸಂಪರ್ಕ ಪತ್ತೆ, ಜಾಗೃತಿ ಸಮೀಕ್ಷೆ, ಆಹಾರ ಪಡಿತರ ವಿತರಣೆಯಂತಹ ಕಾರ್ಯಗಳನ್ನು ಕೈಗೊಂಡಿದ್ದ ಈ ಕಾರ್ಯಕರ್ತರು ಈಗ ಲಸಿಕೆ ಅಭಿಯಾನದತ್ತ ಗಮನ ಕೇಂದ್ರೀಕರಿಸಿದ್ದಾರೆ. ಇದು, ಅವರ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಬೀರಿರುವಂತಹ ಪರಿಣಾಮಗಳ ಕುರಿತು ಮಾಧ್ಯಮಗಳು ಹಾಗೂ ಶೈಕ್ಷಣಿಕ ಸಂಶೋಧನೆಗಳು ವರದಿ ಮಾಡಿವೆ. ಹಲವರು ಜೀವಗಳನ್ನೂ ತೆತ್ತಿದ್ದಾರೆ. ಕೋವಿಡ್ ಕರ್ತವ್ಯದಲ್ಲಿದ್ದಾಗ ಅಪಾಯ ಭತ್ಯೆ, ಆರೋಗ್ಯ ವಿಮೆಯಲ್ಲದೆ ತಮ್ಮ ಉದ್ಯೋಗ ಕಾಯಮಾತಿ ಬೇಡಿಕೆಗಳಿಗಾಗಿ 2021ರ ಅಕ್ಟೋಬರ್‌ನಲ್ಲಿ ಈ ಕಾರ್ಯಕರ್ತರು ಒಂದು ದಿನದ ಮುಷ್ಕರ ಸಹ ನಡೆಸಿದ್ದಾರೆ. ನಮ್ಮ ವಿಕೇಂದ್ರೀಕೃತ ಆರೋಗ್ಯ ವ್ಯವಸ್ಥೆಯ ಬೆನ್ನೆಲುಬಾಗಿರುವ ಅವರ ಸೇವೆಗೆ ಸರಿಯಾದ ಮಾನ್ಯತೆ ದೊರಕಬೇಕಿದೆ.

ಎರಡನೆಯ ಕ್ಷೇತ್ರವೆಂದರೆ ಚಿಕಿತ್ಸೆ. ಇಲ್ಲೂ ಮಾನವ ಸಂಪನ್ಮೂಲ ವಿಚಾರಗಳು ಮುಖ್ಯವಾಗುತ್ತವೆ. ಸದ್ಯಕ್ಕೆ ಉದಾಹರಣೆಗೆ, 18 ತಿಂಗಳುಗಳಿಗೂ ಹೆಚ್ಚು ಕಾಲ ಎದುರಿಸಿದ ಕೆಲಸದ ಒತ್ತಡಗಳಿಂದ ಸಿಟ್ಟಾಗಿ ದೆಹಲಿಯ ವೈದ್ಯರು ಮುಷ್ಕರ ನಡೆಸುತ್ತಿದ್ದಾರೆ. ಕೆಲಸದ ಸ್ಥಿತಿಗತಿ ಸುಧಾರಿಸುವವರೆಗೂ ಮುಷ್ಕರ ಹಿಂತೆಗೆದುಕೊಳ್ಳುವುದಿಲ್ಲವೆಂದು ಖಚಿತವಾಗಿ ಹೇಳಿದ್ದಾರೆ. ಜೊತೆಗೆ ಇದನ್ನು ರಾಷ್ಟ್ರವ್ಯಾಪಿ ಮುಷ್ಕರವಾಗಿಸಲು ಉದ್ದೇಶಿಸಿದ್ದಾರೆ.

ರೋಗ ತಡೆಗಟ್ಟುವಿಕೆ ಹಾಗೂ ಚಿಕಿತ್ಸಾ ಸೇವೆಗಳೆರಡಕ್ಕೂ ಸಂಬಂಧಿಸಿದಂತೆ ಆರೋಗ್ಯ ಕೆಲಸಗಾರರ ತೀವ್ರ ಕೊರತೆಯನ್ನು ಭಾರತ ಎದುರಿಸುತ್ತಿದೆ. ರಾಷ್ಟ್ರೀಯ ಆರೋಗ್ಯ ಕಾರ್ಯತಂಡ ಲೆಕ್ಕಪತ್ರ (2018) ಹಾಗೂ ಎನ್‌ಎಸ್‌ಎಸ್‌ಒ (2017-18) ಅಂದಾಜುಗಳ ಪ್ರಕಾರ, ಭಾರತದಲ್ಲಿನ ಆರೋಗ್ಯ ಮಾನವ ಸಂಪನ್ಮೂಲಗಳು ಡಬ್ಲ್ಯುಎಚ್‌ಒ ಪ್ರಮಾಣಗಳಿಗಿಂತ ಬಹಳ ಕಡಿಮೆ ಇವೆ. 10 ಸಾವಿರ ಜನಸಂಖ್ಯೆಗೆ ಕೇವಲ 11 ಮಂದಿ ಅರ್ಹ ವೈದ್ಯ/ನರ್ಸ್/ಮಿಡ್ ವೈಫ್‌ಗಳಿದ್ದಾರೆ; ಆದರೆ, ಇರಬೇಕಾದ ಪ್ರಮಾಣ 44.5. ಸಂಖ್ಯೆಯಲ್ಲಿನ ಈ ಕೊರತೆಯ ಜೊತೆಗೆ ಸಾಂಕ್ರಾಮಿಕದ ಸಂದರ್ಭದಲ್ಲಿ ಆರೋಗ್ಯ ಕೆಲಸಗಾರರ ಮನೋಸ್ಥೈರ್ಯವೂ ತೀವ್ರವಾಗಿ ಕುಸಿದಿದೆ.


ನಮ್ಮಲ್ಲಿರುವ ಆರೋಗ್ಯ ಕಾರ್ಯತಂಡದವರ ಆರೋಗ್ಯ ಹಾಗೂ ಅವರು ಚೆನ್ನಾಗಿರುವಂತೆ ನೋಡಿಕೊಳ್ಳಬೇಕಾದುದೂ ಮುಖ್ಯ. ಎಂದರೆ, ಅಗತ್ಯ ರಕ್ಷಣಾ ದಿರಿಸು ಹಾಗೂ ಅವರ ವೃತ್ತಿಗೆ ಅನುಸಾರವಾಗಿ ಬೇಕಾದಂತಹ ವೈದ್ಯಕೀಯ ಉಪಕರಣಗಳನ್ನು ಒದಗಿಸುವುದಲ್ಲದೆ ಮನಸ್ಸಿನ ಸಮಾಧಾನಕ್ಕಾಗಿ ಅಗತ್ಯವಾದ ಮಾನಸಿಕ, ಸಾಮಾಜಿಕ ಹಾಗೂ ಭಾವನಾತ್ಮಕ ಬೆಂಬಲಗಳನ್ನೂ ಒದಗಿಸಬೇಕು. ಇಲ್ಲದಿದ್ದಲ್ಲಿ ಅವರು ನರಳುವುದಲ್ಲದೆ ರೋಗಿಗಳಿಗೆ ಸರಿಯಾದ ಕಾಳಜಿ ದೊರೆಯದಿರುವುದರಿಂದ ರೋಗಿಗಳೂ ನರಳುತ್ತಾರೆ.

ಓಮೈಕ್ರಾನ್ ರೂಪಾಂತರಿಯ ನಿರ್ದಿಷ್ಟ ಸವಾಲುಗಳನ್ನು ಎದುರಿಸಲು ಆರೋಗ್ಯ ವ್ಯವಸ್ಥೆ ಸನ್ನದ್ಧವಾಗಿ ಇದೆಯೇ ಎಂಬುದು ಮತ್ತೊಂದು ಮುಖ್ಯ ವಿಚಾರ. ಉದಾಹರಣೆಗೆ, ಲಸಿಕೆ ತೆಗೆದುಕೊಂಡಿಲ್ಲದ ಮಕ್ಕಳು ಹೆಚ್ಚು ತೊಂದರೆಗೆ ಒಳಗಾಗಬಹುದು ಎಂದು ತಜ್ಞರು ಮುನ್ಸೂಚನೆ ನೀಡಿದ್ದಾರೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಮಕ್ಕಳ ತಜ್ಞರ ತೀವ್ರ ಕೊರತೆ ಇದ್ದು, ಗ್ರಾಮೀಣ ಬಡಜನರು ಚಿಕಿತ್ಸೆಗೆ ಹೋಗುವಂತಹ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಶೇ 63ರಷ್ಟು ಮಕ್ಕಳ ತಜ್ಞರ ಹುದ್ದೆಗಳು ಖಾಲಿ ಬಿದ್ದಿವೆ ಎಂಬುದನ್ನು ದತ್ತಾಂಶಗಳು ತೋರಿಸಿವೆ. ಮಕ್ಕಳ ಆರೋಗ್ಯ ವಿಭಾಗದ ಐಸಿಯು ಬಹಳಷ್ಟು ವಿಸ್ತರಣೆಗೊಳ್ಳಬೇಕಾದ ಅಗತ್ಯವಿದೆ. ಉದಾಹರಣೆಗೆ, ಮಕ್ಕಳ ಮೇಲೆ ಮೂರನೇ ಅಲೆಯ ಪರಿಣಾಮದ ತೀವ್ರತೆಯನ್ನು ಆಧರಿಸಿ, ರಾಜ್ಯದಾದ್ಯಂತ, 6,801ರಿಂದ 13,602ರಷ್ಟು ಹೆಚ್ಚುವರಿ ಮಕ್ಕಳ ಐಸಿಯು ಹಾಸಿಗೆಗಳ ಅಗತ್ಯ ಬೀಳಬಹುದು ಎಂದು ಹೃದಯ ತಜ್ಞ ಡಾ. ದೇವಿಪ್ರಸಾದ್ ಶೆಟ್ಟಿ ನೇತೃತ್ವದ ಕೋವಿಡ್ ಅಲೆ- 3 ತಡೆಗಟ್ಟುವಿಕೆ ಹಾಗೂ ನಿರ್ವಹಣೆಯ ಉನ್ನತ ಮಟ್ಟದ ತಜ್ಞ ಸಮಿತಿಯು ಅಂದಾಜಿಸಿದೆ. ಓಮೈಕ್ರಾನ್ ಪ್ರಕರಣಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಈ ಶಿಫಾರಸಿನ ಬಗ್ಗೆ ತಕ್ಷಣವೇ ಕ್ರಮ ಕೈಗೊಳ್ಳಬೇಕು.

ಹೆಚ್ಚಿನ ಮೂಲಸೌಕರ್ಯ, ಪರಿಕರ ಹಾಗೂ ಆರೋಗ್ಯ ಸಿಬ್ಬಂದಿಗೆ ಅಗತ್ಯ ಸಂಪನ್ಮೂಲಗಳನ್ನು ಸರ್ಕಾರ ಒದಗಿಸಬೇಕಾದುದೇ ಸಾಂಕ್ರಾಮಿಕದ ಈ ಸಂದರ್ಭದಲ್ಲಿ ಕೈಗೊಳ್ಳಬಹುದಾದ ಉತ್ತಮ ಕಾರ್ಯವಾಗಲಿದೆ. ಇದು, ಬಿಕ್ಕಟ್ಟಿನ ಸಂದರ್ಭಗಳಲ್ಲಿ ಮಾತ್ರವಲ್ಲ, ಎಲ್ಲಾ ಕಾಲಕ್ಕೂ ಸಾಧ್ಯವಿರುವ ಉತ್ತಮ ಆರೋಗ್ಯ ಸೇವೆ ಒದಗಿಸಲು ನಮ್ಮ ಆರೋಗ್ಯ ವ್ಯವಸ್ಥೆಗೆ ಅನುವು ಮಾಡಿಕೊಡುತ್ತದೆ. ಭವಿಷ್ಯದಲ್ಲೂ ಮತ್ತೆ ಓಮೈಕ್ರಾನ್ ರೂಪಾಂತರಿಗಳ ಹೊಸ ಸವಾಲುಗಳೂ ಎದುರಾಗುವ ಸಾಧ್ಯತೆಗಳಿವೆ. ರೋಗ ತಡೆಗಟ್ಟುವಿಕೆ ಹಾಗೂ ಚಿಕಿತ್ಸಾ ಸಾಮರ್ಥ್ಯದ ಈ ಸವಾಲುಗಳನ್ನು ಎದುರಿಸಲು ಆರೋಗ್ಯ ವ್ಯವಸ್ಥೆ ಸಿದ್ಧವಾಗಿ ಇರಬೇಕಾದುದು ಅಗತ್ಯ.



ಚುರುಮುರಿ



ಅಚ್ಛೇ ದಿನ್ ಬಂತಾ?

• ಲಿಂಗರಾಜು ಡಿ.ಎಸ್.

ನಮ್ಮ ಬೆಳಗಾವಿ ನೋಡುಮ ಅಂತ ಅಲ್ಲಿಗೋದೋ. ಸುವರ್ಣಸೌಧದ ತಾವಿದ್ದ ಪೋಲೀಸರು ನಮ್ಮುನ್ನ ನೋಡಿ, 'ನೋಡ್ರಿ ಸಾ! ಪಾಪದ ಜನ ಬಾಳಾಟ ಮಾಡಿಕ್ಯಂತಾ ಸುಮ್ಮಗವ್ರೆ. ಉದ್ಯೋಗಿಲ್ಲದೋವು ಮಲ್ಲಾಗರು ಬಂದಂಗೆ ಪ್ರತಿಮೆ ಭಗ್ನಗೊಳಿಸಿ ದ್ವೇಷ ಹುಟ್ಟಾಕ್ತಾವೆ' ಅಂದ್ರು.

'ಅಲ್ಲಾ ಸಾ, ಬೆಳಗಾವಿಲಿ ಇಷ್ಟೆಲ್ಲಾ ನಡಿತಾ ಅದೆ! ನಮ್ಮ ಸಾಹಿತ್ಯ ಪರಿಸತ್ ಅದ್ಯಕ್ಸರು ಗೆದ್ದ ಜೋಶಿಂದ ಇನ್ನೂ ಆಚೆಗೆ ಬಂದಿಲ್ಲವೋ? ಬೆಳಗಾವಿ ರಾಜಕಾರಣಿಗಳು ಕಿಡಿಗೇಡಿಗಳ ಮಕ್ಕುಗಿದು ಬುದ್ಧಿ ಹೇಳದಲ್ಲವಾ? ಇದೇ ಏನ್ಸಾ ಅಚ್ಛೆದಿನ್ ಅಂದರೆ? ಯೋಚ್ನೆ ಮಾಡಿ ಮಾಡಿ ತಲೆ ಕೆಟ್ಟು ತಾಳದ ಆಗೋಗ್ಯದೆ!' ಅಂದೆ ನಾನು.

'ನೋಡ್ಲಾ, ಕೊರೋನಾದಲ್ಲಿ ಕಳ್ಳ ಲೆಕ್ಕ ಕೊಟ್ಟೋರಿಗೆ, ಪರ್ಸೆಂಟೇಜ್ ಜಮಾ ಕೊಟ್ಟೋರಿಗೆ, ತಗಂಡೋರಿಗೆ, ಸರ್ಕಾರಿ ದಿಂಡುಕುಳಗಳಿಗೆ, ಪೈಪಲ್ಲಿ ಕಾಸು ಮಡಗೋ ನಿಸ್ಸೀಮರಿಗೆ, ರಾಜಕಾರಣಿಗಳಿಗೆ ಅಚ್ಛೆದಿನ್ ನಡೀತ್ಲೇ ಅದೆ. ಸಾಮಾನ್ಯ ಜನಕ್ಕೆ ಪೆಟ್ರೋಲ್-ಡೀಸೆಲ್, ಗ್ಯಾಸ್, ತರಕಾರಿ, ದಿನಸಿ, ಕಬ್ಬಿಣ, ಸಿಮೆಂಟು, ಮರಳು ರೇಟು ಗ್ವಾಮಾಳೆಗೆ ಜೀರಿಕೊಂಡದೆ. ರೋಡೆಲ್ಲಾ ಹಡಾಲೆದ್ದು ಜನ ಗುಂಡಿಗೆ ಬಿದ್ದು ಸಾಯ್ತಾವ್ರೆ. ಮೊದಲು ಕೊರೋನಾ ಆಮೇಲೆ ಡೆಲ್ಟಾ, ಡೆಲ್ಟಾ ಪ್ಲಸ್ ಈಗ ಓಮಿಕ್ರಾನ್ ಬಂದು ಹಲವಂಗ ಮಾಡಿ ಚಡ್ಡಿ ಹರಿದೋಗ್ಯವೆ! ನಮಗೆ ಅಚ್ಛೆದಿನ್ ಎಲ್ಲ್ಯದೋ?' ಅಂದ್ರು.

'ಲೇಯ್ ನನ ಮಕ್ಕಳಾ, ಪ್ರತಿಮೆ ಹಾಳು ಮಾಡಿದೋರಿಗೆ, ಬಾವುಟ ಸುಟ್ಟೋರಿಗೆ, ಪರದೇಸಕ್ಕೆ ಜೈ ಅಂದೋರ ಇಚಾರಕ್ಕೆ ಸರ್ಕಾರ ಗುಮ್ಮಗಿದ್ದು 'ವಿರೋಧಪಕ್ಸಗಳೇ ಇದಕ್ಕೆ ಕಾರಣ' ಅಂತ ತಿಪ್ಪೆ ಸಾರಿಸ್ತಾದೆ. ಶಾಸಕರಿಗೆ ಬೆಳಗಾವಿಗೋಗಕೇ ಮೈ ನೋಯ್ತದೆ. ಮೋದಿ ದೊಡಪ್ಪಾರು ಕಾಶಿ ರಿಪೇರಿ ಮಾಡಿ ಹಾಲುಕ್ಸದ್ರಗೇ ಬಿಜಿಯಾಗವ್ರೆ. ನಮ್ಮ ಸಂಸದರೋ ಊರ್ಜಿತಾಗೋ ಕೆಲಸ ಒಂದೂ ಮಾಡ್ತಿಲ್ಲ. 'ಇಂತಾ ಮುಟ್ಠಾಳರ ದೇಸದಲ್ಲಿ ಹುಟ್ಟಿದ್ದೆವಲ್ಲಾ ಇವರಿಗೆ ಅಚ್ಛೆದಿನ್ ಎಲ್ಲಿ ಬಂದದು' ಅಂತ ಗಾಂಧಿ, ರಾಯಣ್ಣ, ಶಿವಾಜಿ ಬೇಜಾರಾಗ್ಯವರೆ!' ಯಂಟಪ್ಪಣ್ಣ ಉಗಿದು ಉಪ್ಪಾಕಿದ್ರು.

ಸಂಗತ

ಗಣಿತ 'ಗುಮ್ಮ' ಅಲ್ಲ, ಸಂಭ್ರಮ

ಗಣಿತವನ್ನು ಪರಿಕಲ್ಪನೆಗಳ ಮೂಲಕ ಕಟ್ಟಿಕೊಡಬೇಕೇ ವಿನಾ ಸೂತ್ರಗಳಿಂದಲ್ಲ

• ಯೋಗಾನಂದ

ಗಣಿತ ಎಂದೊಡನೆ ಕೆಲವು ಮಕ್ಕಳು ಚೇಳು ತುಳಿದಂತೆ ಹೌಹಾರುವುದು ಅಪರೂಪವೇನಲ್ಲ. ಕಬ್ಬಿಣದ ಕಡಲೆ, ತಲೆಬೇನೆ ಮುಂತಾದವು ಗಣಿತದ ಪರ್ಯಾಯ ಪದಗಳೇ ಆಗಿಬಿಟ್ಟಿವೆ. ಲೆಕ್ಕ ತಲೆಗೆ ಹತ್ತೋಲ್ಲ ಎನ್ನುವುದೇ ಒಂದು ಹೆಮ್ಮೆಯಾಗುವುದಿದೆ!


ವಾಸ್ತವ ಬೇರೆಯೇ ಇದೆ. ಅಪರಿಚಿತ, ಅರೆ ಪರಿಚಿತವಾದವೆಲ್ಲ ಗುಮ್ಮನಂತೆ ಕಾಡುವುದು ಸಹಜ. ಗಣಿತಕ್ಕೆ 'ವಿಜ್ಞಾನದ ರಾಣಿ' ಎಂಬ ಹಿರಿಮೆ. ವಿಜ್ಞಾನಕ್ಕೆ ನಿಖರತೆ ಒದಗಿಸಿಕೊಡುವುದೇ ಗಣಿತ. ಗಣಿತವನ್ನು ಉಪೇಕ್ಷಿಸುವ ಜ್ಞಾನ ಶಾಖೆಗಳು ಸೊರಗುತ್ತವೆ. ಹೆಗ್ಗಳಿಕೆಯೆಂದರೆ, ಸುಮಾರು 2,700 ವರ್ಷಗಳ ಹಿಂದೆಯೇ ಭಾರತದಲ್ಲಿ ಕೆಲವು ಧಾರ್ಮಿಕ ವಿಧಿ ವಿಧಾನಗಳಿಗೆ 'ಶುಲ್ಬ ಸೂತ್ರಗಳು' ಎಂಬ ಜ್ಯಾಮಿತೀಯ ಕಟ್ಟುಪಾಡುಗಳಿದ್ದವು. ನಿರ್ದಿಷ್ಟ ಅಳತೆಗೆ ದಾರ (ಶುಲ್ಬ) ಬಳಸಲಾಗುತ್ತಿತ್ತು.

ಶ್ರೀನಿವಾಸ ರಾಮಾನುಜನ್ ತಮ್ಮ ಅಲ್ಪಾಯುಷ್ಯದಲ್ಲೇ ಗಣಿತಕ್ಕೆ ಅಪ್ರತಿಮ ಕೊಡುಗೆ ನೀಡಿದರು. ಆಯ್ಲರ್, ರೀಮನ್, ಫರ್ಮಾ, ಗ್ಯಾಲಾಯ್ಸ್ ಮೊದಲಾದ ಗಣಿತ ಜಗಮಲ್ಲರಿಗೆ ಸಮಾನವಾದ ಅವರ ಸಾಧನೆ ಜಗತ್ತೇ ಹುಬ್ಬೇರಿಸುವಂಥದ್ದು. ಪ್ರತಿವರ್ಷ ಅವರ ಜನ್ಮದಿನವಾದ ಡಿಸೆಂಬರ್ 22 ಅನ್ನು 'ರಾಷ್ಟ್ರೀಯ ಗಣಿತ ದಿನ' ಎಂದು ಆಚರಿಸಲಾಗುತ್ತದೆ.

ಇತರ ಭಾಷೆಗಳಂತೆ ಗಣಿತವೂ ಒಂದು ಮಾನವ ಭಾಷೆ, ಅದು ವಿಶ್ವ ಭಾಷೆ. ಅದನ್ನು ಒಲಿಸಿಕೊಂಡರೆ ಅದೇ ನಮ್ಮನ್ನು ಬಿಡದಷ್ಟು ಚೇತೋಹಾರಿ! ಮಕ್ಕಳಿಗೆ ಗಣಿತದ ಸಮಂಜಸತೆ, ಗೊತ್ತು, ಗುರಿ ಮನಗಾಣಿಸಿದರೆ ಅವರು ಆಸಕ್ತರಾಗುತ್ತಾರೆ. ಕುತೂಹಲವೇ ಅವರಿಗೆ ಕೈಮರವಾಗುವುದು. ಪ್ರಸಂಗೋಚಿತವಲ್ಲದ್ದು ಸಹಜವಾಗಿಯೇ ಮಕ್ಕಳಿಗೆ ಅಪಥ್ಯ. ಹಾಗಾಗಿ ದಿನನಿತ್ಯದ ಸಂಗತಿಗಳನ್ನೇ ಆಧರಿಸಿ, ಹೊಂದಿಸಿ ಗಣಿತ ಬೋಧನೆ ಪರಿಣಾಮಕಾರಿ. ಕೊಟ್ಟ ಲೆಕ್ಕ ಬಿಡಿಸುವುದೇ ಗಣಿತವಲ್ಲ. ನಿಯಮ, ಸಮೀಕರಣಗಳಿಗೆ ಜೋತುಬೀಳುವುದೂ ಅಲ್ಲ. ಕೋಷ್ಟಕ, ಸೂತ್ರಗಳ ಪಟ್ಟಿಯನ್ನು ಸಲಕರಣೆಗಳ ಪೆಟ್ಟಿಗೆಯಂತೆ ಉಪಯೋಗಿಸುವುದೇ ಗಣಿತಾಧ್ಯಯನ ಅಲ್ಲ. ಗಣಿತ ಅಕ್ಷರ ಸಹ ಒಂದು ಉಲ್ಲಾಸದ ಆಟ. ಪುಸ್ತಕ ಓದುವುದಕ್ಕೆ, ಗಣಿತ ಆಡಲಿಕ್ಕೆ. ವಿನ್ಯಾಸ, ನಕಾಶೆಗಳ ನಡುವಿನ ತಾರ್ಕಿಕ ಸಂಬಂಧಗಳ ಹುಡುಕಾಟ ಅದು.

ಒಂದು ಪ್ರಮೇಯದ ಹಿಂದೆ ಅಮೂಲ್ಯ ಅಂಶಗಳಿರುತ್ತವೆ. ಅವಲೋಕಿಸಿದರೆ ಸಂತಸ, ಇಲ್ಲವಾದರೆ ಸಂಕಟ! ಪರಿಕಲ್ಪನೆಗಳ ಮೂಲಕ ಮಕ್ಕಳಿಗೆ ಗಣಿತ ಕಟ್ಟಿಕೊಡಬೇಕೇ ವಿನಾ ಸೂತ್ರ, ಸಮೀಕರಣಗಳಿಂದಲ್ಲ. ಮೂರ್ತ ಮತ್ತು ಅಮೂರ್ತವಾದವುಗಳ ನಡುವೆ ಗಣಿತ ಸಂಪರ್ಕ ಕಲ್ಪಿಸುತ್ತದೆ.

ಮಕ್ಕಳಿಗೆ ಒಂದಕ್ಕಿಂತಲೂ ಹೆಚ್ಚು ಉತ್ತರಗಳಿರುವ ಪ್ರಶ್ನೆ ಕೇಳಿದರೆ ಗಣಿತದ ಮಟ್ಟಿಗಂತೂ ಬಹು ಪ್ರೇರಕ. ಇತಿಹಾಸದಲ್ಲಿ ಸಂದ ಗಣಿತ ಶ್ರೇಷ್ಠರೆಲ್ಲ ಶ್ರದ್ಧೆಯಿಂದ, ಸ್ವಯಂ ಸ್ಫೂರ್ತಿಯಿಂದ ಕಲಿತರೇ ವಿನಾ ಪರರ ಒತ್ತಾಯಕ್ಕಲ್ಲ. ಡೆಕಾರ್ಟೆ, ನ್ಯೂಟನ್, ಲೆಬ್ನಿಜ್, ರೋಲ್ ಅಂತೆಯೇ ರಾಮಾನುಜನ್ ತರಗತಿಯಿಂದ ಹೊರಗೇ ಹೆಚ್ಚು ಗಣಿತ ಒಲಿಸಿಕೊಂಡು ಗಾರುಡಿಗರಾದವರು. ಗೌಸ್ ಎಂಬ ಗಣಿತಜ್ಞ ತರಗತಿಗೆ ವಿರಳವಾಗಿ ಬರುತ್ತಿದ್ದ, ತುಂಟ ಬೇರೆ. ಒಮ್ಮೆ ಮಾಸ್ತರು ಒಂದರಿಂದ ನೂರರ ತನಕ ಸಂಖ್ಯೆಗಳನ್ನು ಕೂಡುವ ಶಿಕ್ಷೆ ವಿಧಿಸಿದ್ದರು. ಸಂಖ್ಯೆಗಳ ಕ್ರಮಗತಿ ಗಮನಿಸಿ ಗಳಿಗೆಯಲ್ಲೇ 5050 ಎಂದಿದ್ದ ಭೂಪ!



ಕೇಂಬ್ರಿಜ್‌ನಲ್ಲಿ ರಾಮಾನುಜನ್‌ರಿಗೆ ಸಂಶೋಧನಾ ಮಾರ್ಗದರ್ಶಕರಾಗಿದ್ದ ಪ್ರೊ. ಹಾರ್ಡಿ 'ಅವರಿಗೆ ಗಣಿತ ಕಲಿಸಲು ಹೋಗಿ ನಾನೇ ಅವರಿಂದ ಹೆಚ್ಚು ಕಲಿತೆ' ಎಂದು ಪ್ರಶಂಸಿಸಿದ್ದರು. ಸಾಮಾನ್ಯವಾಗಿ ಗಣಿತ ತರಗತಿಗಳು ಉತ್ತರಗಳಿಂದಲೇ ಆರಂಭವಾಗುತ್ತವೆ. ಇಂತಿಂತಹ ಹಂತಗಳಲ್ಲಿ ಕಳೆ, ಗುಣಿಸು, ಭಾಗಿಸು... ಈಗ ಸೂತ್ರ ಅಳವಡಿಸು, ಅಗೋ ಉತ್ತರ ಮುಂತಾಗಿ ಪುಂಖಾನುಪುಂಖ ಸೂಚನೆಗಳು! ಈ ವಿಧಾನ ಬಾಯಿಪಾಠ ಉತ್ತೇಜಿಸುತ್ತದೆಯೇ ವಿನಾ ಮಕ್ಕಳನ್ನು ಎಳ್ಳಷ್ಟೂ ಚಿಂತನೆಗೆ ಪ್ರಭಾವಿಸುವುದಿಲ್ಲ. ಅದೇ ಪ್ರಶ್ನೆಯಿಂದ ಆರಂಭವಾದರೆ ತರಗತಿ ಕಳೆಗಟ್ಟುತ್ತದೆ, ವಿಶೇಷ ಸಂಚಲನ ಮೂಡುತ್ತದೆ. ಸಂದೇಹ, ಕಲ್ಪನೆ, ನಿರಾಕರಣೆ, ವಾದ, ಸಮ್ಮತಿ, ಗ್ರಹಿಕೆಯ ಮೂಲಕ ಕಲಿಕಾರ್ಥಿಗಳಿಗೆ ತಿಳಿವು ಪ್ರಾಪ್ತವಾಗುತ್ತದೆ. ಮಕ್ಕಳೇನೊ ಸಂಕೋಚವಿಲ್ಲದೆ ಹತ್ತು ಪ್ಲಸ್ ಹತ್ತು ಇಪ್ಪತ್ತೊಂದು ಏಕಾಗದು, ತ್ರಿಭುಜದಲ್ಲಿನ ಒಟ್ಟು ಕೋನ 180 ಡಿಗ್ರಿ ಹೇಗೆ ಮುಂತಾಗಿ ಕೇಳುತ್ತಾರೆ. ಆದರೆ ಬಹುತೇಕ ಆ ಮುಗ್ಧತೆ ಹಿಂದಿನ ಪ್ರಾಮಾಣಿಕ ಜ್ಞಾನದಾಹವನ್ನು ಗುರು ಹಿರಿಯರು ಗುರುತಿಸದೆ ಪ್ರಶ್ನೆಯನ್ನು ಅಧಿಕ ಪ್ರಸಂಗತನದ ಪರಮಾವಧಿ ಅಂತ ಮೂಗೆಳೆಯುತ್ತಾರೆ.

ರಾಮಾನುಜನ್ ಸೊನ್ನೆಯಿಂದ ಸೊನ್ನೆಯನ್ನು ಭಾಗಿಸಿದಾಗ ಏನು ಬರುತ್ತದೆ ಎಂದು ಕೇಳಿ ಮಾಸ್ತರರನ್ನೇ ತಳಮಳಗೊಳಿಸಿದ್ದು ಈಗ ಇತಿಹಾಸ. ಪ್ರಶ್ನಿಸುವವರೆಲ್ಲ ಗಣಿತಪಟುಗಳಾದಾರೆಂದಲ್ಲ. ಅಂತಹವರನ್ನು ಕಡೆಗಣಿಸಬಾರದು ಎನ್ನುವುದಂತೂ ಸ್ಪಷ್ಟ. ಇಂದೋ ಗಣಿತ ಶಿಕ್ಷಣಕ್ಕೆ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿಕೊಳ್ಳಬಹುದು. ಬರೆಯಲು ಕಾಗದವೇ ಸಾಕಾಗದೆ ಅದೆಷ್ಟೋ ಗಣಿತಮತಿಗಳು ತಮ್ಮ ಲೆಕ್ಕಾಚಾರಗಳನ್ನು ಅಪೂರ್ಣಗೊಳಿಸಿದ್ದಿದೆ. ಗಣಕಯಂತ್ರದ ಪರದೆ ಮೇಲೆ ಮೂಡುವ ವೈವಿಧ್ಯಮಯ ತ್ರಿ-ಡಿ ಚಿತ್ರಗಳು ಬೋಧನಾ ಪರಿಕರಗಳ ಪಾತ್ರ ಭರಿಸಿವೆ.

ಯಾವುದೇ ವಿಷಯದ ಬೋಧನೆಯಿರಲಿ, ತರಗತಿ ಉಪಾಧ್ಯಾಯ ಕೇಂದ್ರಿತವಾಗದೆ ವಿದ್ಯಾರ್ಥಿ ಕೇಂದ್ರಿತವಾಗುವುದೇ ಸರಿ. ಬೋಧಕರು ವೇದಿಕೆ ಬಿಟ್ಟು ವಿದ್ಯಾರ್ಥಿಗಳ ಒಂದು ಬದಿಗೆ ಬಂದು ಅವರ ಗ್ರಹಿಕೆಗಳನ್ನು ಪರಿಷ್ಕರಿಸುತ್ತ ಕಲಿಕೆ ನಿರ್ದೇಶಿಸಬೇಕು. ತರಗತಿಯೆಂಬ ಜ್ಞಾನದೋಣಿ ಸಾಗಲು ಬೋಧಕರು ಮಾತ್ರ ಅಂಬಿಗರಲ್ಲ, ವಿದ್ಯಾರ್ಥಿಗಳೂ.

ವಾಚಕರ ವಾಣಿ

ಕೊರೊನಾ ಹೆಸರಲ್ಲಿ ರಿಯಾಯಿತಿ ಖೋತಾ?

ರೈಲು ಮತ್ತು ಬಸ್ಸುಗಳಲ್ಲಿ ಹಿರಿಯ ನಾಗರಿಕರಿಗೆ ಪ್ರಯಾಣ ವೆಚ್ಚದಲ್ಲಿ ರಿಯಾಯಿತಿ ನೀಡಲಾಗುತ್ತಿತ್ತು. ಇದು ಬಸ್ಸುಗಳಲ್ಲಿ ಈಗಲೂ ಮುಂದುವರಿದಿದೆ. ಆದರೆ ರೈಲ್ವೆ ಇಲಾಖೆಯು ಕೊರೊನಾ ಹೆಸರಿನಲ್ಲಿ ಈಗ ಈ ಸೌಲಭ್ಯವನ್ನು ಸ್ಥಗಿತಗೊಳಿಸಿದಂತಿದೆ. ಈ ಮೊದಲು ಆನ್‌ಲೈನ್ ಮೂಲಕ ಟಿಕೆಟ್ ಕಾಯ್ದಿರಿಸುವಾಗ 60 ವರ್ಷಕ್ಕಿಂತ ಮೇಲಿನ ವಯಸ್ಸು ದಾಖಲಿಸುತ್ತಿದ್ದಂತೆ ರಿಯಾಯಿತಿ ತೋರಿಸಲಾಗುತ್ತಿತ್ತು. ನಂತರ ಅದರಲ್ಲಿ ಬದಲಾವಣೆ ಮಾಡಿ 'ಹಿರಿಯ ನಾಗರಿಕರ ರಿಯಾಯಿತಿಯನ್ನು ಬಯಸುತ್ತೀರಾ' ಎಂಬ ಪ್ರಶ್ನೆಯನ್ನು ಸೇರಿಸಲಾಯಿತು. 'ಹೌದು' ಎಂದು ನಮೂದಿಸಿದವರಿಗೆ ಮಾತ್ರ ದರದಲ್ಲಿ ರಿಯಾಯಿತಿ ನೀಡಲಾಗುತ್ತಿತ್ತು. ಆದರೆ ಪ್ರಸ್ತುತ ಆನ್‌ಲೈನ್ ಮೂಲಕ ಕಾಯ್ದಿರಿಸಹೊರಟರೆ ರಿಯಾಯಿತಿ ಎಂಬ ಪದವನ್ನೇ ತೆಗೆಯಲಾಗಿದೆ. ರೈಲು ನಿಲ್ದಾಣಕ್ಕೆ ಹೋಗಿ ಕಾಯ್ದಿರಿಸಿದರೆ ಮಾತ್ರ ರಿಯಾಯಿತಿ ಎಂದು ತೋರಿಸುತ್ತದೆ.

ವಾಸ್ತವ ಎಂದರೆ ರೈಲು ನಿಲ್ದಾಣಕ್ಕೆ ಹೋಗಿ ವಿಚಾರಿಸಿದರೂ 'ಕೊರೊನಾ ಕಾರಣಕ್ಕೆ ಹಿರಿಯ ನಾಗರಿಕರ ರಿಯಾಯಿತಿ ತೆಗೆಯಲಾಗಿದೆ, ಹಾಗಾಗಿ ಅವರು ಪೂರ್ಣ ವೆಚ್ಚವನ್ನು ಪಾವತಿಸಿ ಕಾಯ್ದಿರಿಸಬೇಕು' ಎಂಬ ಉತ್ತರ ಬಂದಿದೆ. 'ರಿಯಾಯಿತಿ ತೆಗೆದಿದ್ದೀರಾ' ಎಂದು ಪ್ರಶ್ನಿಸಿದರೆ, 'ಸದ್ಯಕ್ಕೆ ಇಲ್ಲ, ಮುಂದೆ ಬದಲಾಗಬಹುದು' ಎಂಬ ಉತ್ತರ ನೀಡುತ್ತಾರೆ. ಇದೆಲ್ಲದರ ಅರ್ಥವೆಂದರೆ, ಎಲ್ಲ ರೀತಿಯ ಸಬ್ಸಿಡಿ, ರಿಯಾಯಿತಿಗಳನ್ನು ತೆಗೆಯುವುದಾಗಿದೆ. ಈ ಸಂದರ್ಭದಲ್ಲಿ ಜನಪ್ರತಿನಿಧಿಗಳು, ವಿಶೇಷವಾಗಿ ರಾಜ್ಯದ ಲೋಕಸಭಾ ಸದಸ್ಯರು ಹಾಗೂ ರಾಜ್ಯವನ್ನು ಪ್ರತಿನಿಧಿಸುವ ರಾಜ್ಯಸಭಾ ಸದಸ್ಯರು ಧ್ವನಿ ಎತ್ತಿ, ಹಿರಿಯ ನಾಗರಿಕರ ಹಕ್ಕುಗಳನ್ನು ಸಂರಕ್ಷಿಸಲು ಮುಂದಾಗಬೇಕಿದೆ.

ಈ.ಬಸವರಾಜು, ಬೆಂಗಳೂರು

ಕೌಟುಂಬಿಕ ಶಿಕ್ಷಣ: ವೈಜ್ಞಾನಿಕ ಮಾಹಿತಿ ಇರಲಿ

ಮಹಿಳೆಯರ ವಿವಾಹದ ವಯಸ್ಸಿನ ಕನಿಷ್ಠ ಮಿತಿಯನ್ನು ಏರಿಸಲು ಸರ್ಕಾರ ನಿರ್ಧರಿಸಿದೆ. ಈ ಕುರಿತು ವಿಶ್ಲೇಷಿಸಿರುವ ಡಾ. ಕೆ.ಎಸ್. ಪವಿತ್ರ ಅವರು (ಪ್ರ.ವಾ., ಡಿ. 20) ಶಾಲಾ ಕಾಲೇಜುಗಳಲ್ಲಿ ಕೌಟುಂಬಿಕ ಶಿಕ್ಷಣದ ಅಗತ್ಯವನ್ನು ಪ್ರಸ್ತಾಪಿಸಿದ್ದಾರೆ. ಇದು ತುಂಬಾ ಗಮನಾರ್ಹವಾದ ವಿಚಾರ. ಸಾಮಾನ್ಯವಾಗಿ ಪ್ರಾಥಮಿಕ ಹಂತದ ಶಾಲಾ ಪಠ್ಯಗಳಲ್ಲಿ ಕುಟುಂಬ, ವಿಭಕ್ತ ಹಾಗೂ ಅವಿಭಕ್ತ ಕುಟುಂಬಗಳ ಅರ್ಥವನ್ನು ಮಾತ್ರ ತಿಳಿಸಲಾಗುತ್ತದೆ. ಆದರೆ ಮಾಧ್ಯಮಿಕ ಹಂತದ ನಂತರ ಕೌಟುಂಬಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕ ಪಠ್ಯವಸ್ತುವಿಲ್ಲ. ಆರೋಗ್ಯಕರ ಕುಟುಂಬ ಜೀವನಕ್ಕೆ ಬೇಕಾದ ಮೌಲ್ಯಗಳನ್ನು ಮಕ್ಕಳಲ್ಲಿ ಅಳವಡಿಸಲು ಈ ಆಧುನಿಕ ಕಾಲಘಟ್ಟದಲ್ಲಿ ಕೆಲವು ಕುಟುಂಬಗಳಿಗೆ ಸಾಧ್ಯವಾಗುತ್ತಿಲ್ಲ. ಮಕ್ಕಳು ಭವಿಷ್ಯದಲ್ಲಿ ಉತ್ತಮ ರೀತಿಯಲ್ಲಿ ಕುಟುಂಬ ನಿರ್ವಹಣೆ ಮಾಡಲು ಇದು ಕೂಡ ತೊಡಕಾಗುತ್ತದೆ.

ಆದ್ದರಿಂದ ಬದಲಾದ ಸನ್ನಿವೇಶದಲ್ಲಿ ಕೌಟುಂಬಿಕ ಜವಾಬ್ದಾರಿ ಮತ್ತು ಮಹತ್ವಗಳನ್ನು ಪಠ್ಯಗಳಲ್ಲಿ ವೈಜ್ಞಾನಿಕವಾಗಿ ಅಳವಡಿಸುವುದರಿಂದ ಸ್ವಸ್ಥ ಹಾಗೂ ಲಿಂಗ ಸಮಾನತೆಯ ಸಮಾಜವನ್ನು ರೂಪಿಸಲು ಸಾಧ್ಯ.

ಸುವರ್ಣ ಸಿ.ಡಿ., ತರೀಕೆರೆ

ಕಪ್ಪೆ ಹಬ್ಬ: ಸ್ಥಳೀಯರ ಅವಗಣನೆ ಸಲ್ಲ

ಕಳೆದ ವಾರಾಂತ್ಯದಲ್ಲಿ ಅರಣ್ಯ ಇಲಾಖೆಯ ವತಿಯಿಂದ ಸಾಗರ ಸನಿಹದ 'ಮುಪ್ಪಾನೆ ಪ್ರಕೃತಿ ಶಿಬಿರ'ದಲ್ಲಿ ದೇಶದ ಪ್ರಥಮ 'ಕಪ್ಪೆಹಬ್ಬ'ವನ್ನು ಅದ್ದೂರಿಯಾಗಿ ಆಚರಿಸಲಾಯಿತು ಎಂದು ವರದಿಯಾಗಿದೆ (ಪ್ರ.ವಾ., ಡಿ. 20). ಅಚ್ಚರಿಯೆಂದರೆ, ಈ ಕಾರ್ಯಕ್ರಮಗಳಿಗೆ ಕೇವಲ ಅಂತರ್ಜಾಲದಲ್ಲಿ ಪ್ರವೇಶ ಪಡೆದವರಿಗಷ್ಟೇ ಅವಕಾಶ ನೀಡಲಾಗಿತ್ತು! ಸ್ಥಳೀಯರು, ಪರಿಸರಪ್ರಿಯರು ಭಾಗವಹಿಸುವುದಕ್ಕೆ ನಿರ್ಬಂಧವಿತ್ತು. ಸ್ಥಳೀಯರಿಗೇ ಅವಕಾಶ ಇಲ್ಲವಾದರೆ ಅದನ್ನು ಬೆಂಗಳೂರಿನ ಕಾಂಕ್ರೀಟ್ ಕಾಡಿನಲ್ಲಿಯೇ ಮಾಡಬಹುದಿತ್ತು. ಅಷ್ಟು ದೂರದ ಸಾಗರದಲ್ಲಿ ಆಯೋಜಿಸುವ ಅವಶ್ಯಕತೆಯೇ ಇರಲಿಲ್ಲ. ಸ್ಥಳೀಯರನ್ನು ಅವಗಣಿಸುವುದರಿಂದಲೇ ಅರಣ್ಯ ಇಲಾಖೆಯ ಯೋಜನೆಗಳು ಸಂಪೂರ್ಣ ಯಶಸ್ಸು ಪಡೆಯುವುದಿಲ್ಲ.

ಜನಸಾಮಾನ್ಯರ ಸಹಭಾಗಿತ್ವ ಇಲ್ಲದ, ಪ್ರಾಯೋಗಿಕವಲ್ಲದ ಯೋಜನೆಗಳು ಅನಗತ್ಯ ಖರ್ಚುವೆಚ್ಚಗಳಿಗೆ ದಾರಿಯಾಗಬಲ್ಲವೇ ವಿನಾ ನಿಗದಿತ ಗುರಿಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಮುಂದಿನ ದಿನಗಳಲ್ಲಾದರೂ ಸಂಬಂಧಿತ ಅಧಿಕಾರಿಗಳು ಇಂತಹ ಕಾರ್ಯಕ್ರಮಗಳನ್ನು ರೂಪಿಸುವ ಮುನ್ನ ಸಮುದಾಯವನ್ನೂ ಆದ್ಯತೆಯ ಮೇಲೆ ಪರಿಗಣಿಸುವ ದಿಸೆಯಲ್ಲಿ ಯೋಚಿಸಲಿ.

ಡಾ. ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಶಾಂತಿ ಕದಡುವ ಕಿಡಿಗೇಡಿಗಳಿಗೆ ತಕ್ಕ ಶಿಕ್ಷೆಯಾಗಲಿ

ಮಹಾಪುರುಷರಿಗೆ ಅವಮಾನ ಮಾಡುವುದು ಎಂತಹ ಸಂಸ್ಕೃತಿ? ಕನ್ನಡದ ಧ್ವಜ ಸುಡುವುದು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಪ್ರತಿಮೆ ವಿರೂಪ, ಕನ್ನಡ ನಾಡಿನಲ್ಲಿ ಮಹಾರಾಷ್ಟ್ರಕ್ಕೆ ಜೈಕಾರ ಕೂಗುವುದು... ಇಂತಹ ಕುಚೇಷ್ಟೆಗಳಿಗೆ ಕೊನೆ ಇಲ್ಲವೇ? ಈ ನೆಲದ ಅನ್ನ ತಿಂದು, ಇಲ್ಲಿನ ಯೋಜನೆಗಳ ಫಲಾನುಭವಿಗಳಾಗಿದ್ದೂ ಭಾಷೆಯ ಹೆಸರಿನಲ್ಲಿ ಪದೇ ಪದೇ ಕ್ಯಾತೆ ತೆಗೆಯುವ ಮಹಾರಾಷ್ಟ್ರ ಏಕೀಕರಣ ಸಮಿತಿಯ (ಎಂಇಎಸ್) ಮುಖಂಡರ ಉಪಟಳಕ್ಕೆ ಶಾಶ್ವತವಾಗಿ ತಡೆ ಒಡ್ಡಬೇಕಾಗಿದೆ. ಮರಾಠಿ ಭಾಷಿಕರು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಇದ್ದಾರೆ. ಅವರು ಸ್ಥಳೀಯರೊಂದಿಗೆ ಅನ್ಯೋನ್ಯವಾಗಿ ಬೆರೆತು ಬಾಳುತ್ತಿದ್ದಾರೆ. ಆದರೆ ಬೆಳಗಾವಿ ಭಾಗದಲ್ಲಿ ಕೆಲವು ಮುಖಂಡರು ಭಾಷೆಯ ಹೆಸರಿನಲ್ಲಿ ಮುಗ್ಧರನ್ನು ದಾರಿ ತಪ್ಪಿಸುತ್ತಿದ್ದಾರೆ. ಇದು ಖಂಡನೀಯ.

ಇಂತಹ ಸಂದರ್ಭಗಳಲ್ಲಿ ಭಾಷಾಪ್ರೇಮ ಮೆರೆದು ಬಳಿಕ ಅಷ್ಟೇ ಬೇಗ ಮರೆತುಬಿಡುವ ನಮ್ಮ ಜನಪ್ರತಿನಿಧಿಗಳು ಈ ಬಗೆಯ ಉಪಟಳವನ್ನು ಗಂಭೀರವಾಗಿ ಪರಿಗಣಿಸಬೇಕು. ಶಾಂತಿ ಕದಡುವಂತಹ ಪ್ರಯತ್ನ ಮಾಡುವ ಭಾಷಾಂಧರಿಗೆ ತಕ್ಕ ಶಿಕ್ಷೆ ಆಗಬೇಕು. ಸರ್ಕಾರ ಈ ವಿಚಾರದಲ್ಲಿ ದೃಢ ನಿರ್ಧಾರ ಕೈಗೊಳ್ಳಬೇಕು.

ಗೌಡಪ್ಪಗೌಡ್ರು, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮತಚೀಟಿಗೆ ಆಧಾರ್ ಜೋಡಣೆ
ಕಡ್ಡಾಯವೂ ಅಲ್ಲ ಐಚ್ಛಿಕವೂ ಅಲ್ಲ

ಜನರ ದತ್ತಾಂಶ ರಕ್ಷಣೆ ಮತ್ತು ಖಾಸಗಿತನ ರಕ್ಷಣೆಗಾಗಿ ಭಾರತದಲ್ಲಿ ಕಾನೂನುಗಳು ಇಲ್ಲ. ಹಾಗಾಗಿ, ಮತದಾರರ ಗುರುತಿನ ಚೀಟಿಗೆ ಆಧಾರ್ ಸಂಖ್ಯೆಯನ್ನು ಜೋಡಿಸುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಮತದಾರರ ಗುರುತಿನ ಚೀಟಿ ಹೊಂದಿರುವವರ ದತ್ತಾಂಶ ಭಾರತದ ಚುನಾವಣಾ ಆಯೋಗದ ಸುಪರ್ದಿಯಲ್ಲಿ ಇರುತ್ತದೆ. ಆಧಾರ್ ಸಂಖ್ಯೆಗೆ ಸಂಬಂಧಿಸಿದ ದತ್ತಾಂಶ ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರದ ವಶದಲ್ಲಿರುತ್ತದೆ. ಈ ಎರಡೂ ಸಂಸ್ಥೆಗಳ ನಡುವೆ ದತ್ತಾಂಶ ವಿನಿಮಯಕ್ಕೆ ಅವಕಾಶ ಕಲ್ಪಿಸುವ ಕಾಯ್ದೆಗಳು ಇಲ್ಲ. ಹೀಗೆ ಹಂಚಿಕೆ ಆಗುವ ದತ್ತಾಂಶದ ರಕ್ಷಣೆಗೆ ಯಾವ ವ್ಯವಸ್ಥೆ ಇದೆ ಎಂಬುದೂ ಸ್ಪಷ್ಟವಿಲ್ಲ ಎಂಬುದು ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಣೆಯ ವಿರೋಧಿಗಳ ವಾದವಾಗಿದೆ.

ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿ 2019ರಲ್ಲಿ 7.8 ಕೋಟಿ ಜನರ ಆಧಾರ್ ದತ್ತಾಂಶಗಳು ಸೋರಿಕೆ ಆಗಿದ್ದನ್ನು ಈಗ ನೆನಪಿಸಿಕೊಳ್ಳಬಹುದು. ತೆಲುಗು ದೇಶಂ ಪಕ್ಷದ ಪರವಾಗಿ ಕೆಲಸ ಮಾಡುತ್ತಿದ್ದ ಸಂಸ್ಥೆಯೊಂದರ ಬಳಿಯಲ್ಲಿ ಈ ದತ್ತಾಂಶ ಇತ್ತು ಎಂದು ವರದಿಯಾಗಿತ್ತು. ಈ ಎಲ್ಲ ಆಧಾರ್ ಸಂಖ್ಯೆಗಳನ್ನು ಮತದಾರರ ಗುರುತಿನ ಚೀಟಿಗೆ ಜೋಡಣೆ (ಮತದಾರರ ಪಟ್ಟಿ ಶುದ್ಧೀಕರಣ ಮತ್ತು ದೃಢೀಕರಣ ಕಾರ್ಯಕ್ರಮ) ಮಾಡಲಾಗಿತ್ತು. ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಣೆಯಾದರೆ, ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಅದನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಆಗುತ್ತದೆ ಎಂಬುದರ ಸ್ಪಷ್ಟ ಸೂಚನೆಯನ್ನು ಆಂಧ್ರ ಪ್ರದೇಶದ ಪ್ರಕರಣವು ಕೊಟ್ಟಿದೆ. ಮತದಾರರ ಹಿನ್ನೆಲೆಯನ್ನು ಗುರುತಿಸಿ, ಅವರನ್ನೇ ಗುರಿಯಾಗಿಸಿ ವಿಶಿಷ್ಟವಾದ ರೀತಿಯಲ್ಲಿ ಚುನಾವಣಾ ಪ್ರಚಾರ ನಡೆಸಲು ಇದರಿಂದ ಸಾಧ್ಯವಾಗುತ್ತದೆ.

ಮತದಾರರ ಚೀಟಿಗೆ ಆಧಾರ್ ಸಂಖ್ಯೆ ಜೋಡಣೆಯು ಐಚ್ಛಿಕ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಮಸೂದೆಯಲ್ಲಿ ಈ ಉಲ್ಲೇಖ ಇಲ್ಲ. ಅಲ್ಲದೆ, ಐಚ್ಛಿಕ ಎಂದರೂ ಅದಕ್ಕೆ ಅಂತಹ ಮಹತ್ವವೇನೂ ಇಲ್ಲ. ಏಕೆಂದರೆ, ಆಧಾರ್ ಯೋಜನೆಯು ಜಾರಿಗೆ ಬಂದ ಆರಂಭದಲ್ಲಿ ಆಧಾರ್ ನೋಂದಣಿ ಮಾಡಿಸುವುದೇ ಐಚ್ಛಿಕವಾಗಿತ್ತು. ಆಧಾರ್ ಸಂಖ್ಯೆ ನೋಂದಣಿ ಕಡ್ಡಾಯ ಮಾಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಕೂಡ ಹೇಳಿತ್ತು. ಆದರೆ, ಈಗ ಹಲವು ಸೇವೆಗಳನ್ನು ಪಡೆದುಕೊಳ್ಳಲು ಆಧಾರ್ ಸಂಖ್ಯೆ ಜೋಡಣೆಯನ್ನು ಕೇಂದ್ರ ಸರ್ಕಾರವು ಕಡ್ಡಾಯ ಮಾಡಿದೆ.

‘ಮತದಾರರ ಚೀಟಿಗೆ ಆಧಾರ್ ಜೋಡಣೆ ಮಾಡುವುದರಿಂದ ವ್ಯಕ್ತಿಯ ಖಾಸಗಿತನದ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆ. ರಹಸ್ಯ ಮತದಾನದ ಪಾವಿತ್ರ್ಯವೇ ಕೆಡುತ್ತದೆ. ಸಹಾಯಧನ ನೀಡುವುದಕ್ಕಾಗಿ ಮಾತ್ರ ಆಧಾರ್ ಬಳಕೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ 2015ರಲ್ಲಿ ನೀಡಿದ ತೀರ್ಪಿನ ಉಲ್ಲಂಘನೆಯಾಗುತ್ತದೆ’ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಟ್ವೀಟ್ ಮಾಡಿದ್ದಾರೆ.

‘ಸರ್ಕಾರದ ನ್ಯಾಯಬದ್ಧ ಗುರಿ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ನೆಪವಾಗಿಸಿಕೊಂಡು ಜನರ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಖಾಸಗಿತನವನ್ನು ನಾಶ ಮಾಡಲು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ತೋರುತ್ತಿರುವ ಆತುರವು ನಾಚಿಕೆಗೇಡಿನದ್ದು. ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿ ಮತದಾರರ ಚೀಟಿಗೆ ಆಧಾರ್ ಜೋಡಣೆಯಿಂದ ಆಗಿದ್ದ ಎಡವಟ್ಟಿನಿಂದ ಸರ್ಕಾರ ಯಾವ ಪಾಠವನ್ನೂ ಕಲಿತಿಲ್ಲ’ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪನಾಯಕ ಗೌರವ್ ಗೊಗೊಯಿ ಟ್ವೀಟ್ ಮಾಡಿದ್ದಾರೆ.



ಸಂಯೋಜನೆಗೆ ತಡೆ ನೀಡಿದ್ದ ‘ಸುಪ್ರೀಂ’

ಆಧಾರ್ ಅನ್ನು ಯಾವುದೇ ಕಾರಣಕ್ಕೂ ಕಡ್ಡಾಯ ಮಾಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ 2013ರಲ್ಲಿ ಹೇಳಿತ್ತು. ಮುಂದಿನ ಹಲವು ಆದೇಶಗಳಲ್ಲಿ ಇದನ್ನು ಸ್ಪಷ್ಟಪಡಿಸುತ್ತಾ ಬಂದಿದೆ. ಆದರೆ 2015ರ ಫೆಬ್ರುವರಿಯಲ್ಲಿ ಎಚ್.ಎಸ್. ಬ್ರಹ್ಮ ಅವರು ಚುನಾವಣಾ ಆಯೋಗದ ಆಯುಕ್ತರಾಗಿದ್ದಾಗ, ಆಧಾರ್ ಕಾರ್ಡ್ ಹಾಗೂ ಮತದಾರರ ಗುರುತಿನ ಪತ್ರಗಳನ್ನು ಜೋಡಿಸುವ ಯೋಜನೆಗೆ ಚಾಲನೆ ನೀಡಿದ್ದರು. ಮತದಾರರ ಪಟ್ಟಿ ಶುದ್ಧೀಕರಣ ಮತ್ತು ದೃಢೀಕರಣ ಕಾರ್ಯಕ್ರಮದ (ಎನ್‌ಇಆರ್‌ಪಿಎಪಿ) ಅಡಿಯಲ್ಲಿ ಇದನ್ನು ಕಡ್ಡಾಯ ಮಾಡಿ ಚುನಾವಣಾ ಆಯೋಗ ನಿಯಮಗಳನ್ನು ರೂಪಿಸಿತ್ತು.

ಆದರೆ ಈ ಕಾರ್ಯಕ್ರಮಕ್ಕೆ 2015ರ ಆಗಸ್ಟ್‌ನಲ್ಲಿ ತಡೆ ನೀಡಿದ್ದ ಸುಪ್ರೀಂ ಕೋರ್ಟ್, ಎಲ್‌ಪಿಜಿ, ಸೀಮೆಎಣ್ಣೆ ಪೂರೈಕೆ ಮೊದಲಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸೌಲಭ್ಯಗಳನ್ನು ಪಡೆಯುವುದನ್ನು ಬಿಟ್ಟು, ಅನ್ಯ ಉದ್ದೇಶಕ್ಕೆ ಆಧಾರ್ ಅನ್ನು ಜೋಡಣೆ ಮಾಡುವುದನ್ನು ನಿರ್ಬಂಧಿಸಿತ್ತು. ಸರ್ಕಾರದ ಬೇರೆ ಬೇರೆ ಯೋಜನೆಗಳಿಗೆ ಇದನ್ನು ವಿಸ್ತರಣೆ ಮಾಡಬಾರದು ಎಂದು ಕೇಂದ್ರ ಸರ್ಕಾರಕ್ಕೆ ಕೋರ್ಟ್ ಮಿತಿ ಹೇರಿತ್ತು. ಆದರೆ ಈ ಹೊತ್ತಿಗಾಗಲೇ ದೇಶದ 38 ಕೋಟಿ ಜನರ ಆಧಾರ್ ಹಾಗೂ ಮತದಾರರ ಗುರುತಿನ ಚೀಟಿಗಳನ್ನು ಸಂಯೋಜಿಸಲಾಗಿತ್ತು.

2017ರ ಜುಲೈನಲ್ಲಿ ಮತ್ತೆ ಸುಪ್ರೀಂ ಕೋರ್ಟ್ ಮೊರೆ ಹೋದ ಆಯೋಗ, ಆಧಾರ್ ಜೊತೆ ಮತದಾರರ ಗುರುತಿನ ಚೀಟಿಗಳನ್ನು ಸಂಯೋಜನೆ ಮಾಡಲು ಅನುಮತಿ ಕೇಳಿತು. ಆದರೆ ಈ ಬಾರಿ ಈ ಪ್ರಕ್ರಿಯೆಯನ್ನು ಕಡ್ಡಾಯ ಮಾಡುವುದಿಲ್ಲ, ಬದಲಾಗಿ ಐಚ್ಛಿಕವಾಗಿರಲಿದೆ ಎಂದು ತಿಳಿಸಿತ್ತು. ಆಧಾರ್ ಸಂಖ್ಯೆ ಜೊತೆ ಮತದಾರರ ಗುರುತಿನ ಚೀಟಿಯನ್ನು ಸಂಯೋಜಿಸಿಲ್ಲ ಎಂಬ ಕಾರಣಕ್ಕೆ, ಮತದಾರರಿಗೆ ಅವರ ಮತದಾನದ ಹಕ್ಕು ಚಲಾಯಿಸಲು ಅಡ್ಡಿಪಡಿಸುವುದಿಲ್ಲ ಎಂದೂ ಭರವಸೆ ನೀಡಿತ್ತು. 2019ರಲ್ಲಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿದ್ದ ಆಯೋಗವು, ಚುನಾವಣಾ ಕಾಯ್ದೆಗೆ ತಿದ್ದುಪಡಿ ತರುವಂತೆ ಕೇಳಿಕೊಂಡಿತ್ತು.

ಮಸೂದೆಯಲ್ಲಿ ಏನಿದೆ?

ಮತದಾರರ ಗುರುತಿನ ಚೀಟಿಗೆ ಆಧಾರ್ ಸಂಖ್ಯೆಯನ್ನು ಜೋಡಿಸಲು ಅನುವು ಮಾಡಿಕೊಡುವ ಮಸೂದೆಯನ್ನು ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದುಕೊಂಡಿದೆ.

‘ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಿಸುವುದು ಕಡ್ಡಾಯವಲ್ಲ. ಅದು ಸ್ವಯಂ-ಪ್ರೇರಿತವಾದುದು’ ಎಂದು ಸರ್ಕಾರವು ಹೇಳಿದೆ. ಆದರೆ ಸರ್ಕಾರವು ಈಗ ಲೋಕಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದುಕೊಂಡಿರುವ ‘ಚುನಾವಣಾ ಕಾನೂನುಗಳು (ತಿದ್ದುಪಡಿ) ಮಸೂದೆ-2021’ರಲ್ಲಿರುವ ತಿದ್ದುಪಡಿಗಳು ಇದನ್ನು ಸ್ಪಷ್ಟಪಡಿಸುವುದಿಲ್ಲ.

‘ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಿಸಬೇಕು’ ಎಂದು ಈ ಮಸೂದೆಯ ಯಾವ ಭಾಗದಲ್ಲಿಯೂ ಹೇಳಿಲ್ಲ. ಮಸೂದೆಯ ಯಾವ ಭಾಗದಲ್ಲಿಯೂ ‘ಕಡ್ಡಾಯ’ ಮತ್ತು ‘ಸ್ವಯಂಪ್ರೇರಿತ’ ಎಂಬ ಪದಗಳನ್ನು ಉಲ್ಲೇಖಿಸಿಲ್ಲ. ಆದರೆ, ಸಂಬಂಧಿತ ಅಧಿಕಾರಿಗಳು ಕೇಳಿದಾಗ ವ್ಯಕ್ತಿಯು ತನ್ನ ಆಧಾರ್ ಚೀಟಿಯನ್ನು ತೋರಿಸಬೇಕು ಎಂದು ಹೇಳಲಾಗಿದೆ. ಸರ್ಕಾರವು ತನ್ನ ಗೆಜೆಟ್‌ನಲ್ಲಿ ಸೂಚಿಸಿದ ಸ್ವರೂಪದಲ್ಲಿ ಮತದಾರನು ತನ್ನ ಆಧಾರ್ ಸಂಖ್ಯೆಯ ವಿವರವನ್ನು ಸಂಬಂಧಿತ ಪ್ರಾಧಿಕಾರಕ್ಕೆ ಸಲ್ಲಿಸಬೇಕು ಎಂದು ಮಸೂದೆಯಲ್ಲಿ ವಿವರಿಸಲಾಗಿದೆ.

ಆಧಾರ್ ಸಂಖ್ಯೆ ಸಲ್ಲಿಸದ ವ್ಯಕ್ತಿಯ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಲು ನಿರಾಕರಿಸುವಂತಿಲ್ಲ ಮತ್ತು ಮತದಾರರ ಪಟ್ಟಿಯಿಂದ ಅಂತಹ ವ್ಯಕ್ತಿಗಳ ಹೆಸರನ್ನು ತೆಗೆದುಹಾಕುವಂತಿಲ್ಲ ಎಂದು ಮಸೂದೆ ಹೇಳುತ್ತದೆ. ಆದರೆ ಸರ್ಕಾರವು ಸೂಚಿಸಿದ ಇತರ ಗುರುತಿನ ಚೀಟಿಗಳನ್ನು ಸಲ್ಲಿಸಿದಾಗ ಮಾತ್ರ ಈ ವಿನಾಯಿತಿ ಅನ್ವಯವಾಗುತ್ತದೆ.

ಅಧಿಕಾರಿಗಳು ಕೇಳಿದಾಗ ಆಧಾರ್ ತೋರಿಸಬೇಕು

ಮತದಾರರ ಗುರುತಿನ ಚೀಟಿಗೆ ಆಧಾರ್ ಸಂಖ್ಯೆಯನ್ನು ಜೋಡಿಸಲು ಅವಕಾಶ ಮಾಡಿಕೊಡುವ ಉದ್ದೇಶದಿಂದ ಪ್ರಜಾಪ್ರಾತಿನಿಧ್ಯ ಕಾಯ್ದೆ-1950ಕ್ಕೆ ತಿದ್ದುಪಡಿ ತರಲು ಮಸೂದೆ ಮಂಡಿಸಲಾಗಿದೆ. ಈ ಕಾಯ್ದೆಯ 23ನೇ ಸೆಕ್ಷನ್‌ಗೆ ತಿದ್ದುಪಡಿಗಳನ್ನು ಈ ಮಸೂದೆಯಲ್ಲಿ ಸೂಚಿಸಲಾಗಿದೆ. 4, 5 ಮತ್ತು 6ನೇ ಉಪ ಸೆಕ್ಷನ್‌ಗಳು ಸೇರಿಸಲಾಗಿದೆ.

‘ಯಾವುದೇ ವ್ಯಕ್ತಿಯ ಗುರುತನ್ನು ದೃಢಪಡಿಸಿಕೊಳ್ಳಲು ಮತದಾರರ ಪಟ್ಟಿ ನೋಂದಣಿ ಅಧಿಕಾರಿಯು ಆಧಾರ್ ಮಾಹಿತಿಯನ್ನು ಕೇಳಬಹುದು. ಈಗಾಗಲೇ ಮತದಾರರ ಪಟ್ಟಿಯಲ್ಲಿರುವ ವ್ಯಕ್ತಿಯ ಆಧಾರ್ ಸಂಖ್ಯೆಯ ವಿವರವನ್ನೂ ಅಧಿಕಾರಿಯು ಕೇಳಬಹುದು. ಒಂದೇ ಕ್ಷೇತ್ರದಲ್ಲಿ ಎರಡು ಬಾರಿ ಮತ್ತು ಎರಡು ಬೇರೆ-ಬೇರೆ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ನೋಂದಣಿಯಾಗಿರುವ ವ್ಯಕ್ತಿಯ ಗುರುತನ್ನು ದೃಢಪಡಿಸಿಕೊಳ್ಳಲು ಅಧಿಕಾರಿಯು, ಆ ವ್ಯಕ್ತಿಯ ಆಧಾರ್ ಸಂಖ್ಯೆಯ ವಿವರವನ್ನು ಕೇಳಬಹುದು. ಆ ವ್ಯಕ್ತಿಯು ಆಧಾರ್ ವಿವರವನ್ನು ಸಲ್ಲಿಸಲೇಬೇಕಾಗುತ್ತದೆ’ ಎಂದು ಹೊಸದಾಗಿ ಸೇರಿಸಲಾಗಿರುವ 4ನೇ ಉಪ ಸೆಕ್ಷನ್ ಹೇಳುತ್ತದೆ.

‘ಮತದಾರರ ಪಟ್ಟಿಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಸಂಬಂಧಿತ ಪ್ರಾಧಿಕಾರಕ್ಕೆ ತನ್ನ ಆಧಾರ್ ವಿವರವನ್ನು, ಕೇಂದ್ರ ಸರ್ಕಾರವು ತನ್ನ ಗೆಜೆಟ್‌ನಲ್ಲಿ ಸೂಚಿಸಿದ ಸ್ವರೂಪದಲ್ಲಿ ಸಲ್ಲಿಸಬೇಕಾಗಬಹುದು’ ಎಂದು ಹೊಸದಾಗಿ ಸೇರಿಸಲಾಗಿರುವ 5ನೇ ಉಪ ಸೆಕ್ಷನ್ ಹೇಳುತ್ತದೆ.

‘ಆಧಾರ್ ಸಂಖ್ಯೆಯನ್ನು ಸಲ್ಲಿಸದೇ ಇರುವ ವ್ಯಕ್ತಿಯ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಲು ನಿರಾಕರಿಸುವಂತಿಲ್ಲ. ಆಧಾರ್ ಸಂಖ್ಯೆಯನ್ನು ಸಲ್ಲಿಸದೇ ಇರುವ ವ್ಯಕ್ತಿಯ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕುವಂತಿಲ್ಲ. ಈ ಕಾಯ್ದೆಯಲ್ಲಿ ಸೂಚಿಸಿರುವಂತೆ ಪರ್ಯಾಯ ಗುರುತಿನ ದಾಖಲೆಯನ್ನು ಸಲ್ಲಿಸಿದಾಗ ಮಾತ್ರ ಇದು ಅನ್ವಯವಾಗುತ್ತದೆ’ ಎಂದು ಹೊಸದಾಗಿ ಸೇರಿಸಲಾದ 6ನೇ ಉಪ ಸೆಕ್ಷನ್ ಹೇಳುತ್ತದೆ.

ಮತದಾರರ ಪಟ್ಟಿಯಲ್ಲಿ ಹೆಸರು ಕಣ್ಮರೆ



ಆಧಾರ್ ಜೊತೆ ಮತದಾರರ ಗುರುತಿನ ಚೀಟಿಗಳನ್ನು ಸಂಯೋಜಿಸುವ ಪ್ರಸ್ತಾವದ ಬಗ್ಗೆ ಆತಂಕಪಡುವ ಅಂಶಗಳೂ ಇವೆ. 2015ರಲ್ಲಿ ಸುಮಾರು 38 ಕೋಟಿ ಮತದಾರರ ಗುರುತಿನ ಚೀಟಿಗಳನ್ನು ಆಧಾರ್ ಜೊತೆ ಸಂಯೋಜಿಸಲಾಗಿತ್ತು. ಇದರ ಪರಿಣಾಮವು 2018ರಲ್ಲಿ ನಡೆದ ತೆಲಂಗಾಣ ಮತ್ತು ಆಂಧ್ರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಂಡುಬಂದಿತ್ತು.

ಈ ಎರಡೂ ರಾಜ್ಯಗಳ ಸುಮಾರು 55 ಲಕ್ಷ ಮತದಾರರ ಹೆಸರುಗಳು ಮತದಾರರ ಪಟ್ಟಿಯಿಂದ ನಾಪತ್ತೆಯಾಗಿದ್ದವು ಎಂದು ಆರೋಪಿಸಲಾಗಿದೆ. ತೆಲಂಗಾಣದಲ್ಲಿ 27 ಲಕ್ಷ ಮತದಾರರು, ಆಂಧ್ರ ಪ್ರದೇಶದಲ್ಲಿ 20 ಲಕ್ಷ ಮತದಾರರ ಹೆಸರು ನಾಪತ್ತೆಯಾಗಿವೆ ಎಂದು ಪ್ರತಿಪಕ್ಷಗಳು ಆರೋಪಿಸಿದ್ದವು. ಈ ಆರೋಪಗಳಿಗೆ ಚುನಾವಣಾ ಆಯೋಗ ಸ್ಪಷ್ಟನೆ ನೀಡಿತ್ತು. ‘2014ರಲ್ಲಿ ಆಂಧ್ರ ಪ್ರದೇಶ ವಿಭಜನೆಯಾಯಿತು. ಆಗ ಆಂಧ್ರದ ಮತದಾರರು ತೆಲಂಗಾಣಕ್ಕೂ, ತೆಲಂಗಾಣದ ಮತದಾರರು ಆಂಧ್ರಕ್ಕೂ ವಲಸೆ ಹೋದರು. ಎರಡೆರಡು ಕಡೆ ಹೆಸರಿದ್ದ ಮತದಾರರ ಹೆಸರುಗಳನ್ನು ತೆಗೆಯಲಾಗಿದೆ’ ಎಂಬ ಕಾರಣಗಳನ್ನು ನೀಡಿತ್ತು.

ಮತದಾರರ ಪಟ್ಟಿ ಶುದ್ಧೀಕರಣ

ಮತದಾರರ ಪಟ್ಟಿಯಲ್ಲಿ ಒಬ್ಬನೇ ವ್ಯಕ್ತಿಯ ಹೆಸರು ಒಂದಕ್ಕಿಂತ ಹೆಚ್ಚುಬಾರಿ ನೋಂದಣಿಯಾಗುವುದನ್ನು ತಪ್ಪಿಸಲು ಮತ್ತು ಈಗಾಗಲೇ ಒಂದಕ್ಕಿಂತ ಹೆಚ್ಚುಬಾರಿ ನೋಂದಣಿಯಾಗಿರುವ ವ್ಯಕ್ತಿಯ ಹೆಚ್ಚುವರಿ ನೋಂದಣಿಯನ್ನು ತೆಗೆದುಹಾಕಲು ಚುನಾವಣಾ ಆಯೋಗವು 2015ರಲ್ಲಿ ವಿಶೇಷ ಅಭಿಯಾನವನ್ನು ಆರಂಭಿಸಿತ್ತು. ಈ ಅಭಿಯಾನಕ್ಕೆ, ‘ಮತದಾರರ ಪಟ್ಟಿ ಶುದ್ಧೀಕರಣ ಮತ್ತು ದೃಢೀಕರಣ ಕಾರ್ಯಕ್ರಮ’ ಎಂದು ನಾಮಕರಣ ಮಾಡಲಾಗಿತ್ತು.

ಈ ಕಾರ್ಯವನ್ನು ಅನುಷ್ಠಾನಕ್ಕೆ ತರಲು ಆಧಾರ್ ದತ್ತಾಂಶವನ್ನು ಬಳಸಿಕೊಳ್ಳಲು ಆಯೋಗವು ಸೂಚಿಸಿತ್ತು. ‘ಆಧಾರ್ ಸಂಖ್ಯೆ ಹೊಂದಿರುವ ಮತದಾರರನ್ನು ಗುರುತಿಸುವುದು ಈ ಅಭಿಯಾನದ ಪ್ರಧಾನ ಗುರಿ’ ಎಂದು ಚುನಾವಣಾ ಆಯೋಗ ಹೊರಡಿಸಿದ್ದ ಸುತ್ತೋಲೆಯಲ್ಲಿ ವಿವರಿಸಲಾಗಿತ್ತು.

‘ಮತದಾರರ ಗುರುತಿನ ಚೀಟಿ ಸಂಖ್ಯೆಗೆ (ಎಪಿಕ್ ಸಂಖ್ಯೆ) ಆಧಾರ್ ಸಂಖ್ಯೆಯನ್ನು ಜೋಡಿಸಬೇಕು. ಆಧಾರ್ ಸಂಖ್ಯೆ ಜೋಡಿಸಿದ ಮತ್ತು ಆಧಾರ್ ಸಂಖ್ಯೆ ಜೋಡಿಸದೇ ಇರುವ ಮತದಾರರ ಗುರುತಿನ ಚೀಟಿಗಳನ್ನು ಪ್ರತ್ಯೇಕಿಸಬೇಕು’ ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು.

ಆದರೆ ಚುನಾವಣಾ ಆಯೋಗದ ಈ ಅಭಿಯಾನಕ್ಕೆ 2016ಲ್ಲಿ ಸುಪ್ರೀಂ ಕೋರ್ಟ್ ತಡೆ ನೀಡಿತ್ತು. ಆನಂತರ 2017ರಲ್ಲಿ ಆಧಾರ್ ಜೋಡಣೆಯನ್ನು ಕಡ್ಡಾಯ ಮಾಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು.

ಹೀಗಾಗಿ ಚುನಾವಣಾ ಆಯೋಗವು ತನ್ನ ಈ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡಿತು. ಈ ಕಾರ್ಯಕ್ರಮದ ಅಡಿ ಈಗ ಮತದಾರರ ಗುರುತಿನ ಚೀಟಿಯನ್ನು ಪರಿಶೀಲಿಸಿ, ಬಾರ್‌ಕೋಡ್ ಹೊಂದಿರುವ ಹೊಸ ಚೀಟಿಯನ್ನು ನೀಡಲಾಗುತ್ತಿದೆ. ಆದರೆ ಈ ಪರಿಶೀಲನೆ ವೇಳೆ ಆಧಾರ್ ಸಂಖ್ಯೆಯನ್ನೇ ಪ್ರಮುಖ ದಾಖಲೆಯಾಗಿ ಬಳಸಲಾಗುತ್ತಿದೆ.

ವರದಿ: ಹಮೀದ್ ಕೆ., ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಆಧಾರ: ಚುನಾವಣಾ ಕಾನೂನುಗಳ (ತಿದ್ದುಪಡಿ) ಮಸೂದೆ-2021, ಲೋಕಸಭೆ, ಮತದಾರರ ಪಟ್ಟಿ ಶುದ್ಧೀಕರಣ ಮತ್ತು ದೃಢೀಕರಣ ಕಾರ್ಯಕ್ರಮದ ಅಧಿಸೂಚನೆ, ಪಿಟಿಐ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 2

ಶಿವಕಥಾಮೃತದಿಂದ ಸದ್ಗತಿ

ಶಿವಪುರಾಣ ಎಷ್ಟು ಪವಿತ್ರವಾದುದು ಎಂದರೆ ಇದನ್ನ ಓದುವುದರಿಂದ ಅಥವಾ ಕೇಳುವುದರಿಂದ ಸಿಗುವಷ್ಟು ಪುಣ್ಯ ಬೇರೆ ಯಾವುದರಲ್ಲೂ ಸಿಗುವುದಿಲ್ಲ. ಶಿವಪುರಾಣ ಕೇಳುವುದರಿಂದ ಏಳು ತೀರ್ಥಕ್ಷೇತ್ರಗಳಿಗೆ ಹೋಗಿ ಬರುವುದಕ್ಕಿಂತಲೂ ಹೆಚ್ಚಿನ ಪುಣ್ಯ ಸಿಗುವುದು. ಅಮೃತವನ್ನ ಕುಡಿದರೆ, ಕುಡಿದವರೊಬ್ಬರೆ ಪಾವನರಾಗುತ್ತಾರೆ. ಆದರೆ ಶಿವಪುರಾಣವನ್ನ ಕೇಳಿದರೆ, ಅವರೊಬ್ಬರಿಗೆ ಮಾತ್ರವಲ್ಲ, ಅವರ ಇಡೀ ಪರಿವಾರಕ್ಕೆ ಒಳ್ಳೆಯದಾಗುವುದು. ಇಂಥ ಶಿವಪುರಾಣವನ್ನ ವ್ಯಾಸರು ಸಾಮಾನ್ಯ ಜನರಿಗೂ ಅರ್ಥ ಆಗುವ ಹಾಗೆ ಸರಳವಾಗಿ ಹೇಳಿದ್ದಾರೆ.

> ವ್ಯಾಸರು ಬರೆದ 18 ಮಹಾಪುರಾಣಗಳಲ್ಲಿ ಅತ್ಯಂತ ಮಹತ್ವದ್ದು ಮತ್ತು ಪವಿತ್ರವಾದ್ದು ಅಂದರೆ, ಅದು ಶಿವಪುರಾಣ ಮಾತ್ರ. ಇದನ್ನ ಬಹಳ ಶ್ರದ್ಧೆಯಿಂದ ಕೇಳಬೇಕು. ಶಿವಪುರಾಣ ಕೇಳಿದ ಎಂಥ ಪಾಪಿಯೂ ಪುನೀತನಾಗುತ್ತಾನೆ

ಶಿವಮಹಾಪುರಾಣದ ಮೊದಲ ಅಧ್ಯಾಯವಾದ ‘ವಿದ್ಯೇಶ್ವರ ಸಂಹಿತೆ’ ಶಿವನ ಪೂಜಿಸುವ ಕ್ರಮಗಳನ್ನು ಸೂಚಿಸಿದರೆ, ಎರಡನೆಯದಾದ ‘ರುದ್ರಸಂಹಿತೆ’ಯಲ್ಲಿ ಶಿವಕಥಾ ನಿರೂಪಣೆ ಇದೆ. ಮೂರನೇ ಅಧ್ಯಾಯವಾದ ‘ಶತರುದ್ರ ಸಂಹಿತೆ’ಯಲ್ಲಿ ಶಿವನ ಅವತಾರಗಳ ವಿವರಗಳಿವೆ. ನಾಲ್ಕನೆಯದಾದ ‘ಕೋಟಿರುದ್ರ ಸಂಹಿತೆ’ಯು ಶೈವಕ್ಷೇತ್ರಗಳ ಮಹಿಮೆ, ಐದನೆಯದಾದ ‘ಉಮಾ ಸಂಹಿತೆ’ ಪಾಪ-ಪುಣ್ಯಗಳ ಫಲ, ಆರು ಮತ್ತು ಏಳನೆಯದಾದ ‘ಕೈಲಾಸ ಸಂಹಿತೆ’ ಹಾಗೂ ‘ವಾಯವೀಯ ಸಂಹಿತೆ’ಗಳಲ್ಲಿ ಪ್ರಣವ ಸ್ವರೂಪ ಮತ್ತು ಉಪನಿಷದ್ವಾಕ್ಯಗಳ ವಿವರಗಳಿವೆ.

ವ್ಯಾಸರು ಬರೆದ ಎಲ್ಲಾ 18 ಮಹಾಪುರಾಣಗಳಲ್ಲು ಮೂರು ಅಂಶಗಳು ಸಾಮಾನ್ಯವಾಗಿ ಕಾಣುತ್ತವೆ. ಅವು ಶಿವಪುರಾಣದಲ್ಲೂ ಇವೆ. ಇದಕ್ಕೆ ಕಾರಣ, ಸಾಮಾನ್ಯ ಜನರಿಗೂ ಸರಳವಾಗಿ ಅರ್ಥವಾಗಲಿ ಅನ್ನೋ ಉದ್ದೇಶ ವ್ಯಾಸಮಹರ್ಷಿಗಳದ್ದು. ಶಿವಪುರಾಣದಲ್ಲಿ ಕಂಡು ಬರುವ ಮೂರು ಅಂಶಗಳಲ್ಲಿ ಮೊದಲ ಅಂಶ ಕಥಾಂಶವಾದರೆ, ಎರಡನೇ ಅಂಶ ಕರ್ಮ ಅಥವಾ ಉಪಾಸನಾ ಅಂಶ, ಮೂರನೆಯದು ತತ್ವನಿರೂಪಣೆ. ಶಿವಪುರಾಣದ ಎಲ್ಲಾ 7 ಸಂಹಿತೆಗಳಲ್ಲೂ ಈ ಮೂರೂ ಅಂಶ ಕಂಡು ಬರುವುದು. ವ್ಯಾಸರ ಕೌಶಲವೇ ಹಾಗೇ, ಎಂಥ ಸಾಮಾನ್ಯರಿಗೂ ಸರಳವಾಗಿ ಅರ್ಥವಾಗಲಿ ಅಂತ ಪ್ರತಿಯೊಂದನ್ನು ವಿಂಗಡಿಸಿ, ವಿವರಿಸುತ್ತಾರೆ.

ವ್ಯಾಸರು ಬರೆದ 18 ಮಹಾಪುರಾಣಗಳಲ್ಲಿ ಅತ್ಯಂತ ಮಹತ್ವದ್ದು ಮತ್ತು ಪವಿತ್ರವಾದ್ದು ಅಂದರೆ, ಅದು ಶಿವಪುರಾಣ ಮಾತ್ರ. ಇದನ್ನ ಬಹಳ ಶ್ರದ್ಧೆಯಿಂದ ಕೇಳಬೇಕು. ಶಿವಪುರಾಣ ಕೇಳಿದ ಎಂಥ ಪಾಪಿಯೂ ಪುನೀತನಾಗುತ್ತಾನೆ. ಅವನ ಏಳೇಳು ಜನ್ಮಗಳ ಪಾಪ ಸಹ ಪರಿಹಾರ ಆಗುತ್ತೆ ಅಂತ ಸ್ವತಃ ಶಿವನೇ ದೇವಮಹರ್ಷಿ ಸನತ್ಕುಮಾರನಿಗೆ ಹೇಳಿದ್ದಾನೆ. ಇದನ್ನ ಸನತ್ಕುಮಾರನು ವೇದವ್ಯಾಸರಿಗೆ ತಿಳಿಸಿದ್ದ. ಭೂಲೋಕದಲ್ಲಿ ಮಾಡಬಾರದ ಪಾಪಗಳನ್ನು ಮಾಡಿ, ನರಕದಲ್ಲಿ ನರಳುತ್ತಿರುವ ನರಮನುಷ್ಯರು ಶಿವಪುರಾಣ ಕೇಳಿ ಪಾವನರಾಗಬಹುದು. ಆದ್ದರಿಂದ ಪ್ರತಿಯೊಬ್ಬ ಮನುಷ್ಯ ತನ್ನ ಬದುಕಿನಲ್ಲಿ ಒಮ್ಮೆಯಾದರೂ ಶಿವಪುರಾಣ ಕೇಳಲೇಬೇಕು.

ಶಿವಪುರಾಣ ಬಹಳ ದೊಡ್ಡದಾದ, ಅಷ್ಟೇ ತಿರುಳಿರೋ ಗ್ರಂಥ. ಇಲ್ಲಿ ಕತೆ ಜೊತೆಗೆ, ಕರ್ಮಫಲಗಳ ವಿವರ ಇದೆ. ಕರ್ಮಫಲದಂತೆ, ತತ್ವನಿರೂಪಣೆಯೂ ಇದೆ. ಮೊದಲ ಸಂಹಿತೆಯಾದ ವಿದ್ಯೇಶ್ವರ ಸಂಹಿತೆ ತಿಳಿಯುವುದಕ್ಕೂ ಮುನ್ನ ನಾವು, ವ್ಯಾಸರೇ ಬರೆದ ಸ್ಕಂದಪುರಾಣದಲ್ಲಿ ಬರುವ ಶಿವಪುರಾಣ ಮಹಿಮೆಯನ್ನ ತಿಳಿಯಬೇಕು. ಇಲ್ಲಿ ವರ್ಣಿಸಿದ 7 ಅಧ್ಯಾಯಗಳಲ್ಲೂ ಶಿವನ ಮಹಿಮೆಯನ್ನ ಕೊಂಡಾಡಲಾಗಿದೆ. ಇದರ ಮೊದಲ ಅಧ್ಯಾಯದಲ್ಲಿ ಶೌನಕ ಮುನಿಯು ಸೂತಮುನಿಗೆ ಒಂದು ಪ್ರಶ್ನೆ ಕೇಳುತ್ತಾನೆ. ‘ಕಲಿಯುಗದಲ್ಲಿ ಜನರು ಸದ್ಗತಿ ಪಡೆಯಲು ಸಾಧನಗಳಾವುದೂ’ ಅಂತ. ಇದಕ್ಕೆ ಸೂತಮುನಿ ‘ಶಿವಪುರಾಣಕ್ಕಿಂತ ಮತ್ತೊಂದು ಉತ್ತಮ ಮಾರ್ಗವಿಲ್ಲ’ ಅನ್ನುತ್ತಾನೆ. ಶಿವತತ್ವ ಸ್ವರೂಪಜ್ಞಾನವು ಭಕ್ತಿ ಮತ್ತು ಮುಕ್ತಿಯನ್ನು ಕೊಡುತ್ತದೆ. ಪರಾಪರ ತತ್ವವಿಚಾರವಾದ ಈ ಜ್ಞಾನಯಜ್ಞದಿಂದ ಎಂಥ ಕಡುಪಾಪಿಯೂ ಪರಿಶುದ್ಧನಾಗುತ್ತಾನೆ ಎಂದು ವಿವರಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ರಸ್ತೆಯನ್ನು ಬಂದ್ ಮಾಡಿ,** ಸಾವಿರಾರು ಮುಸ್ಲಿಮರು ನಮಾಜ್ ಮಾಡುತ್ತಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಲ್ಲಿದೆ. ತಾರೆಕ್ ಫತಾಹ್ ಎಂಬುವರು ಟ್ವಿಟರ್‌ನಲ್ಲಿ ಈ ಚಿತ್ರವನ್ನು ಹಂಚಿಕೊಂಡಿದ್ದಾರೆ. ‘ಹೆದ್ದಾರಿಯಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಿ ಪ್ರಾರ್ಥನೆ ಮಾಡಲಾಗುತ್ತಿದೆ. ವಾಹನಗಳ ಮೇಲೂ ನಮಾಜ್ ಮಾಡಲಾಗುತ್ತಿದೆ’ ಎಂದು ಸಾಮಾಜಿಕ ಜಾಲತಾಣ ಬಳಕೆದಾರರು ಚರ್ಚಿಸುತ್ತಿದ್ದಾರೆ. ಹರಿಯಾಣದ ಗುರುಗ್ರಾಮದಲ್ಲಿ ಜನವಸತಿ ಪ್ರದೇಶ ಸಮೀಪದ ಬಯಲಿನಲ್ಲಿ ಮುಸ್ಲಿಮರು ನಮಾಜ್ ಮಾಡಿದ್ದನ್ನು ಹಿಂದೂಪರ ಸಂಘಟನೆಗಳು ಆಕ್ಷೇಪಿಸಿದ್ದು ಇತ್ತೀಚೆಗೆ ಸುದ್ದಿಯಾಗಿತ್ತು.



✓ **ಈ ಚಿತ್ರ ಬಾಂಗ್ಲಾದೇಶದ** ಬಿಶ್ವ ಇಜ್ತೆಮಾ ಕಾರ್ಯಕ್ರಮಕ್ಕೆ ಸಂಬಂಧಿಸಿದ್ದು ಎಂದು ಇಂಡಿಯಾ ಟುಡೇ ವರದಿ ಮಾಡಿದೆ. ಪ್ರತೀ ವರ್ಷವೂ ಗಾಜಿಪುರದ ಟೊಂಗಿ ಎಂಬಲ್ಲಿ ನಡೆಯುವ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಸಾವಿರಾರು ಮುಸ್ಲಿಮರು ಭಾಗಿಯಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ. ಚಿತ್ರದಲ್ಲಿರುವ ವಾಹನಗಳು, ಮಳಿಗೆಗಳ ಹೆಸರು ಮೊದಲಾದವನ್ನು ಪರಿಶೀಲಿಸಿದಾಗ, ವೈರಲ್ ಆಗಿರುವ ಚಿತ್ರಕ್ಕೂ ಭಾರತಕ್ಕೂ ಸಂಬಂಧವಿಲ್ಲ ಎಂಬುದು ತಿಳಿದುಬಂದಿದೆ ಎಂದು ವೆಬ್‌ಸೈಟ್ ತಿಳಿಸಿದೆ.

ಬೆರಗಿನ ಬೆಳಕು



ಗುರುರಾಜ ಕರಜಗಿ

ತ್ರಿವಿಕ್ರಮನಿಗೇಕೆ ಏಣಿ?

ವೇದಗಳು ಶಾಸ್ತ್ರಗಳು ಲೋಕನೀತಿಗಳೆಲ್ಲ |
ಹಾದಿತೋರಲು ನಿಶಿಯೊಳುರಿವ ಪಂಜುಗಳು ||
ಸೌಧವೇರಿದವಂಗೆ, ನಭವ ಸೇರದವಂಗೆ |
ಬೀದಿಬೆಳಕಿಂದೇನೊ? - ಮಂಕುತಿಮ್ಮ || 523 ||

ಪದ-ಅರ್ಥ: ನಿಶಿಯೊಳುರಿವ = ನಿಶಿಯೊಳು(ಕತ್ತಲೆಯಲ್ಲಿ) + ಉರಿವ, ಸೌಧವೇರಿದವಂಗೆ = ಸೌಧ (ಮನೆ) + ಏರಿದವಂಗೆ(ಏರಿದವನಿಗೆ), ನಭ = ಆಕಾಶ.

ವಾಚ್ಯಾರ್ಥ: ವೇದಗಳು, ಶಾಸ್ತ್ರಗಳು, ಲೋಕದ ನೀತಿಗಳು, ಮನುಷ್ಯನಿಗೆ ದಾರಿ ತೋರಲು, ರಾತ್ರಿಯಲ್ಲಿ ಬಳಸುವ ಪಂಜುಗಳಿದ್ದಂತೆ. ಆದರೆ ಮನೆ ಸೇರಿ ಮಾಳಿಗೆ ಏರಿದವನಿಗೆ, ಆಕಾಶವನ್ನು ಸೇರಿದವನಿಗೆ, ಈ ಬೀದಿಯ ಬೆಳಕಿನಿಂದ ಯಾವ ಪ್ರಯೋಜನ?

ವಿವರಣೆ: ಕತ್ತಲೆಯಲ್ಲಿ ನಡೆಯುತ್ತ ಹೋಗುವವನಿಗೆ ಟಾರ್ಚ್‌ನ ಅವಶ್ಯಕತೆ ಇದೆ. ಯಾಕೆಂದರೆ ಅದಿಲ್ಲದೆ ಅವನ ಪ್ರವಾಸ ಕಷ್ಟ ಮತ್ತು ಕಣ್ಣಿಗೆ ಕಾಣದ್ದರಿಂದ ಅಪಾಯದ ಸಾಧ್ಯತೆ ಹೆಚ್ಚು. ಆದರೆ ಮನೆಯಲ್ಲಿ, ಬೆಳಕಿನಲ್ಲಿ ಕುಳಿತವನಿಗೆ ಟಾರ್ಚ್ ಅವಶ್ಯಕತೆಯೇ ಇಲ್ಲ. ಆಕಾಶದಲ್ಲಿ ವಿಮಾನದಲ್ಲಿ ಹಾರುವವನಿಗೆ ಬೀದಿ ದೀಪದ ಗೊಡವೆ ಏಕೆ?

ಅದೇ ರೀತಿ ಅಧ್ಯಾತ್ಮದಲ್ಲಿ ಮುಂದುವರೆಯುವುದಕ್ಕೆ ಸಾಧಕನಿಗೆ ಸಾಧನಗಳು ಬೇಕು. ವೇದಗಳು ಉಪನಿಷತ್ತುಗಳು, ಶಾಸ್ತ್ರಗಳು, ವಚನಗಳು, ಧರ್ಮಗ್ರಂಥಗಳು ಇವೆಲ್ಲ ಸಾಧನಗಳು. ಇವುಗಳನ್ನು ಅಭ್ಯಾಸ ಮಾಡುತ್ತ ಹಂತಹಂತವಾಗಿ ವ್ಯಕ್ತಿ ಮೇಲಕ್ಕೇರುತ್ತಾನೆ. ಇದು ಸಾಮಾನ್ಯ ಜನರ ದಾರಿ. ಆದರೆ ಕೆಲವರು ಇವು ಯಾವುದನ್ನು ಗಣಿಸದಲೆ ಥಟ್ಟೆಂದು ಹಾರಿ ಎತ್ತರಕ್ಕೇರಿಬಿಡುತ್ತಾರೆ. ಜೈನ ಸಂಪ್ರದಾಯದಲ್ಲಿ ಒಬ್ಬ ವ್ಯಕ್ತಿ ಮುನಿಯಾಗಬೇಕಾದರೆ ಹಲವಾರು ಹಂತಗಳನ್ನು, ಸ್ವಪರೀಕ್ಷೆಗಳನ್ನು ದಾಟಿ ಬರಬೇಕು. ಅದೊಂದು ಅತ್ಯಂತ ಕಠಿಣವಾದ ದಾರಿ. ಆದರೆ ಭಗವಾನ್ ಮಹಾವೀರರಿಗೆ ಇದಾವುದೂ ಬೇಕಾಗಲಿಲ್ಲ. ಅವರು ನೇರವಾಗಿ ಜ್ಞಾನೋದಯ ಪಡೆದು ತೀರ್ಥಂಕರರಾದರು. ಆದರೆ ಉಳಿದವರು ಮೇಲೇರಲು ‘ಅಷ್ಟಸೋಪಾನ’ಗಳನ್ನು ಏರಬೇಕು. ಅವುಗಳೊಡನೆ ಸತ್ಯ, ಅಹಿಂಸೆಗಳನ್ನು ಪಾಲಿಸಬೇಕು.


ವೈದಿಕ ಸಂಪ್ರದಾಯದಲ್ಲೂ ಸನ್ಯಾಸಿಯಾಗಲು ಅನೇಕ ನಿಯಮಗಳಿವೆ. ಎಲ್ಲ ನಿಯಮಾಚರಣೆಗಳ ನಂತರ ಸನ್ಯಾಸ ದೀಕ್ಷೆ ದೊರಕುತ್ತದೆ. ಆದರೆ ಆಚಾರ್ಯ ಶಂಕರರಿಗೆ ಇದಾವುದೂ ಬೇಕಾಗಲಿಲ್ಲ. ಮೊಸಳೆ ಕಾಲು ಹಿಡಿದ ನೆಪವೊಂದೆ ಸಾಕಾಯಿತು. ಮರುಕ್ಷಣವೇ ಸನ್ಯಾಸ. ತ್ರಿವಿಕ್ರಮನಿಗೆ ಮೆಟ್ಟಿಲುಗಳೇಕೆ?

ಶ್ರೀ ರಾಮಕೃಷ್ಣ ಪರಮಹಂಸರು ವೇದಗಳನ್ನು, ಉಪನಿಷತ್ತುಗಳನ್ನು, ಶಾಸ್ತ್ರಗಳನ್ನು ಓದಲಿಲ್ಲ. ಅವರು ಇವು ಯಾವುವನ್ನೂ ಓದಲಿಲ್ಲವೆಂದು ಜನರು ಗೇಲಿ ಮಾಡಿದರು. ಆದರೆ ಶ್ರೀರಾಮಕೃಷ್ಣರು ಭಕ್ತಿಯೊಂದನ್ನೇ ಗಟ್ಟಿಯಾಗಿ ಹಿಡಿದುಕೊಂಡು ಅಧ್ಯಾತ್ಮದ ಸಮುದ್ರದಲ್ಲಿ ಹಾರಿಬಿಟ್ಟರು. ಅವರು ಉಪನಿಷತ್ತುಗಳನ್ನು ಓದದೆ ಹೋದರೂ. ಅವರು ಮಾತನಾಡಿದ್ದೆಲ್ಲ ಉಪನಿಷತ್ತಾಯಿತು. ಅದು ರಾಮಕೃಷ್ಣೋಪನಿಷತ್ತಾಯಿತು. ರಮಣ ಮಹರ್ಷಿಗಳೂ ಹೀಗೆಯೇ ಗರುಡಗಮನರಾದವರು. ಅವರು ವಿಷದಪಡಿಸಿದ ಅಮೂಲ್ಯ ತಮಿಳು ಕೃತಿ ‘ಉಳ್ಳದು ನಾರ್ಪದು’. ಅದರಲ್ಲಿ ಅವರು ಹೇಳುತ್ತಾರೆ,

“ಮಣ್ಣೈನಿಲ್ವೆ ನಿನ್ರುಪ್ರೊಯ್ಯೈ
ತೀನ್ನಾರ್ದಾರ್ ತಿಯಂಗೊವರೋ ತೇರ್”

‘ತನ್ನ ನೈಜ ಆತ್ಮಸ್ವರೂಪದ ಅನುಭವದ ಸ್ಥಿತಿಯಲ್ಲಿ ನೆಲೆ ನಿಂತು ಅದರಿಂದ ಮಾಯೆಯಾಗಿರುವ ಅಜ್ಞಾನದ ನಿದ್ರೆಯನ್ನು ಕಳೆದುಕೊಂಡ ಜೀವನ್ಮುಕ್ತರು, ಸಿದ್ಧಿಗಳಲ್ಲಿ ಆಸೆ ಇಟ್ಟುಕೊಳ್ಳುವರೇನು? ನಿರ್ಧರಿಸು’.

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಡಿಸೆಂಬರ್ 21, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿರ (ಧನುರ್ಮಾಸ) ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಮೂಲ ದ್ವಿತೀಯ ಗಂ. 14-18 (ಹ. 12-26) ಮಂಗಳವಾರ ನಿತ್ಯ ನಕ್ಷತ್ರ ಪುನರ್ವಸು ಗಂ. 34-53 (ರಾ. 8-40) ಬ್ರಹ್ಮ ನಾಮ ಯೋಗ ಗಂ. 10-15 ಗರಜ ಕರಣ ಗಂ. 14-18 ವಿಷ ಗಂ. 1-48 ಪುರ್ವಿಷ ಗಂ. 56-34 ಅಮೃತ ಗಂ. 27-51: ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-39 ಸೂರ್ಯಾಸ್ತ: 5-53 ಅದೃಷ್ಟ ಸಂಖ್ಯೆ 2, 9

ಮೇಷ: ಕೃಷಿ ಸಂಬಂಧಿತ ಉದ್ಯೋಗದಿಂದಾಗಿ ಧನಾಗಮನ. ಮಕ್ಕಳಿಂದ ನೆಮ್ಮದಿ. ದಾಂಪತ್ಯದಲ್ಲಿ ಸುಖ. ಸಾಮಾಜಿಕ ಕಾರ್ಯಗಳಿಂದಾಗಿ ಮನ್ನಣೆ. ಋಣ ಪರಿಹಾರದಿಂದಾಗಿ ನಿರಾಳತೆ. ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ.

ವೃಷಭ: ದೈನಂದಿನ ಕಾರ್ಯಗಳಲ್ಲಿ ಉತ್ಸಾಹ. ಮಹಿಳೆಯರ ಇಷ್ಟಾರ್ಥ ಸಿದ್ಧಿ. ಬಂಧುಗಳ ಆಗಮನದಿಂದಾಗಿ ಸಂತಸ ಮೂಡಲಿದೆ. ಮಕ್ಕಳಿಂದ ಸಂತೋಷದ ಸುದ್ದಿ. ಮನರಂಜನೆಗಾಗಿ ಖರ್ಚು ಮಾಡಬೇಕಾದೀತು.

ಮಿಥುನ: ಬೇರೆಯವರ ಸಹಕಾರದಿಂದಾಗಿ ಪ್ರಯತ್ನಿಸಿದ ಕಾರ್ಯಗಳಲ್ಲಿ ಸಫಲತೆ. ಉದ್ಯೋಗದಲ್ಲಿನ ಸಮಸ್ಯೆಗಳನ್ನು ಯೋಗ್ಯ ರೀತಿಯಲ್ಲಿ ಪರಿಹರಿಸಿಕೊಳ್ಳುವಿರಿ. ಬೇರೆಯವರಿಗೆ ಸಹಾಯ ಮಾಡುವುದರಿಂದ ಮಾನಸಿಕ ನೆಮ್ಮದಿ.

ಕರ್ಕಾಟಕ: ವೈಯಕ್ತಿಕ ವಿಚಾರಗಳನ್ನು ಬಹಿರಂಗಗೊಳಿಸಬೇಡಿ. ವ್ಯವಹಾರಗಳಲ್ಲಿ ಸಹೋದರರಿಂದ ಹೆಚ್ಚಿನ ಪ್ರೋತ್ಸಾಹ. ನೇತ್ರ ಸಂಬಂಧಿ ವಿಚಾರಗಳ ಬಗ್ಗೆ ಅತ್ಯಂತ ಜಾಗರೂಕತೆ ಅವಶ್ಯ. ವಿದೇಶ ಪ್ರಯಾಣ ಯೋಗ ಕಂಡುಬರುವುದು.

ಸಿಂಹ: ಅಲಂಕಾರಿಕ ವಸ್ತುಗಳನ್ನು ಕೊಂಡುಕೊಳ್ಳುವಿರಿ. ಅಧಿಕಾರಿಗಳಿಂದ ಪ್ರಶಂಸೆ. ಅನಾವಶ್ಯಕವಾಗಿ ಉದ್ವೇಗಕ್ಕೊಳಗಾಗುವ ಸಾಧ್ಯತೆ. ಉದ್ಯೋಗದಲ್ಲಿ ಬಡ್ತಿ ವಾ ಉನ್ನತಿಯನ್ನು ಕಾಣುವಿರಿ. ವಿದ್ಯಾಭ್ಯಾಸದಲ್ಲಿ ಪ್ರಗತಿ ಕಾಣುವುದು.

ಕನ್ಯಾ: ಕುಟುಂಬ ಸದಸ್ಯರೊಂದಿಗೆ ಧಾರ್ಮಿಕ ಕ್ಷೇತ್ರದರ್ಶನ ಸಾಧ್ಯತೆ. ಹೊಸ ಯೋಜನೆಗಳನ್ನು ರೂಪಿಸಲು ಸಕಾಲ. ರಾಜಕೀಯ ಕ್ಷೇತ್ರದಲ್ಲಿ ಯಶಸ್ಸನ್ನು ಕಾಣುವಿರಿ. ಮಿತ್ರ ವರ್ಗದವರಿಂದ ವಿಶೇಷ ಅನುಕೂಲತೆಗಳು ಒದಗಿ ಬರಲಿವೆ.

ತುಲಾ: ಆಶೋತ್ತರಗಳು ಈಡೇರಿ ನೆಮ್ಮದಿ. ಮಕ್ಕಳಿಂದ ಮನೆಯಲ್ಲಿ ಸಂತೋಷದ ವಾತಾವರಣ. ಸೋಗಲಾಡಿ ಗೆಳೆಯರಿಂದಾಗಿ ವೃಥಾ ಖರ್ಚು. ಚರ್ಮ ಸಂಬಂಧಿ ವ್ಯಾಧಿಗಳಿಗೆ ತುತ್ತಾಗುವ ಸಾಧ್ಯತೆ.

ವೃಶ್ಚಿಕ: ಹದಿಹರೆಯದವರ ಸ್ವೇಚ್ಛಾವೃತ್ತಿಯಿಂದಾಗಿ ಅವಘಡ ಸಾಧ್ಯತೆ. ಹಿರಿಯರ ಸಲಹೆಗಳನ್ನು ಗೌರವಿಸಿ. ಉದ್ಯೋಗ ನಿಮಿತ್ತ ದೂರದ ಪ್ರಯಾಣ ಸಾಧ್ಯತೆ. ವಿವಾಹಾಕಾಂಕ್ಷಿಗಳಿಗೆ ಉತ್ತಮ ಸಂಬಂಧ ಕೂಡಿಬರಲಿದೆ.

ಧನು: ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶ ಲಭ್ಯವಾಗಲಿದೆ. ತಗಾದೆಗಳಿಂದ ಮುಕ್ತಿ, ಬಂಧುಗಳೊಂದಿಗೆ ಸಂತೋಷ ಕೂಟ. ಗೃಹನಿರ್ಮಾಣ ಕಾರ್ಯಗಳಲ್ಲಿ ವಿಳಂಬ ಸಾಧ್ಯತೆ. ಆರೋಗ್ಯದ ಬಗ್ಗೆ ನಿಗಾ ವಹಿಸಿ.

ಮಕರ: ಕೆಲಸ ಕಾರ್ಯಗಳಲ್ಲಿ ಇತರರೊಂದಿಗೆ ಹೊಂದಾಣಿಕೆ ಅಗತ್ಯ. ವಾಹನ ಚಾಲನೆಯಲ್ಲಿ ಎಚ್ಚರಿಕೆ ಅಗತ್ಯ. ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ದೊರಕಲಿದೆ. ಮೋಜು ಮಸ್ತಿಗಾಗಿ ಖರ್ಚು ನಿಯಂತ್ರಣದಲ್ಲಿಡಿ.

ಕುಂಭ: ಆರ್ಥಿಕ ವ್ಯವಹಾರದಲ್ಲಿ ತಾಳ್ಮೆ ವಹಿಸಿ. ಮಹಿಳೆಯರಿಗೆ ಕಲಾ ಪ್ರೌಢಿಮೆ ಮೆರೆಯಲು ಉತ್ತಮ ಅವಕಾಶ. ವಿದ್ಯಾರ್ಥಿಗಳಿಗೆ ಶ್ರಮದಾಯಕ ಕೆಲಸ. ನಿರೀಕ್ಷಿತ ವಲಯಗಳಿಂದ ಧನಾಗಮ. ಆರೋಗ್ಯದಲ್ಲಿ ವ್ಯತ್ಯಯ.


ಮೀನ: ಅತಿಯಾದ ಸಂಶಯದಿಂದಾಗಿ ಎಡವಟ್ಟುಗಳು ಸಂಭವಿಸಬಹುದು. ಸಾಮಾಜಿಕ ಕೆಲಸ-ಕಾರ್ಯಗಳಲ್ಲಿ ಮುಜುಗರ ಸಾಧ್ಯತೆ. ರಾಸಾಯನಿಕ ವಸ್ತುಗಳಿಂದ ದೂರವಿರಿ.

ನಿಮ್ಮ ಜನ್ಮದಿನ 21-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಆರ್ಥಿಕ ಸಬಲತೆಯನ್ನು ಹೊಂದಿಲ್ಲದಿದ್ದರೂ ಜನಸಾಮಾನ್ಯರ ಪ್ರೀತಿ ವಿಶ್ವಾಸಗಳು ಬೆಂಬಲಕ್ಕೆ ನಿಲ್ಲುವವು. ಸ್ಥೂಲಕಾಯದಿಂದಾಗಿ ದೈಹಿಕ ಶ್ರಮದ ಕೆಲಸ ಕಾರ್ಯಗಳು ಕಷ್ಟ ಸಾಧ್ಯವಾಗಲಿವೆ. ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಉತ್ತಮ. ರಾಜಕೀಯ ಕ್ಷೇತ್ರದಲ್ಲಿ ಅವಕಾಶ ಒಲಿದು ಬರಲಿದೆ.

ಪದಬಂಧ 4814 - ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬುಡಸಹಿತ ಕೀಳುವಿಕೆ (4)
3.ಇನ್ನೂ ಬಲಿಯದಿರುವ ಕಾಯಿ (4)
5.ಓದುಗ ಇಲ್ಲಿದ್ದಾನೆ (3)
6.ಪದಾತಿಯಲ್ಲಿರುವ ಗಂಡ (2)
8.ತವರಕ್ಕಾಗಿ ಈ ಒತ್ತಾಯವೇ! (3)
10.ಕೆಲವರು ಮಾಡುವ ಕಾರ್ಯ (3)
13.ಹಮ್ಮೀರನಿಗೊಲಿದ ಶಿವ (2)
15.ಕಾವಿಬಟ್ಟೆ ಇಲ್ಲಿದೆ (3)
16.ಗುರುಗಳ ಮನೆ ಅಥವಾ ಶಿಕ್ಷಣಕೇಂದ್ರ (4)
17.ಕಬ್ಬಿನ ಗಾಣವಿರುವ ಸ್ಥಳ (4)

ಮೇಲಿಂದ ಕೆಳಕ್ಕೆ
1.ಹುದುಗಿಟ್ಟ ಧನ (3)
2.ಈತ ಮುಸಲ್ಮಾನ ದೊರೆ (3)
3.ಪೆದ್ದನಿಲ್ಲಿದ್ದಾನಲ್ಲಾ! (3)
7.ಅರಿವು ಹೀಗೆ ಬಂದಿದೆ (5)
9.ಶೀರೋನಾಮೆಯಿದು (5)
11.ಸರಿಯಾದ ಸಮಯ (3)
12.ಭೂಮಧ್ಯೆ ರೇಖೆಯ ಉತ್ತರ ಅಥವಾ ದಕ್ಷಿಣಕ್ಕೆ ಸೂರ್ಯ ಚಲಿಸುವ ಮಾರ್ಗ ಉಲ್ಟಾ ಆಗಿದೆ (3)
14.ಸಾಗಿಸುವಿಕೆಗೊಂದು ಪರ್ಯಾಯ ಪದ (3)



4813ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿರಾಮ 4.ಕಣ್ಣೀರು 6.ಜಲಜನಕ 7.ಯತಿ 9.ಮಾಯ 10.ನಾಲ 11.ನಿಜ 13.ಗುಣವಾಚಕ 16.ಡೆರಬಿ 17.ರುಧಿರ

ಮೇಲಿಂದ ಕೆಳಕ್ಕೆ: 1.ವಿನಿಮಯ 2.ಮನುಜ 3.ಸಹಜ 4.ಕಳಂಕ 5.ರುಗ್ಣಾಲಯ 8.ತಿಗರಿ 9.ಮಾರ್ಜಾಲ 10.ನಾಯಿಕೊಡೆ 12.ಜನಿವಾರ 13.ಗುಲಾಬಿ 14.ವಾರ್ತಿಕ 15.ಕಶೇರು

ಸುಡೊಕು 5200

	4		2			6		1
				8		2	7	
			1		4			8
		4				1		
2	8		6	9	1		4	3
		7					6	5
	5			1				7
	1	6	8		2	5	3	
4	2			5			1	6

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5199 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

1 ಕೋಟಿ ವಿದ್ಯಾರ್ಥಿಗಳಿಗೆ ಸ್ಮಾರ್ಟ್‌ಫೋನ್

ಲಖನೌ (ಪಿಟಿಐ): ವಿಧಾನಸಭೆ ಚುನಾವಣೆಯ ಹೊಸ್ತಿಲಲ್ಲಿರುವ ಉತ್ತರ ಪ್ರದೇಶದ ಸರ್ಕಾರವು ಒಂದು ಕೋಟಿ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಮತ್ತು ಸ್ಮಾರ್ಟ್ ಫೋನ್‌ಗಳನ್ನು ಉಚಿತವಾಗಿ ವಿತರಿಸಲು ನಿರ್ಧರಿಸಿದೆ.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನವಾದ ಡಿಸೆಂಬರ್ 25ರಂದು ಯೋಜನೆಯ ಮೊದಲ ಹಂತಕ್ಕೆ ಚಾಲನೆ ನೀಡಲಾಗುವುದು. ಅಂದು ಒಂದು ಲಕ್ಷ ಸ್ಮಾರ್ಟ್ ಫೋನ್‌ಗಳನ್ನು ವಿತರಿಸಲಾಗುವುದು. ಈ ಯೋಜನೆಯು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯ.

ಎಂ.ಎ., ಬಿ.ಎ., ಬಿಎಸ್‌ಸಿ, ಐಟಿಐ, ಎಂಬಿಬಿಎಸ್, ಎಂ.ಡಿ., ಬಿ.ಟೆಕ್, ಎಂ.ಟೆಕ್ ಮುಂತಾದ ಪದವಿ ಮತ್ತು ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ವಿದ್ಯಾರ್ಥಿಗಳು ಸ್ಮಾರ್ಟ್‌ಫೋನ್ ಮತ್ತು ಟ್ಯಾಬ್ಲೆಟ್ ಪಡೆಯಲು ಅರ್ಹರು.

ಈ ಸೌಲಭ್ಯ ಪಡೆಯುವುದಕ್ಕಾಗಿ 'ಡಿಜಿ ಶಕ್ತಿ ಪೋರ್ಟಲ್'ನಲ್ಲಿ 38 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ.

ಯಾತ್ರೆ ಸಮಾರೋಪ

ಉತ್ತರ ಪ್ರದೇಶದ ಮತದಾರರನ್ನು ತಲುಪಲು ರಾಜ್ಯದ ಆರು ಕಡೆಗಳಿಂದ ಬಿಜೆಪಿ ಆರಂಭಿಸಿರುವ 'ಜನ ವಿಶ್ವಾಸ ಯಾತ್ರೆ'ಯ ಸಮಾರೋಪ ಸಮಾರಂಭವನ್ನು ಜನವರಿ ಒಂದು ಮತ್ತು ಎರಡರಂದು ನಡೆಸಲಾಗುವುದು ಎಂದು ಉತ್ತರ ಪ್ರದೇಶ ಬಿಜೆಪಿ ವಕ್ತಾರ ಹರೀಶ್ ಶ್ರೀವಾತ್ಸವ ಹೇಳಿದ್ದಾರೆ.

ಗೋವಾ ಕಾಂಗ್ರೆಸ್ ಶಾಸಕ ಟಿಎಂಸಿಗೆ?

ಕೋಲ್ಕತ್ತ (ಪಿಟಿಐ): ಗೋವಾ ವಿಧಾನಸಭಾ ಚುನಾವಣೆಗೆ ಕೆಲ ತಿಂಗಳಿರುವಾಗ, ಶಾಸಕ ಸ್ಥಾನಕ್ಕೆ ಸೋಮವಾರ ಬೆಳಿಗ್ಗೆ ರಾಜೀನಾಮೆ ನೀಡಿದ್ದ ಕಾಂಗ್ರೆಸ್ ಮುಖಂಡ ಅಲೆಕ್ಸೊ ರೆಜಿನಾಲ್ಡೊ ಲೌರೆಂಕೊ ಅವರು ಸಂಜೆ ಹೊತ್ತಿಗೆ ಕೋಲ್ಕತ್ತ ತಲುಪಿದ್ದಾರೆ. ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವನ್ನು ಅವರು ಸೇರುವ ಸಾಧ್ಯತೆ ಇದೆ ಎನ್ನಲಾಗಿದೆ.

ಟಿಎಂಸಿ ಸಂಸದ ಸಂತನು ಸೇನ್ ಅವರು ಅಲೆಕ್ಸೊ ಅವರನ್ನು ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು. 'ಅಲೆಕ್ಸೊ ಅವರು ಟಿಎಂಸಿಯ ನಾಯಕರನ್ನು ಭೇಟಿಯಾಗಿ, ಪಕ್ಷಕ್ಕೆ ಸೇರ್ಪಡೆ ಆಗಲಿದ್ದಾರೆ' ಎಂದು ಟಿಎಂಸಿಯ ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ.

ಅಲೆಕ್ಸೊ ಅವರು ಶಾಸಕ ಸ್ಥಾನ ತೊರೆದಿರುವುದರಿಂದ ಗೋವಾದಲ್ಲಿ ಕಾಂಗ್ರೆಸ್ ಶಾಸಕರ ಸಂಖ್ಯೆ ಎರಡಕ್ಕೆ ಇಳಿದಿದೆ.

ವಿಶ್ವಾಸದ್ರೋಹ ಎಸಗಿದವರು ಅದರ ಪರಿಣಾಮವನ್ನು ಎದುರಿಸಲಿದ್ದಾರೆ. ಅಲೆಕ್ಸೊ ಅವರಿಗೆ ಅವರು ಪ್ರತಿನಿಸಿದ್ದ ವಿಧಾನಸಭೆ ಕ್ಷೇತ್ರದ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಕಾಂಗ್ರೆಸ್ ಪ್ರತಿಕ್ರಿಯೆ ನೀಡಿದೆ.

ಕೆಲ ತಿಂಗಳ ಹಿಂದೆ, ಮಾಜಿ ಮುಖ್ಯಮಂತ್ರಿ ಲುಜಿನೊ ಫಲೀರೊ ಅವರು ಕಾಂಗ್ರೆಸ್ ತೊರೆದು ಟಿಎಂಸಿ ಸೇರಿದ್ದರು. ಗೋವಾ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಎಂಸಿ ಈಗಾಗಲೇ ನಿರ್ಧರಿಸಿದೆ.

ಜನತಂತ್ರದ ಹಬ್ಬ 2021

ಬಿಜೆಪಿ ಮಾಜಿ ಶಾಸಕ ರಾಮ್ ಇಕ್ಬಾಲ್ ಎಸ್‌ಪಿ ಸೇರ್ಪಡೆ

ಲಖನೌ (ಪಿಟಿಐ): ಉತ್ತರ ಪ್ರದೇಶದ ಬಲಿಯಾ ಕ್ಷೇತ್ರದ ಬಿಜೆಪಿ ಮಾಜಿ ಶಾಸಕ ರಾಮ್ ಇಕ್ಬಾಲ್ ಸಿಂಗ್ ಅವರು ತಮ್ಮ ಸಹವರ್ತಿಗಳ ಜೊತೆ ಸಮಾಜವಾದಿ ಪಕ್ಷವನ್ನು (ಎಸ್‌ಪಿ) ಸೋಮವಾರ ಸೇರಿದರು.

ಈ ಕುರಿತು ಟ್ವೀಟ್ ಮಾಡಿರುವ ಎಸ್‌ಪಿ, 'ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ಅವರ ನಾಯಕತ್ವದಲ್ಲಿ ನಂಬಿಕೆ ಇಟ್ಟು ರಾಮ್ ಇಕ್ಬಾಲ್ ಸಿಂಗ್ ಅವರು ಅವರ ಸಹಚರರ ಜೊತೆ ಎಸ್‌ಪಿ ಸೇರಿದ್ದಾರೆ. ಎಸ್‌ಪಿಯ ಸಹ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿದೆ' ಎಂದಿದೆ.

ಉತ್ತರ ಪ್ರದೇಶದ ಬಿಜೆಪಿ ಸರ್ಕಾರದ ಕಟು ಟೀಕಾಕಾರರಾಗಿದ್ದ ಅವರು, ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದಲ್ಲಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಕುಮಾರ್ ಮಿಶ್ರಾ ಅವರ ಕೈವಾಡ ಇದೆ ಎಂದು ಆರೋಪಿಸಿದ್ದರು.

ಚಂಡಮಾರುತ; ಮೃತರ ಸಂಖ್ಯೆ 375ಕ್ಕೆ ಏರಿಕೆ

ಸುರಿಗಾವೊ (ಎಎಫ್‌ಪಿ): ಫಿಲಿಪ್ಪೀನ್ಸ್‌ನಲ್ಲಿ ರೈ ಚಂಡಮಾರುತದ ಪರಿಣಾಮ ಮೃತಪಟ್ಟವರ ಸಂಖ್ಯೆ 375ಕ್ಕೆ ಏರಿದ್ದು, ಇನ್ನೂ 56 ಮಂದಿ ನಾಪತ್ತೆಯಾಗಿದ್ದಾರೆ.

ವಿವಿಧ ಪಟ್ಟಣಗಳಲ್ಲಿ ವಿದ್ಯುತ್ ಪೂರೈಕೆ ವ್ಯತ್ಯಯಗೊಂಡಿದ್ದು, ಸಂಪರ್ಕ ಮತ್ತು ಸಂವಹನ ಕಡಿತವಾಗಿದೆ. ನೀರು, ಆಹಾರ ಪೂರೈಸುವಂತೆ ಸಂತ್ರಸ್ತ ನಾಗರಿಕರು ಒತ್ತಾಯಿಸುತ್ತಿದ್ದಾರೆ.

ಚೀನಾ ರಾಯಭಾರಿಯಾಗಿ ಪ್ರದೀಪ್ ಕುಮಾರ್

ನವದೆಹಲಿ (ಪಿಟಿಐ): ಚೀನಾಗೆ ಭಾರತದ ನೂತನ ರಾಯಭಾರಿಯಾಗಿ ಐಎಫ್‌ಎಸ್ ಅಧಿಕಾರಿ ಪ್ರದೀಪ್ ಕುಮಾರ್ ರಾವತ್ ಅವರನ್ನು ನೇಮಿಸಲಾಗಿದೆ. 1990ನೇ ತಂಡದ ಅಧಿಕಾರಿಯಾಗಿರುವ ರಾವತ್, ಪ್ರಸ್ತುತ ನೆದರ್‌ಲ್ಯಾಂಡ್ಸ್‌ನಲ್ಲಿ ಭಾರತದ ರಾಯಭಾರಿಯಾಗಿದ್ದಾರೆ.

ಬ್ರಿಟನ್ ವಿಜ್ಞಾನಿಗಳ ಅಧ್ಯಯನ ವರದಿಯಲ್ಲಿ ಉಲ್ಲೇಖ

'ಓಮೈಕ್ರಾನ್ ತೀವ್ರತೆ ಕಡಿಮೆ ಎಂಬುದಕ್ಕೆ ಪುರಾವೆ ಇಲ್ಲ'

ಲಂಡನ್ (ಪಿಟಿಐ): 'ಡೆಲ್ಟಾ ತಳಿಯಿಂದ ತಗುಲಿದ ಕೋವಿಡ್‌ನ ತೀವ್ರತೆಗಿಂತ, ಓಮೈಕ್ರಾನ್ ರೂಪಾಂತರ ತಳಿಯಿಂದ ತಗುಲಿದ ಕೋವಿಡ್‌ನ ತೀವ್ರತೆಯು ಕಡಿಮೆ ಇರುತ್ತದೆ ಎಂಬುದನ್ನು ಸಾಬೀತು ಮಾಡಲು ಯಾವುದೇ ಪುರಾವೆಗಳು ಇಲ್ಲ' ಎಂದು ಲಂಡನ್‌ನ ಇಂಪೀರಿಯಲ್ ಕಾಲೇಜ್ ನಡೆಸಿದ ಅಧ್ಯಯನ ವರದಿಯು ಹೇಳಿದೆ.

ನವೆಂಬರ್ 29ರಿಂದ ಡಿಸೆಂಬರ್ 11ರ ನಡುವೆ ಬ್ರಿಟನ್‌ನಲ್ಲಿ ಪತ್ತೆಯಾದ ಕೋವಿಡ್ ಮತ್ತು ಓಮೈಕ್ರಾನ್ ಕೋವಿಡ್ ಪ್ರಕರಣಗಳ ಅಧ್ಯಯನ ನಡೆಸಲಾಗಿತ್ತು. 'ಡೆಲ್ಟಾ ತಳಿಯಿಂದ ಉಂಟಾಗುವ ಮರುಸೋಂಕಿನ ಪ್ರಮಾಣಕ್ಕಿಂತ, ಓಮೈಕ್ರಾನ್ ತಳಿಯ ಮರುಸೋಂಕು ಪ್ರಮಾಣ 5.4 ಪಟ್ಟು ಹೆಚ್ಚು. ಜತೆಗೆ ಈ ಹಿಂದೆ ಸೋಂಕಿಗೆ ಒಳಗಾಗಿದ್ದವರಿಗೆ ಮತ್ತು ಲಸಿಕೆಯ ಎರಡೂ ಡೋಸ್ ಪಡೆದುಕೊಂಡಿದ್ದವರಿಗೆ ಓಮೈಕ್ರಾನ್‌ನಿಂದ ರಕ್ಷಣೆ ಸಿಗುವ ಸಾಧ್ಯತೆ ಶೇ 19ರಷ್ಟು ಮಾತ್ರ. ಹೀಗಾಗಿ ಓಮೈಕ್ರಾನ್ ವ್ಯಾಪಕವಾಗಿ ಹರಡುವ ಅಪಾಯವಿದೆ' ಎಂದು ಅಧ್ಯಯನ ವರದಿಯು ಹೇಳಿದೆ.

'ಓಮೈಕ್ರಾನ್‌ನಿಂದ ತಗುಲಿದ ಕೋವಿಡ್‌ನ ತೀವ್ರತೆ ಈಗ ಕಡಿಮೆ ಇರುವಂತೆ ಭಾಸವಾಗುತ್ತಿದೆ. ಓಮೈಕ್ರಾನ್ ರೋಗಿಗಳು ಆಸ್ಪತ್ರೆಗೆ ದಾಖಲಾಗುವ ಪ್ರಮಾಣವೂ ಈಗ ಕಡಿಮೆ ಇದೆ. ಆದರೆ ಮುಂದಿನ ದಿನಗಳಲ್ಲಿ ಇದು ಬದಲಾಗುವ ಅಪಾಯ ಇದೆ' ಎಂದು ವರದಿಯು ಹೇಳಿದೆ.

'ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಅವಧಿಯಲ್ಲಿ ಬ್ರಿಟನ್‌ನಲ್ಲಿ ಪತ್ತೆಯಾದ ಕೋವಿಡ್ ಪ್ರಕರಣಗಳಲ್ಲಿ ಓಮೈಕ್ರಾನ್ ಪ್ರಕರಣಗಳ ಪ್ರಮಾಣ ಗಣನೀಯವಾಗಿಯೇ ಇತ್ತು. ಆದರೆ, ಪ್ರತಿ ಎರಡು ದಿನಕ್ಕೊಮ್ಮೆ ಓಮೈಕ್ರಾನ್ ಪ್ರಕರಣಗಳ ಸಂಖ್ಯೆ ದುಪ್ಪಟ್ಟಾಗುತ್ತಿತ್ತು. ಓಮೈಕ್ರಾನ್‌ನ ಮರುಸೋಂಕು (ಒಬ್ಬರಿಂದ ಮತ್ತೊಬ್ಬರಿಗೆ ಹರಡುವಿಕೆ) ಸಂಖ್ಯೆಯು 3ರಷ್ಟಿದೆ. ಇದು ಅಪಾಯಕಾರಿ' ಎಂದು ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಒಂದೇ ದಿನ 12,133 ಪ್ರಕರಣಗಳು: ಕೋವಿಡ್ ಪ್ರಕರಣಗಳ ಏರಿಕೆ ಮತ್ತು ಓಮೈಕ್ರಾನ್ ಪ್ರಕರಣಗಳನ್ನು ತಡೆಯುವ ಉದ್ದೇಶದಿಂದ ಮತ್ತೆ ಲಾಕ್‌ಡೌನ್ ಹೇರುವ ಬಗ್ಗೆ ಬ್ರಿಟನ್ ಸರ್ಕಾರ ಚಿಂತನೆ ನಡೆಸಿದೆ. ಅಲ್ಲಿ ಓಮೈಕ್ರಾನ್ ಸೋಂಕಿನ 12,133 ಪ್ರಕರಣಗಳು ಸೋಮವಾರ ದೃಢಪಟ್ಟಿವೆ.

ಇದು ಬ್ರಿಟನ್‌ನಲ್ಲಿ ಒಂದು ದಿನ ಪತ್ತೆಯಾದ ಓಮೈಕ್ರಾನ್ ಗರಿಷ್ಠ ಪ್ರಕರಣಗಳು.

'ಲಸಿಕೆಗಳನ್ನು ಮಾರ್ಪಡಿಸಬಹುದು'

ಪುಣೆ (ಪಿಟಿಐ): 'ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿಗಳ ವಿರುದ್ಧ ಕೆಲಸ ಮಾಡುವ ರೀತಿಯಲ್ಲಿ, ಈಗ ಬಳಕೆಯಲ್ಲಿರುವ ಲಸಿಕೆಗಳನ್ನು ಮಾರ್ಪಡಿಸಬಹುದು' ಎಂದು ದೆಹಲಿ ಏಮ್ಸ್ ನಿರ್ದೇಶಕ ಡಾ.ರಣದೀಪ್ ಗುಲೇರಿಯಾ ಹೇಳಿದ್ದಾರೆ.

'ಓಮೈಕ್ರಾನ್ ಹರಡುತ್ತಿರುವ ಬಗೆಯನ್ನು ಗಮನಿಸಿದರೆ, ಮುಂದಿನ ಕೆಲವು ವಾರಗಳು ಅತ್ಯಂತ ಮಹತ್ವದ್ದು. ಇದು ವ್ಯಾಪಕವಾಗಿ ಹರಡುತ್ತಿದೆಯಾದರೂ, ಕೋವಿಡ್ ಲಕ್ಷಣ ಮತ್ತು ರೋಗಗಳ ತೀವ್ರತೆ ಕಡಿಮೆ ಇದೆ ಎಂಬುದೇ ಒಂದು ಆಶಾಕಿರಣ. ಈಗ ಬಳಕೆಯಲ್ಲಿರುವ ಲಸಿಕೆಗಳು ಪರಿಣಾಮಕಾರಿಯಾಗಿವೆ. ಆದರೆ ಹೊಸ ರೂಪಾಂತರ ತಳಿಗಳು ಬಂದಹಾಗೆ, ಲಸಿಕೆಯಿಂದ ದೊರೆತಿರುವ ರೋಗನಿರೋಧಕ ಶಕ್ತಿ ಕುಂದುತ್ತದೆ. ಆದರೆ ಈಗ ಬಳಕೆಯಲ್ಲಿರುವ ಲಸಿಕೆಗಳನ್ನು ಮಾರ್ಪಡಿಸಬಹುದು ಎಂಬುದನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು' ಎಂದು ಅವರು ಹೇಳಿದ್ದಾರೆ.

ಓಮೈಕ್ರಾನ್ ಎದುರಿಸಲು ಸರ್ಕಾರ ಸಿದ್ಧವಾಗಿದೆ. ದೇಶದ ಮಾಸಿಕ ಕೋವಿಡ್ ಲಸಿಕೆ ತಯಾರಿಕೆ ಸಾಮರ್ಥ್ಯವನ್ನು 31 ಕೋಟಿಯಿಂದ 45 ಕೋಟಿಗೆ ಹೆಚ್ಚಿಸುತ್ತೇವೆ
ಮನ್ಸುಖ್ ಮಾಂಡವೀಯ, ಕೇಂದ್ರ ಆರೋಗ್ಯ ಸಚಿವ

ಭಾರತದಲ್ಲಿ ಓಮೈಕ್ರಾನ್ ಹರಡುವಿಕೆ ತೀವ್ರ, ಲಸಿಕೆಯ ಪ್ರತಿರೋಧವನ್ನು ತಪ್ಪಿಸುತ್ತದೆ ಮತ್ತು ರೋಗದ ತೀವ್ರತೆ ಹೆಚ್ಚು ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ
ಭಾರತೀಯ ಸಾರ್ಸ್‌ಕೋವ್–2 ಜಿನೋಮಿಕ್ಸ್ ಕನ್ಸೋರ್ಷಿಯಂ

19 ವಿದ್ಯಾರ್ಥಿನಿಯರಿಗೆ ಕೋವಿಡ್

ಕಾರವಾರ: ಜೊಯಿಡಾ ತಾಲ್ಲೂಕಿನ ರಾಮನಗರದಲ್ಲಿರುವ ಕಿತ್ತೂರ ಚನ್ನಮ್ಮ ಬಾಲಕಿಯರ ವಸತಿ ನಿಲಯದಲ್ಲಿ 19 ವಿದ್ಯಾರ್ಥಿನಿಯರಿಗೆ ಕೋವಿಡ್–19 ದೃಢಪಟ್ಟಿದೆ. ವಸತಿ ನಿಲಯವನ್ನು 'ನಿರ್ಬಂಧಿತ ವಲಯ' ಎಂದು ಘೋಷಿಸಲಾಗಿದೆ.

ಇಲ್ಲಿಗೆ ಸೋಮವಾರ ಭೇಟಿ ನೀಡಿದ ಉಪ ವಿಭಾಗಾಧಿಕಾರಿ ವಿದ್ಯಾಶ್ರೀ ಚಂದರಗಿ, ಸೋಂಕಿತರಿಗೆ ವಸತಿ ನಿಲಯದ ಮೇಲಿನ ಮಹಡಿಯಲ್ಲಿ ಉಳಿದುಕೊಳ್ಳಲು ಪ್ರತ್ಯೇಕ ವ್ಯವಸ್ಥೆ ಮಾಡುವಂತೆ ತಾಲ್ಲೂಕು ಆರೋಗ್ಯಾಧಿಕಾರಿಗೆ ನಿರ್ದೇಶನ ನೀಡಿದರು.

'ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯದ ಎಲ್ಲ ವಿದ್ಯಾರ್ಥಿಗಳ ಆರ್‌.ಟಿ.ಪಿ.ಸಿ.ಆರ್ ಪರೀಕ್ಷೆ ಮಾಡಿಸಬೇಕು. ವಸತಿ ನಿಲಯವನ್ನು ಪ್ರತಿದಿನ ಸ್ಯಾನಿಟೈಸ್ ಮಾಡಬೇಕು. ಸೋಂಕಿತರಿಗೆ ಜೊಯಿಡಾ ತಾಲ್ಲೂಕು ಆಸ್ಪತ್ರೆ ಮತ್ತು ರಾಮನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೂಕ್ತ ಚಿಕಿತ್ಸೆ ನೀಡಬೇಕು' ಎಂದು ಸೂಚಿಸಿದರು.

- ಭಾರತ್ ಬಯೊಟೆಕ್ ಅಭಿವೃದ್ಧಿಪಡಿಸಿರುವ, ಮೂಗಿನ ಮೂಲಕ ನೀಡುವ ಲಸಿಕೆಯನ್ನು ಬೂಸ್ಟರ್ ಡೋಸ್‌ನಂತೆ ಬಳಸುವ ಉದ್ದೇಶದಿಂದ 3ನೇ ಹಂತದ ಕ್ರಿನಿಕಲ್ ಪ್ರಯೋಗ ನಡೆಸಲು ಅನುಮತಿ ನೀಡಿ ಎಂದು ಕಂಪನಿಯು ಭಾರತೀಯ ಪ್ರಧಾನ ಔಷಧ ನಿಯಂತ್ರಕರಿಗೆ ಅರ್ಜಿ ಸಲ್ಲಿಸಿದೆ
- ಓಮೈಕ್ರಾನ್ ತಡೆಗಟ್ಟಲು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ತಜ್ಞರ ಸಮಿತಿಯು ಜರ್ಮನ್ ಸರ್ಕಾರಕ್ಕೆ ಸಲಹೆ ನೀಡಿದೆ

ಐಶ್ವರ್ಯಾ ರೈ ವಿಚಾರಣೆ ನಡೆಸಿದ ಇ.ಡಿ


ಇ.ಡಿ ವಿಚಾರಣೆ ಮುಗಿಸಿ ಹೊರಬಂದ ಐಶ್ವರ್ಯಾ ರೈ–ಪಿಟಿಐ ಚಿತ್ರ

ನವದೆಹಲಿ: ಬಾಲಿವುಡ್ ನಟಿ ಐಶ್ವರ್ಯಾ ರೈ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) 'ಪನಾಮ ದಾಖಲೆ' ಸೋರಿಕೆ ಪ್ರಕರಣದಲ್ಲಿ ಸೋಮವಾರ ಆರು ಗಂಟೆ ವಿಚಾರಣೆ ನಡೆಸಿತು.

ಅಭಿಷೇಕ್ ಬಚ್ಚನ್ ಅವರನ್ನು ವಿಚಾರಣೆಗೆ ಒಳಪಡಿಸಿದ ಕೆಲವು ವಾರದ ಅಂತರದಲ್ಲಿ ಅವರ ಪತ್ನಿಯನ್ನೂ ವಿಚಾರಣೆಗೆ ಕರೆಯಲಾಗಿತ್ತು. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಅಡಿಯಲ್ಲಿ ಐಶ್ವರ್ಯಾ ರೈ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು ಎಂದು ಮೂಲಗಳು ತಿಳಿಸಿವೆ.

ಇಲ್ಲಿನ ಜಾಮ್ ನಗರದಲ್ಲಿರುವ ಇ.ಡಿ. ಕೇಂದ್ರ ಕಚೇರಿಯಲ್ಲಿ ವಿಚಾರಣೆ ಎದುರಿಸಿದ ಅವರು ಸಂಜೆ 7 ಗಂಟೆಗೆ ಅಲ್ಲಿಂದ ಹೊರಬಂದರು. ಹೊರಗಡೆ ಕಾದಿದ್ದ ಮಾಧ್ಯಮದವರಿಗೆ ಯಾವುದೇ ಪ್ರತಿಕ್ರಿಯೆ ನೀಡದೇ ಹೊರಟುಹೋದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ದಾಖಲೆಗಳನ್ನು ಅವರು ಅಧಿಕಾರಿಗಳಿಗೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿದೇಶದ ಕಂಪನಿಗಳಲ್ಲಿ ಹಣ ತೊಡಗಿಸಿರುವ ನಾಯಕರು ಹಾಗೂ ಖ್ಯಾತನಾಮರ ಹೆಸರನ್ನು ವಾಷಿಂಗ್ಟನ್ ಮೂಲದ ಅಂತರರಾಷ್ಟ್ರೀಯ ಪತ್ರಕರ್ತರ ತನಿಖಾ ಒಕ್ಕೂಟ 2016ರಲ್ಲಿ ಬಹಿರಂಗಪಡಿಸಿತ್ತು.

ನವದೆಹಲಿಯಲ್ಲಿ ಜನವರಿ 11ರಿಂದ ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಸಿಂಧು, ಶ್ರೀಕಾಂತ್‌ಗೆ ಅಗ್ರಶ್ರೇಯಾಂಕ

ನವದೆಹಲಿ (ಪಿಟಿಐ): ಭಾರತದ ಪಿ.ವಿ.ಸಿಂಧು ಹಾಗೂ ಕಿದಂಬಿ ಶ್ರೀಕಾಂತ್ ಅವರು ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಗೆ ಕ್ರಮವಾಗಿ ಮಹಿಳಾ ಮತ್ತು ಪುರುಷರ ಸಿಂಗಲ್ಸ್ ವಿಭಾಗಗಳಲ್ಲಿ ಅಗ್ರಶ್ರೇಯಾಂಕ ಪಡೆದಿದ್ದಾರೆ.

ಮುಂದಿನ ವರ್ಷ ಜನವರಿ 11ರಿಂದ 16ರವರೆಗೆ ದೇಶದ ರಾಜಧಾನಿಯಲ್ಲಿ ಈ ಟೂರ್ನಿ ನಿಗದಿಯಾಗಿದೆ. ಲಕ್ಷ್ಯ ಸೇನ್ ಮತ್ತು ವಿಶ್ವ ಚಾಂಪಿಯನ್ ಆಟಗಾರ ಸಿಂಗಪುರದ ಲೋಹ್ ಕೀನ್ ಯಿವ್ ಕೂಡ ಟೂರ್ನಿಯ ಪ್ರಮುಖ ಆಕರ್ಷಣೆಯಾಗಲಿದ್ದಾರೆ.

ಬಿಡಬ್ಲ್ಯುಎಫ್ ವಿಶ್ವ ಟೂರ್ ಸೂಪರ್ 500ನ ಭಾಗವಾಗಿ ನಡೆಯಲಿರುವ ಟೂರ್ನಿಗೆ ಕೋವಿಡ್ ಹಿನ್ನೆಲೆಯಲ್ಲಿ ಪ್ರೇಕ್ಷಕರಿಗೆ ನಿರ್ಬಂಧ ವಿಧಿಸಲಾಗಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಬಿ.ಸಾಯಿ ಪ್ರಣೀತ್ ಅವರಿಗೆ ಎರಡನೇ ಶ್ರೇಯಾಂಕ ನೀಡಲಾಗಿದೆ. ಎಚ್.ಎಸ್. ಪ್ರಣಯ್, ಪರುಪಳ್ಳಿ ಕಶ್ಯಪ್, ಸಮೀರ್ ವರ್ಮಾ ಮತ್ತು ಇಂಡೊನೇಷ್ಯಾದ ಟಾಮಿ ಸುಗಿಯರ್ತೊ ಕೂಡ ಕಣಕ್ಕಿಳಿಯಲಿದ್ದಾರೆ.



ಪಿ.ವಿ.ಸಿಂಧು– ಎಎಫ್‌ಪಿ ಚಿತ್ರ

ಶ್ರೀಕಾಂತ್‌ಗೆ ಪ್ರಧಾನಿ ಅಭಿನಂದನೆ

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗಳಿಸಿರುವ ಕಿದಂಬಿ ಶ್ರೀಕಾಂತ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಅವರ ಈ ಸಾಧನೆಯು ಭವಿಷ್ಯದ ಕ್ರೀಡಾಪಟುಗಳಿಗೆ ಭರವಸೆ ತುಂಬಲಿದ್ದು ದೇಶದಲ್ಲಿ ಬ್ಯಾಡ್ಮಿಂಟನ್ ಕ್ರೀಡೆಯ ಬೆಳವಣಿಗೆಗೆ ನೆರವಾಗಲಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಅಥ್ಲೀಟ್‌ಗಳ ಆಯೋಗಕ್ಕೆ ಸಿಂಧು

ನವದೆಹಲಿ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ, ಭಾರತದ ಪಿ.ವಿ. ಸಿಂಧು ಅವರು ಸೋಮವಾರ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಅಥ್ಲೀಟ್‌ಗಳ ಆಯೋಗದ ಸದಸ್ಯೆಯಾಗಿ ನೇಮಕವಾಗಿದ್ದಾರೆ.

ಮಾಜಿ ವಿಶ್ವ ಚಾಂಪಿಯನ್ ಸಿಂಧು ಸೇರಿ ಆರು ಮಂದಿ ನೇಮಕವಾಗಿದೆ.

‘2021-2025ರ ಅವಧಿಗೆ ಅಥ್ಲೀಟ್‌ಗಳ ಆಯೋಗಕ್ಕೆ ಐರಿಸ್ ವಾಂಗ್ (ಅಮೆರಿಕ), ರಾಬಿನ್ ಟೇಬೆಲಿಂಗ್ (ನೆದರ್ಲೆಂಡ್ಸ್), ಗ್ರೇಸಿಯಾ ಪೋಲಿ (ಇಂಡೊನೇಷ್ಯಾ), ಕಿಮ್ ಸೊಯೊಂಗ್ (ಕೊರಿಯಾ), ಪಿ.ವಿ. ಸಿಂಧು (ಭಾರತ), ಜೆಂಗ್ ಸಿ ವೇ (ಚೀನಾ) ಅವರನ್ನು ನೇಮಿಸಲಾಗಿದೆ’ ಎಂದು ಬಿಡಬ್ಲ್ಯುಎಫ್ ಹೇಳಿದೆ.

ಹಾಕಿ: ಫೈನಲ್‌ನತ್ತ ಭಾರತದ ಚಿತ್ತ

ಏಷ್ಯನ್ ಚಾಂಪಿಯನ್ಸ್ ಟ್ರೋಫಿ: ಜಪಾನ್ ಎದುರು ಸೆಮಿಫೈನಲ್

ಢಾಕಾ (ಪಿಟಿಐ): ನಿಧಾನಗತಿಯ ಆರಂಭ ಪಡೆದು ಭರ್ಜರಿ ಲಯದೊಂದಿಗೆ ಮುನ್ನುಗ್ಗಿರುವ ಹಾಲಿ ಚಾಂಪಿಯನ್ ಭಾರತ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಸೆಮಿಫೈನಲ್ ನಲ್ಲಿ ಮಂಗಳವಾರ ಜಪಾನ್ ಸವಾಲು ಎದುರಿಸಲಿದೆ.

ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಜಪಾನ್ ವಿರುದ್ಧ ಟೂರ್ನಿಯ ಕೊನೆಯ ಲೀಗ್ ಪಂದ್ಯ ಆಡಿದ್ದ ಮನ್‌ಪ್ರೀತ್ ಸಿಂಗ್ ಪಡೆ 6–0ಯಿಂದ ಜಯ ಸಾಧಿಸಿತ್ತು. ಹೀಗಾಗಿ ಫೈನಲ್ ತಲುಪುವ ಹಾದಿಯಲ್ಲಿ ತುಸು ಹೆಚ್ಚೇ ಆತ್ಮವಿಶ್ವಾಸದಲ್ಲಿದೆ. ಆದರೂ ಎಚ್ಚರಿಕೆಯಿಂದ ಆಡುವುದು ಅಗತ್ಯವಾಗಿದೆ.

ಐದು ತಂಡಗಳ ಟೂರ್ನಿಯ ರೌಂಡ್ ರಾಬಿನ್ ಲೀಗ್ ಹಂತವನ್ನು ಭಾರತ 10 ಪಾಯಿಂಟ್ಸ್ ಗಳಿಸಿ ಮೊದಲ ಸ್ಥಾನದೊಂದಿಗೆ ಕೊನೆಗೊಳಿಸಿತ್ತು.

ಟೋಕಿಯೊ ಒಲಿಂಪಿಕ್ಸ್ ಬಳಿಕ ಮೊದಲ ಟೂರ್ನಿಯಲ್ಲಿ ಕಣಕ್ಕಿಳಿದಿರುವ ಭಾರತ, ಮೊದಲ ಪಂದ್ಯದಲ್ಲಿ 2–2ರಿಂದ ಕೊರಿಯಾದೊಂದಿಗೆ ಡ್ರಾ ಸಾಧಿಸಿತ್ತು. ಆದರೆ ಬಳಿಕ ಬಾಂಗ್ಲಾದೇಶ ವಿರುದ್ಧ 9–0ಯಿಂದ, ಪಾಕಿಸ್ತಾನ ಎದುರು 3–1ರಿಂದ ಗೆಲುವು ಸಾಧಿಸಿತ್ತು.



ಭಾರತ ತಂಡದ ಆಟಗಾರರು– ಎಎಫ್‌ಪಿ ಚಿತ್ರ

ಜಪಾನ್ ಎದುರಿನ ಲೀಗ್ ಪಂದ್ಯದಲ್ಲಿ ಎರಡು ಗೋಲು ಗಳಿಸಿ ಮಿಂಚಿರುವ ಹರ್ಮನ್‌ಪ್ರೀತ್, ಸಹಜವಾಗಿಯೇ ತಂಡದ ಶಕ್ತಿಯಾಗಿದ್ದಾರೆ. ಮನ್‌ಪ್ರೀತ್ ಹಾಗೂ ಹಾರ್ದಿಕ್ ಸಿಂಗ್ ಅವರನ್ನೊಳಗೊಂಡ ಮಿಡ್‌ಫೀಲ್ಡ್ ಕೂಡ ಬಲಿಷ್ಠವಾಗಿದೆ.

ಕೆಲವು ಸೊಗಸಾದ ಫೀಲ್ಡ್ ಗೋಲುಗಳನ್ನು ದಾಖಲಿಸಿರುವ ದಿಲ್‌ಪ್ರೀತ್ ಸಿಂಗ್, ಜರ್ಮನ್‌ಪ್ರೀತ್ ಸಿಂಗ್, ಆಕಾಶ್‌ದೀಪ್ ಸಿಂಗ್ ಮತ್ತು ಶಂಷೇರ್ ಸಿಂಗ್ ಅವರನ್ನೊಳಗೊಂಡ ಫಾರ್ವರ್ಡ್ ಆಟಗಾರರ ಬಳಗ ಕೂಡ ಲಯದಲ್ಲಿದೆ. ನಿಯಮಿತ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರ ಅನುಪಸ್ಥಿತಿಯಲ್ಲಿ ಕಣಕ್ಕಿಳಿದಿರುವ ಯುವ ಆಟಗಾರ ಸೂರಜ್ ಕರ್ಕೇರಾ ಅದ್ಭುತ ಸಾಮರ್ಥ್ಯ ತೋರುತ್ತಿದ್ದಾರೆ.

ಪಂದ್ಯ ಆರಂಭ: ಸಂಜೆ 6

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಕಿಸ್ತಾನ–ದಕ್ಷಿಣ ಕೊರಿಯಾ

ಆರಂಭ: ಮಧ್ಯಾಹ್ನ 3.30

ಈಜು: ಮತ್ತೆ ಮಿಂಚಿದ ಶ್ರೀಹರಿ

ಅಬುಧಾಬಿ (ಪಿಟಿಐ): ಭಾರತದ ಶ್ರೀಹರಿ ನಟರಾಜ್ ಅವರು ಫಿನಾ ಶಾರ್ಟ್‌ಕೋರ್ಸ್ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ ದಾಖಲೆಯ ಓಟವನ್ನು ಮುಂದುವರಿಸಿದ್ದಾರೆ.



ಶ್ರೀಹರಿ ನಟರಾಜ್

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕದ ಈಜುಪಟು ಮೂರನೇ ಬಾರಿ ‘ಭಾರತದ ಶ್ರೇಷ್ಠ ಸಮಯ’ ದಾಖಲಿಸಿದರು.

ಒಲಿಂಪಿಯನ್, 20 ವರ್ಷದ ಶ್ರೀಹರಿ 100 ಮೀಟರ್ಸ್ ಫ್ರೀಸ್ಟೈಲ್ ವಿಭಾಗದಲ್ಲಿ 48.65 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಆ ಮೂಲಕ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಸಜನ್ ಪ್ರಕಾಶ್ ನಿರ್ಮಿಸಿದ್ದ ದಾಖಲೆಯನ್ನು ಮೀರಿದರು. ಆದರೆ ಈ ವಿಭಾಗದ ಹೀಟ್ಸ್‌ನಲ್ಲಿ ಒಟ್ಟಾರೆ 38ನೇ ಸ್ಥಾನ ಗಳಿಸಿದ ಶ್ರೀಹರಿ ಸೆಮಿಫೈನಲ್ ತಲುಪುವಲ್ಲಿ ವಿಫಲರಾದರು.

ಅಗ್ರ 16 ಈಜುಪಟುಗಳಿಗೆ ಮಾತ್ರ ಸೆಮಿಫೈನಲ್ ಪ್ರವೇಶದ ಅವಕಾಶ ಇತ್ತು.

ಶ್ರೀಹರಿ ಕಳೆದ ವಾರ 50 ಮೀ. ಮತ್ತು 100 ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗಗಳಲ್ಲಿ’ ಭಾರತದ ಶ್ರೇಷ್ಠ ಸಮಯ ದಾಖಲಿಸಿದ್ದರು.

ಆ್ಯಷಸ್ 2ನೇ ಟೆಸ್ಟ್: ರಿಚರ್ಡ್ಸನ್‌ಗೆ 5 ವಿಕೆಟ್; ಇಂಗ್ಲೆಂಡ್‌ನ ವೋಕ್ಸ್, ಬಟ್ಲರ್ ದಿಟ್ಟ ಹೋರಾಟ ವ್ಯರ್ಥ

ಪಿಂಕ್‌ಬಾಲ್: ಮುಂದುವರಿದ ಆಸ್ಟ್ರೇಲಿಯಾ ಆಧಿಪತ್ಯ

ಅಡಿಲೇಡ್ (ಎಎಫ್‌ಪಿ): ಇಂಗ್ಲೆಂಡ್ ಬ್ಯಾಟಿಂಗ್ ಪಡೆಯ ಮೇಲೆ ಮತ್ತೊಮ್ಮೆ ಆಧಿಪತ್ಯ ಸ್ಥಾಪಿಸಿದ ಆಸ್ಟ್ರೇಲಿಯಾದ ಬೌಲರ್‌ಗಳು ಆ್ಯಷಸ್ ಟೆಸ್ಟ್ ಸರಣಿಯ ಎರಡನೇ ಪಂದ್ಯದಲ್ಲೂ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು.

ಸೋಮವಾರ ಮುಕ್ತಾಯಗೊಂಡ ಪಂದ್ಯದಲ್ಲಿ ಆತಿಥೇಯರು 275 ರನ್‌ಗಳ ಜಯ ಸಾಧಿಸಿದರು. ಈ ಮೂಲಕ 5 ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿದರು. ‘ಪಿಂಕ್ ಬಾಲ್’ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾದ ಆಧಿಪತ್ಯ ಮುಂದುವರಿದಿದ್ದು ಈ ವರೆಗೆ ಆಡಿದ ಎಲ್ಲ 9 ಪಂದ್ಯಗಳನ್ನೂ ಗೆದ್ದಂತಾಯಿತು.

468 ರನ್‌ಗಳ ಗುರಿ ಬೆನ್ನತ್ತಿದ ಇಂಗ್ಲೆಂಡ್ 192 ರನ್‌ಗಳಿಗೆ ಪತನ ಕಂಡಿತು. 207 ಎಸೆತಗಳಲ್ಲಿ 26 ರನ್ ಗಳಿಸಿದ ವಿಕೆಟ್ ಕೀಪರ್ ಜೋಸ್ ಬಟ್ಲರ್ ಮತ್ತು 97 ಎಸೆತಗಳಲ್ಲಿ 7 ಬೌಂಡರಿಗಳೊಂದಿಗೆ 44 ರನ್ ಕಲೆ ಹಾಕಿದ 8ನೇ ಕ್ರಮಾಂಕದ ಬ್ಯಾಟರ್ ಕ್ರಿಸ್ ವೋಕ್ಸ್ ಪಂದ್ಯವನ್ನು ಡ್ರಾ ಮಾಡಿಕೊಳ್ಳಲು ನಡೆಸಿದ ಶ್ರಮ ವ್ಯರ್ಥವಾಯಿತು.

ಇಂಗ್ಲೆಂಡ್ ನಾಲ್ಕನೇ ದಿನವಾದ ಭಾನುವಾರ 82 ರನ್ ಗಳಿಸುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡಿತ್ತು.



ಜೇ ರಿಚರ್ಡ್ಸನ್ –ಎಎಫ್‌ಪಿ ಚಿತ್ರ

ಹೀಗಾಗಿ ಆತಂಕದಲ್ಲೇ ಕೊನೆಯ ದಿನ ಕಣಕ್ಕೆ ಇಳಿದಿತ್ತು. ಆದರೆ ಬೆನ್ ಸ್ಟೋಕ್ಸ್, ಜೋಸ್ ಬಟ್ಲರ್ ಮತ್ತು ಕ್ರಿಸ್ ವೋಕ್ಸ್ ಅವರ ಹೋರಾಟದಿಂದಾಗಿ ಕೊನೆಯ ಅವಧಿಯ ವರೆಗೆ ಪಂದ್ಯವನ್ನು ಕೊಂಡೊಯ್ಯಲು ಸಾಧ್ಯವಾಯಿತು. ನಾಯಕ ಪ್ಯಾಟ್ ಕಮಿನ್ಸ್ ಬದಲಿಗೆ ಈ ಪಂದ್ಯದಲ್ಲಿ ಆಡಿದ ಜೇ ರಿಚರ್ಡ್ಸನ್ 5 ವಿಕೆಟ್ ಉರುಳಿಸಿ ಮಿಂಚಿದರು.

ಅನೇಕ ಪಂದ್ಯಗಳಲ್ಲಿ ತಂಡವನ್ನು ಕಾಪಾಡಿದ್ದ ಜಗತ್ತಿನ ಒಂದನೇ ಕ್ರಮಾಂಕದ ಟೆಸ್ಟ್ ಬ್ಯಾಟ್ಸ್‌ಮನ್ ಜೋ ರೂಟ್ ಕ್ರೀಸ್‌ನಲ್ಲಿ ಇರುವವರೆಗೂ ಇಂಗ್ಲೆಂಡ್ ಪಾಳಯದಲ್ಲಿ ಭರವಸೆ ಇತ್ತು. ಆದರೆ ಅವರನ್ನು 4ನೇ ದಿನದ ಕೊನೆಯ ಓವರ್‌ನಲ್ಲಿ ಔಟ್ ಮಾಡುವುದರೊಂದಿಗೆ ಆಸ್ಟ್ರೇಲಿಯಾ ಸುಲಭ ಜಯಕ್ಕೆ ಸಿದ್ಧವಾಗಿತ್ತು. ಒಲಿ ಪೋಪ್ ಬೇಗನೇ ಮರಳಿದರು. ಜೋಸ್ ಬಟ್ಲರ್ ಮತ್ತು ಕ್ರಿಸ್ ವೋಕ್ಸ್ 61 ರನ್‌ಗಳ ಜೊತೆಯಾಟದ ಮೂಲಕ ಆಸ್ಟ್ರೇಲಿಯಾ ಬೌಲರ್‌ಗಳನ್ನು ಕಾಡಿದರು. ವೋಕ್ಸ್ ಅವರ ಸ್ಟಂಪ್ಸ್ ಎಗರಿಸಿ ರಿಚರ್ಡ್ಸನ್ ಈ ಜೊತೆಯಾಟ ಮುರಿದರು. ನೇಥನ್ ಲಯನ್ ಎಸೆತದಲ್ಲಿ ಒಲಿ ರಾಬಿನ್ಸನ್ ಅವರನ್ನು ಔಟ್ ಮಾಡಿದ ಸ್ಮಿತ್ ಪಂದ್ಯದಲ್ಲಿ ಆರನೇ ಕ್ಯಾಚ್ ಪಡೆದ ಸಾಧನೆ ಮಾಡಿದರು. ಬಟ್ಲರ್ ಔಟಾಗುವುದರೊಂದಿಗೆ ಆಸ್ಟ್ರೇಲಿಯಾದ ಸುಲಭ ಜಯಕ್ಕೆ ನಾಂದಿಯಾಯಿತು.

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ ಮೊದಲ ಇನಿಂಗ್ಸ್ 9ಕ್ಕೆ 473 ಡಿಕ್ಲೇರ್ಡ್ (150.4 ಓವರ್)
ಇಂಗ್ಲೆಂಡ್ ಮೊದಲ ಇನಿಂಗ್ಸ್ 236 (84.1 ಓವರ್‌ಗಳಲ್ಲಿ)
ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್ 9ಕ್ಕೆ 230 ಡಿಕ್ಲೇರ್ (61 ಓವರ್)
ಇಂಗ್ಲೆಂಡ್ 2ನೇ ಇನಿಂಗ್ಸ್ 192 (113.1 ಓವರ್)
(ಭಾನುವಾರ 43.2 ಓವರ್‌ಗಳಲ್ಲಿ 4ಕ್ಕೆ 82)

ಸ್ಟೋಕ್ಸ್ ಎಲ್‌ಬಿಡಬ್ಲ್ಯು ಲಯನ್ 12 (77 ಎ, 4x1), ಪೋಪ್ ಸಿ ಸ್ಮಿತ್ ಬಿ ಸ್ಟಾರ್ಕ್ 4 (7 ಎ, 4x1), ಬಟ್ಲರ್ ಹಿಟ್ ವಿಕೆಟ್ ಬಿ ರಿಚರ್ಡ್ಸನ್ 26 (207 ಎ, 4x2), ವೋಕ್ಸ್ ಬಿ ರಿಚರ್ಡ್ಸನ್ 44 (97 ಎ, 4x7), ರಾಬಿನ್ಸನ್ ಸಿ ಸ್ಮಿತ್ ಬಿ ಲಯನ್ 8 (39 ಎ, 4x1), ಬ್ರಾಡ್ ಔಟಾಗದೆ 9 (31 ಎ, 4x1), ಆ್ಯಂಡರ್ಸನ್ ಸಿ ಗ್ರೀನ್ ಬಿ ರಿಚರ್ಡ್ಸನ್ 2 (5 ಎ)

ಇತರೆ (ಬೈ 2, ಲೆಗ್ ಬೈ 3, ನೋಬಾಲ್ 4) 9

ವಿಕೆಟ್ ಪತನ: 5-86 (ಒಲಿ ಪೋಪ್, 45.3), 6-105 (ಬೆನ್ ಸ್ಟೋಕ್ಸ್, 56.4), 7-166 (ಕ್ರಿಸ್ ವೋಕ್ಸ್, 87.6), 8-178 (ಒಲಿ ರಾಬಿನ್ಸನ್, 102.2), 9-182 (ಬಟ್ಲರ್, 109.6), 10-192 (ಆ್ಯಂಡರ್ಸನ್, 113.1)

ಬೌಲಿಂಗ್: ಮಿಚೆಲ್ ಸ್ಟಾರ್ಕ್ 27–10–43–2, ಜೇ ರಿಚರ್ಡ್ಸನ್ 19.1–9–42–5, ನೇಥನ್ ಲಯನ್ 39–16–55–2, ಮೈಕೆಲ್ ನೆಸೆರ್ 13–5–28–1, ಕ್ಯಾಮರೂನ್ ಗ್ರೀನ್ 9–5–9–0, ಮಾರ್ನಸ್ ಲಾಬುಶೇನ್ 4–2–10–0, ಸ್ಟೀವನ್ ಸ್ಮಿತ್ 1–1–0–0, ಟ್ರಾವಿಸ್ ಹೆಡ್ 1–1–0–0

ಫಲಿತಾಂಶ: ಆಸ್ಟ್ರೇಲಿಯಾಗೆ 275 ರನ್ ಜಯ

ಡ್ರಾ ಪಂದ್ಯದಲ್ಲಿ ಬಿಎಫ್‌ಸಿ– ಜೆಎಫ್‌ಸಿ

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿ

ಬ್ಯಾಂಬೊಲಿಮ್: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡದ ನೀರಸ ಆಟ ಮುಂದುವರಿದಿದೆ. ಏಕೈಕ ಜಯ ಸಾಧಿಸಿರುವ ತಂಡ ಸೋಮವಾರ ನಡೆದ ಪಂದ್ಯದಲ್ಲಿ ಜೆಮ್ಶೆಡ್‌ಪುರ ಎಫ್‌ಸಿ (ಜೆಎಫ್‌ಸಿ) ಜೊತೆ ಗೋಲುರಹಿತ ಡ್ರಾಗೆ ಸಮಾಧಾನಪಟ್ಟುಕೊಂಡಿತು.

ಜೆಎಫ್‌ಸಿ ಆರಂಭದಿಂದಲೇ ಆಕ್ರಮಣಕ್ಕೆ ಮುಂದಾಯಿತು. ನಾಲ್ಕನೇ ನಿಮಿಷದಲ್ಲಿ ನಾಯಕ ಗ್ರೆಗ್ ಸ್ಟಿವರ್ಟ್ ಚೆಂಡಿನೊಂದಿಗೆ ಬಿಎಫ್‌ಸಿ ಆವರಣಕ್ಕೆ ನುಗ್ಗಿದರು. ಆದರೆ ಗೋಲು ಗಳಿಸಲು ಸಾಧ್ಯವಾಗಲಿಲ್ಲ. ಐದನೇ ನಿಮಿಷದಲ್ಲಿ ಬಿಎಫ್‌ಸಿ ಕೂಡ ಆಕ್ರಮಣಕ್ಕೆ ಇಳಿಯಿತು. ಅಜಿತ್ ಕಾಮರಾಜ್ ಬಲಭಾಗದಿಂದ ಮುನ್ನುಗ್ಗಿದರು. ನಂತರ ಉಭಯ ತಂಡಗಳೂ ದಾಳಿ–ಪ್ರತಿದಾಳಿಯ ಮೂಲಕ ಮುನ್ನಡೆಗೆ ಪ್ರಯತ್ನಿಸಿದವು.

ಸುನಿಲ್ ಚೆಟ್ರಿ ಅನುಪಸ್ಥಿತಿಯಲ್ಲಿ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ನಾಯಕತ್ವ ವಹಿಸಿದ್ದ ಬಿ ಎಫ್‌ಸಿ, ಪಂದ್ಯ ಮುಂದುವರಿದಂತೆ ಹಿಡಿತ ಸಾಧಿಸುತ್ತ ಸಾಗಿತು. ಆದರೆ ಎದುರಾಳಿ ತಂಡದ ಗೋಲ್‌ಕೀಪರ್ ರೆಹನೇಶ್ ಅವರ ಅಮೋಘ ಆಟವು ತಂಡದ ಆಸೆಗಳಿಗೆ ಅಡ್ಡಿಯಾಯಿತು. 90ನೇ ನಿಮಿಷ ಲಭಿಸಿದ ಅವಕಾಶವನ್ನು ಇಬಾರ ಕೈಚೆಲ್ಲುವುದರೊಂದಿಗೆ ಬಿಎಫ್‌ಸಿ ಜಯದ ಕನಸು ಭಗ್ನವಾಯಿತು.

ಎಟಿಕೆಎಂಬಿಗೆ ನಾರ್ತ್ ಈಸ್ಟ್ ಸವಾಲು: ಮಡಗಾಂವ್‌ನಲ್ಲಿ ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ ಮತ್ತು ನಾರ್ತ್ ಈಸ್ಟ್ ಯುನೈಟೆಡ್ ತಂಡಗಳು ಮುಖಾಮುಖಿಯಾಗಲಿವೆ.



ಚೆಂಡಿನ ಮೇಲೆ ಹಿಡಿತ ಸಾಧಿಸಲು ಬಿಎಫ್‌ಸಿಯ ಬ್ರೂನೊ ಸಿಲ್ವಾ (ಎಡ) ಮತ್ತು ಜೆಎಫ್‌ಸಿಯ ಅಲೆಕ್ಸಾಂಡರ್ ಡಿ ಲಿಮಾ ಪ್ರಯತ್ನಿಸಿದರು –ಐಎಸ್‌ಎಲ್ ಚಿತ್ರ

ಜುವಾನ್ ಫೆರಾಂಡೊ ಕೈಬಿಟ್ಟ ಗೋವಾ

ಪಣಜಿ (ಪಿಟಿಐ): ಇಂಡಿಯನ್ ಸೂಪರ್ ಲೀಗ್ ಟೂರ್ನಿಯಲ್ಲಿ ಆಡುವ ಎಫ್‌ಸಿ ಗೋವಾ ತಂಡವು ಕೋಚ್ ಜುವಾನ್ ಫೆರಾಂಡೊ ಅವರನ್ನು ಸೋಮವಾರ ಹೊರಹಾಕಿದೆ. ತಂಡವನ್ನು ಜಯದ ಹಾದಿಯಲ್ಲಿ ನಡೆಸಲು ಸಾಧ್ಯವಾಗದೇ ಇರುವುದೇ ಈ ಅಚ್ಚರಿಯ ನಡೆಗೆ ಕಾರಣ ಎನ್ನಲಾಗಿದೆ.

‘ಸುಸ್ತಿದಾರರಿಂದ ₹ 13,100 ಕೋಟಿ ವಸೂಲಿ’


ನವದೆಹಲಿ (ಪಿಟಿಐ): ವಿಜಯ್ ಮಲ್ಯ, ನೀರವ್ ಮೋದಿ ಮತ್ತು ಮೆಹುಲ್ ಚೋಕ್ಸಿ ಅವರಂತಹ ಉದ್ದೇಶಪೂರ್ವಕ ಸುಸ್ತಿದಾರರಿಗೆ ಸೇರಿದ ಆಸ್ತಿಗಳನ್ನು ಮಾರಾಟ ಮಾಡುವ ಮೂಲಕ ಬ್ಯಾಂಕ್‌ಗಳು ₹ 13,109 ಕೋಟಿ ವಸೂಲಿ ಮಾಡಿವೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

ಜಾರಿ ನಿರ್ದೇಶನಾಲಯವು ನೀಡಿರುವ 2021ರ ಜುಲೈವರೆಗಿನ ಮಾಹಿತಿಯ ಪ್ರಕಾರ, ಇಷ್ಟು ಮೊತ್ತದ ಸಾಲ ವಸೂಲಿ ಮಾಡಿರುವುದಾಗಿ ಅವರು ತಿಳಿಸಿದ್ದಾರೆ.

2021ರ ಜುಲೈ 16ರಂದು ಮಲ್ಯ ಅವರಿಗೆ ಸೇರಿದ ಆಸ್ತಿಗಳನ್ನು ಮಾರಾಟ ಮಾಡುವ ಮೂಲಕ ಬ್ಯಾಂಕ್‌ಗಳು ₹ 792 ಕೋಟಿ ವಸೂಲಿ ಮಾಡಿವೆ ಎಂದು ಅವರು ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಏಳು ಹಣಕಾಸು ವರ್ಷಗಳಲ್ಲಿ ₹ 5.49 ಲಕ್ಷ ಕೋಟಿಗಿಂತಲೂ ಹೆಚ್ಚಿನ ಮೊತ್ತ ವಸೂಲಿ ಮಾಡಿವೆ. ದೇಶ ಬಿಟ್ಟು ಓಡಿ ಹೋಗಿರುವ ಉದ್ದೇಶಪೂರ್ವಕ ಸುಸ್ತಿದಾರರಿಂದ ಹಣವನ್ನು ಮರಳಿ ಪಡೆಯಲಾಗಿದೆ. ಅದರಿಂದಾಗಿಯೇ ಬ್ಯಾಂಕ್‌ಗಳು ಇಂದು ಸುರಕ್ಷಿತವಾಗಿವೆ ಎಂದು ಅವರು ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,985
ಇಂದಿನ ಅಂತ್ಯ	16,614
▼	371
ದಿನದ ಗರಿಷ್ಠ	16,410

ವಿನಿಮಯ ದರ

$ ಡಾಲರ್	75.90
£ ಪೌಂಡ್	100.47
€ ಯುರೊ	85.47
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1290 (1310)
ಸೋಯಾ (ರಿಫೈನ್ಡ್)	₹1180 (1188)
ಸೂರ್ಯಕಾಂತಿ (ರಿಫೈನ್ಡ್)	₹1240(1250)
ಪಾಮೋಲಿನ್	₹1146 (1058)

ಕೊಬ್ಬರಿ ಧಾರಣೆ

ತಿಪಟೂರು	₹4500-11500
ತುಮಕೂರು	₹8200-9600
ತುರುವೇಕೆರೆ	₹17900-17900

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹20000-27000
2ನೇ ದರ್ಜೆ ₹10000-18000

ಓಮೈಕ್ರಾನ್: ಷೇರುಪೇಟೆ ತತ್ತರ

ಒಂದನೇ ಪುಟದಿಂದ

ಅಭಿವೃದ್ಧಿ ಹೊಂದಿದ ದೇಶಗಳ ಅರ್ಥ ವ್ಯವಸ್ಥೆಯ ಬೆಳವಣಿಗೆ ದರವು ವೇಗ ಕಳೆದುಕೊಳ್ಳುತ್ತಿರುವುದು ಕೂಡ, ವಿಶ್ವದ ಬಹುತೇಕ ಕಡೆಗಳಲ್ಲಿ ಷೇರು ಮಾರುಕಟ್ಟೆ ಕುಸಿತಕ್ಕೆ ಕಾರಣ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ವಿಶ್ವದ ಹಲವೆಡೆ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಿಸುವ ಕಡೆ ಒಲವು ತೋರುತ್ತಿವೆ. ಇದರಿಂದಾಗಿ ಭಾರತದ ಬಂಡವಾಳ ಮಾರುಕಟ್ಟೆಗಳಿಂದ ಹೂಡಿಕೆ ಹಿಂತೆಗೆತಕ್ಕೆ ವಿದೇಶಿ ಹೂಡಿಕೆದಾರರು ಮುಂದಾಗಿದ್ದಾರೆ. ಭಾರತದ ಬಂಡವಾಳ ಮಾರುಕಟ್ಟೆಯಲ್ಲಿನ ಷೇರುಗಳ ಮೌಲ್ಯವು ಇತರ ದೇಶಗಳಲ್ಲಿನ ಷೇರು ಮೌಲ್ಯಕ್ಕೆ ಹೋಲಿಸಿದರೆ ದುಬಾರಿ ಆಗಿದೆ ಎಂಬ ಅಭಿಪ್ರಾಯವೂ ಇದೆ. ಇನ್ನೊಂದೆಡೆ, ಸಣ್ಣ ಹೂಡಿಕೆದಾರರು ಹೂಡಿಕೆ ಮಾಡುವುದು ಕಡಿಮೆ ಆಗಿದೆ. ಇವೆಲ್ಲವೂ ಮಾರುಕಟ್ಟೆ ಇಳಿಕೆಗೆ ಕಾರಣ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಸಂದರ್ಭದಲ್ಲಿ ಮತ್ತೆ ಲಾಕ್‌ಡೌನ್ ಕ್ರಮಗಳು ಜಾರಿಗೆ ಬರಬಹುದು ಎಂಬ ಭೀತಿಯಿಂದಾಗಿ ಜಾಗತಿಕ ಷೇರು ಮಾರುಕಟ್ಟೆಗಳು ಕುಸಿತದ ಹಾದಿ ಹಿಡಿದವು. ಶಾಂಘೈ, ಹಾಂಗ್‌ಕಾಂಗ್, ಟೋಕಿಯೊ ಮತ್ತು ಸೋಲ್ ಷೇರು ಮಾರುಕಟ್ಟೆಗಳು ಭಾರಿ ಇಳಿಕೆ ಕಂಡವು. ಯುರೋಪಿನ ಷೇರು ಮಾರುಕಟ್ಟೆಗಳು ಕೂಡ ಇಳಿಕೆಯ ಹಾದಿಯಲ್ಲಿ ಇದ್ದವು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ಬೆಲೆಯು ಶೇ 3.51ರಷ್ಟು ಇಳಿಕೆ ಆಗಿ ಬ್ಯಾರಲ್‌ಗೆ 70.94 ಡಾಲರ್‌ಗೆ ತಲುಪಿದೆ.

ವಾಯಿದಾ ವಹಿವಾಟಿಗೆ ನಿರ್ಬಂಧ

ಮುಂಬೈ (ರಾಯಿಟರ್ಸ್): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಪ್ರಮುಖ ಆಹಾರ ಪದಾರ್ಥಗಳ ವಾಯಿದಾ ವಹಿವಾಟಿನ ಮೇಲೆ ಒಂದು ವರ್ಷದ ಅವಧಿಗೆ ನಿರ್ಬಂಧ ಹೇರಿದೆ. ಕೇಂದ್ರ ಸರ್ಕಾರವು ಹಣದುಬ್ಬರ ಪ್ರಮಾಣವನ್ನು ನಿಯಂತ್ರಿಸಲು ಯತ್ನ ನಡೆಸಿರುವ ನಡುವೆಯೇ, ಸೆಬಿ ಈ ಕ್ರಮ ಕೈಗೊಂಡಿದೆ.

2003ರಲ್ಲಿ ವಾಯಿದಾ ವಹಿವಾಟಿಗೆ ಅವಕಾಶ ಕಲ್ಪಿಸಲಾಗಿತ್ತು. ಅದಾದ ನಂತರ ತೆಗೆದುಕೊಂಡಿರುವ ಪ್ರಮುಖ ತೀರ್ಮಾನ ಇದು ಎನ್ನಲಾಗಿದೆ. ಸೋಯಾಬೀನ್, ಸೋಯಾ ಎಣ್ಣೆ, ಕಚ್ಚಾ ತಾಳೆ ಎಣ್ಣೆ, ಗೋಧಿ, ಭತ್ತ, ಕಡಲೆ ಕಾಳು, ಹೆಸರು ಕಾಳು, ಸಾಸಿವೆಯ ವಾಯಿದಾ ವಹಿವಾಟಿಗೆ ನಿರ್ಬಂಧ ವಿಧಿಸಲಾಗಿದೆ.

ದೇಶದಲ್ಲಿ ಅಡುಗೆ ಎಣ್ಣೆ ಬೆಲೆಯು ಗರಿಷ್ಠ ಮಟ್ಟದಲ್ಲಿ ಇದೆ. ಇವುಗಳ ಬೆಲೆ ತಗ್ಗಿಸಲು ಕೇಂದ್ರ ಸರ್ಕಾರವು ತಾಳೆ ಎಣ್ಣೆ, ಸೋಯಾ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆ ಮೇಲಿನ ಆಮದು ತೆರಿಗೆಯನ್ನು ಕಡಿಮೆ ಮಾಡಿದೆ. ಆದರೆ, ಜಾಗತಿಕ ಮಾರುಕಟ್ಟೆಗಳಲ್ಲಿ ಇವುಗಳ ಬೆಲೆ ಏರಿಕೆ ಆದ ಕಾರಣ, ತೆರಿಗೆ ತಗ್ಗಿಸಿದ್ದರ ಪರಿಣಾಮವು ದೇಶಿ ಮಾರುಕಟ್ಟೆಯಲ್ಲಿ ಹೆಚ್ಚಿನ ಮಟ್ಟದಲ್ಲಿ ಕಾಣಲಿಲ್ಲ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	515
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಆಪಿ	46610-47019
ಬೆಟ್ಟೆ	39339-39779
ಕೆಂಪುಗೋಟು	32349-32769
ರಾಶಿ	46129-46559
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟ	
ಚಿಪ್ಪು	25609-41089
ಕೋಕ	21019-35089
ಫ್ಯಾಕ್ಟರಿ	13509-18929
ಹಳೆಚಾಲಿ	48089-49709
ಹೊಸಚಾಲಿ	38019-41889
ಕುಂದಾಪುರ	
ಹಳೆಚಾಲಿ	48000-53000
ಹೊಸಚಾಲಿ	38000-44000
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	28099-38699
ಚಾಲಿ	47299-50099
ಕೋಕ	28999-36199
ಹೊಸಚಾಲಿ	34099-40899
ಕೆಂಪುಗೋಟು	29099-29099
ರಾಶಿ	43609-48499
ತಟ್ಟಿಬೆಟ್ಟೆ	37699-37699
ಶಿರಸಿ	
ಬೆಟ್ಟೆ	37709-44318
ಬಿಳಿಗೋಟು	24089-44299
ಚಾಲಿ	40919-50641
ರಾಶಿ	41369-50899
ಯಲ್ಲಾಪುರ	
ಬಿಳಿಗೋಟು	31269-39669
ಚಾಲಿ	40061-50350
ಕೋಕ	22619-34499
ಕೆಂಪುಗೋಟು	30168-35642
ರಾಶಿ	46179-52779
ತಟ್ಟಿಬೆಟ್ಟೆ	38299-45950
ರಾಮನಗರ ರೇಷ್ಮೆ	
ಮಿಶ್ರತಳಿ	350-725
ದ್ವಿತಳಿ	438-881

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15400	15400	15450	234.75ಸೆಂಟ್ಸ್
ಎಸಿ	6900	6600	6450	
ಆರ್‌ಪಿ	6300	6200	---	ಲಂಡನ್
ಆರ್‌ಸಿ	3900	3750	---	2439 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

20-12-2021

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	8600-8700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1300 (1320)
ಒಂದು ವಾರದ ಡೆಲಿವರಿ	1295 (1315)
ಸೋಯಾ ಕಚ್ಚಾ	1137 (1150)
ಪಾಮ್ ವಾರದ ಡೆಲಿವರಿ	1144 (1156)
ಸೂರ್ಯಕಾಂತಿ ಎಣ್ಣೆ ಕಚ್ಚಾ	1170 (1170)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,300 (48,430)
ಬೆಳ್ಳಿ ಕೆ.ಜಿ	61,100 (61,650)

ಆವರಣದಲ್ಲಿ ಶನಿವಾರದ ಧಾರಣೆ

ವಿಶ್ವ ಆರ್ಥಿಕ ವೇದಿಕೆ ಸಭೆ ಮುಂದಕ್ಕೆ

ನವದೆಹಲಿ/ಜಿನಿವಾ (ಪಿಟಿಐ): ದಾವೋಸ್‌ನಲ್ಲಿ ನಡೆಯುವ ವಾರ್ಷಿಕ ಸಭೆಯನ್ನು ಓಮೈಕ್ರಾನ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಮುಂದೂಡಲು ತೀರ್ಮಾನಿಸಿರುವುದಾಗಿ ವಿಶ್ವ ಆರ್ಥಿಕ ವೇದಿಕೆ ಹೇಳಿದೆ. ಸಭೆಯು ಜನವರಿ 17ರಿಂದ 21ರವರೆಗೆ ನಡೆಯಬೇಕಿತ್ತು. ಇದು ಬೇಸಿಗೆಯ ಆರಂಭದಲ್ಲಿ ನಡೆಯುವ ಸಾಧ್ಯತೆ ಇದೆ.

‘ಸಾಂಕ್ರಾಮಿಕದ ಈಗಿನ ಪರಿಸ್ಥಿತಿಯು ಜಾಗತಿಕ ಮಟ್ಟದ, ಭೌತಿಕ ಸಭೆಯನ್ನು ಆಯೋಜಿಸುವುದನ್ನು ತೀರಾ ಕಷ್ಟಕರವಾಗಿಸಿದೆ’ ಎಂದು ವೇದಿಕೆಯ ಪ್ರಕಟಣೆ ತಿಳಿಸಿದೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ಪಾಲಿಸುತ್ತಿರುವ ಶಿಷ್ಟಾಚಾರಗಳು ತೀರಾ ಕಟ್ಟುನಿಟ್ಟಾಗಿ ಇದ್ದರೂ, ಓಮೈಕ್ರಾನ್ ಹರಡುವಿಕೆ ಹಾಗೂ ಪ್ರಯಾಣದ ಮೇಲೆ ಅದು ಬೀರಿರುವ ಪ್ರಭಾವದ ಕಾರಣದಿಂದಾಗಿ ಸಭೆಯನ್ನು ಮುಂದೂಡುವುದು ಅನಿವಾರ್ಯವಾಗಿದೆ ಎಂದು ಅದು ಹೇಳಿದೆ.

ಕಚ್ಚಾವಸ್ತುಗಳ ದರ ಏರಿಕೆ: ಸಣ್ಣ ಕೈಗಾರಿಕೆ ಬಂದ್ ಮಾಡಿ ಪ್ರತಿಭಟನೆ

ಕೇಂದ್ರದ ವಿರುದ್ಧ ಉದ್ಯಮಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಕ್ಕು ಹಾಗೂ ಇತರ ಕಚ್ಚಾವಸ್ತುಗಳ ದರ ಏರಿಕೆಯನ್ನು ಖಂಡಿಸಿ ವಿವಿಧ ಸಂಘಟನೆಗಳು ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿನ ಸಣ್ಣ ಕೈಗಾರಿಕೆಗಳನ್ನು ಬಂದ್ ಮಾಡಿ ಸೋಮವಾರ ಮೌನ ಪ್ರತಿಭಟನೆ ನಡೆಸಿದವು.

ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ), ಪೀಣ್ಯ ಕೈಗಾರಿಕಾ ಸಂಘ, ಬೆಂಗಳೂರು ಸಣ್ಣ ಕೈಗಾರಿಕೆಗಳ ಸಂಘ (ಬಾಸ್ಸಿಯಾ), ರಾಜಾಜಿನಗರ ಕೈಗಾರಿಕೆಗಳ ಸಂಘ, ಬೆಂಗಳೂರು ಉತ್ತರ ಸಣ್ಣ ಕೈಗಾರಿಕೆಗಳ ಸಂಘ, ಬೆಂಗಳೂರು ಕೇಂದ್ರ ಸಣ್ಣ ಕೈಗಾರಿಕೆಗಳ ಸಂಘ, ಬೊಮ್ಮನಹಳ್ಳಿ ಕೈಗಾರಿಕಾ ಸಂಘ ಸೇರಿದಂತೆ ಇತರ ಸಂಘಗಳ ಸದಸ್ಯರು ‘ಕಚ್ಚಾವಸ್ತುಗಳ ಮೇಲಿನ ರಫ್ತು ಸುಂಕ ಇಳಿಸಿ’, ‘ದೇಶದಾದ್ಯಂತ ಏಕ ರೀತಿಯ ಕಚ್ಚಾ ವಸ್ತು ದರ ನಿಗದಿಪಡಿಸಿ’ ಎಂಬ ಭಿತ್ತಿಪತ್ರಗಳನ್ನು ಪ್ರದರ್ಶಿಸುತ್ತಾ ಮೆರವಣಿಗೆಯಲ್ಲಿ ಸಾಗಿದರು.

‘ಉಕ್ಕು ಮತ್ತು ಇತರ ಕಚ್ಚಾ ವಸ್ತುಗಳ ಬೆಲೆಗಳನ್ನು ತಕ್ಷಣವೇ ಇಳಿಸಬೇಕು. ಇಂಧನ ದರವನ್ನೂ ಕಡಿಮೆ ಮಾಡಬೇಕು. ಜಿಎಸ್‌ಟಿ ಶೀಘ್ರ ಮರುಪಾವತಿ ವ್ಯವಸ್ಥೆ ಜಾರಿಗೊಳಿಸಬೇಕು. ತೆರಿಗೆ ದರ ಕಡಿತಗೊಳಿಸುವ ಜೊತೆಗೆ ಇಡೀ ಪ್ರಕ್ರಿಯೆಯನ್ನು ಸರಳೀಕರಿಸಬೇಕು’ ಎಂದು ಆಗ್ರಹಿಸಿದರು.

‘ಬ್ಯಾಂಕ್‌ಗಳಲ್ಲಿ ಸಾಲ ಪಡೆಯುವ ಪ್ರಕ್ರಿಯೆಯನ್ನೂ ಸರಳಗೊಳಿಸಬೇಕು. ಕೃಷಿಕರಿಗೆ ನೀಡುವ ಬಡ್ಡಿದರದಲ್ಲೇ ಸಣ್ಣ ಕೈಗಾರಿಕೆಯವರಿಗೂ ಸಾಲ ನೀಡಬೇಕು. ಇಎಸ್‌ಐ ಹಾಗೂ ಪಿಎಫ್ ಇಲಾಖೆಗಳನ್ನು ವಿಲೀನಗೊಳಿಸಬೇಕು. ರಫ್ತುದಾರರ ಕಂಟೈನರ್ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು’ ಎಂದೂ ಒತ್ತಾಯಿಸಿದರು.

ಕಾಸಿಯಾ ಮಾಜಿ ಅಧ್ಯಕ್ಷ ಆರ್. ರಾಜು, ‘ಇಂಧನ ದರ ದಿನೇ ದಿನೇ ಹೆಚ್ಚುತ್ತಿದೆ. ಪ್ಲಾಸ್ಟಿಕ್, ಕಬ್ಬಿಣ, ಅಲ್ಯುಮಿನಿಯಂ ಸೇರಿ ಎಲ್ಲಾ ಕಚ್ಚಾವಸ್ತುಗಳ ಬೆಲೆಯೂ ದ್ವಿಗುಣಗೊಂಡಿದೆ. ಇದರಿಂದ ಸಣ್ಣ ಕೈಗಾರಿಕೆಗಳನ್ನೇ ಅವಲಂಬಿಸಿದ್ದವರ ಬದುಕು ಬೀದಿಗೆ ಬಂದಿದೆ’ ಎಂದರು.

‘ದೇಶದಲ್ಲಿ ತಯಾರಾಗುವ ಉಕ್ಕನ್ನು ಸ್ಥಳೀಯ ಮಾರುಕಟ್ಟೆಗೆ ಒದಗಿಸಬೇಕು. ವಿದೇಶಗಳಿಗೆ ಯಥೇಚ್ಛವಾಗಿ ರಫ್ತು ಮಾಡುವುದನ್ನು ನಿಲ್ಲಿಸಬೇಕು. ಕೋವಿಡ್‌ನಿಂದ ಅನೇಕ ಸಣ್ಣ ಕೈಗಾರಿಕೆಗಳಿಗೆ ಬೀಗ ಬಿದ್ದಿದೆ. ಸರ್ಕಾರ ತನ್ನ ಧೋರಣೆ ಬದಲಿಸದಿದ್ದರೆ ಉಳಿದ ಕೈಗಾರಿಕೆಗಳೂ ಅಳಿವಿನ ಅಂಚಿಗೆ ನೂಕಲ್ಪಡುತ್ತವೆ. ಬರುವ ಆದಾಯ ಬ್ಯಾಂಕ್ ಸಾಲ ತೀರಿಸುವುದಕ್ಕೆ ಸರಿಹೋಗುತ್ತಿದೆ. ಕಾರ್ಮಿಕರ ವೇತನಕ್ಕಾಗಿ ಮತ್ತೆ ಸಾಲ ಮಾಡಬೇಕಾದ ಅನಿವಾರ್ಯವಾಗಿದೆ. ಹೀಗಾಗಿ ಕೈಗಾರಿಕೆಗಳ ಮಾಲೀಕರ ಬದುಕು ಶೋಚನೀಯವಾಗುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.



ವಿವಿಧ ಕೈಗಾರಿಕಾ ಸಂಘಗಳ ಸದಸ್ಯರು ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದಾಗಿ ಹೇಳುವ ಸರ್ಕಾರ, ಕಚ್ಚಾವಸ್ತುಗಳ ಬೆಲೆ ಏರಿಸುತ್ತಲೇ ಇದೆ. ಕಾರ್ಮಿಕರ ಬದುಕು ಬೀದಿಗೆ ಬೀಳುತ್ತಿದೆ

ಆರ್.ರಾಜು, ಕಾಸಿಯಾ ಮಾಜಿ ಅಧ್ಯಕ್ಷ

ಕೋವಿಡ್‌ನಿಂದ ತತ್ತರಿಸಿದ್ದ ಕೈಗಾರಿಕೆಗಳನ್ನು ಕಚ್ಚಾವಸ್ತುಗಳ ದರ ಏರಿಕೆಯು ಇನ್ನಷ್ಟು ಸಂಕಷ್ಟಕ್ಕೆ ದೂಡಿದೆ. ಸರ್ಕಾರ ಕೂಡಲೇ ತೆರಿಗೆ, ಇಂಧನ ದರ ಇಳಿಸಲಿ

ಜೈಕುಮಾರ್, ಬೆಂಗಳೂರು ಸಣ್ಣ ಕೈಗಾರಿಕೆಗಳ ಸಂಘದ (ಬಾಸ್ಸಿಯಾ) ಕಾರ್ಯದರ್ಶಿ

ಒಂದೇ ದಿನದಲ್ಲಿ ₹500 ಕೋಟಿ ನಷ್ಟ

‘ಸರ್ಕಾರವನ್ನು ಎಚ್ಚರಿಸುವ ಉದ್ದೇಶದಿಂದ ದಿನದ ಮಟ್ಟಿಗೆ ಕೈಗಾರಿಕೆಗಳನ್ನು ಬಂದ್ ಮಾಡಲಾಗಿತ್ತು. ಇದರಿಂದ ಸರ್ಕಾರಕ್ಕೆ ಸುಮಾರು ₹500 ಕೋಟಿ ನಷ್ಟವಾಗಿದೆ. ಜಿಎಸ್‌ಟಿ ಮೂಲಕವೇ ಪ್ರತಿವರ್ಷ ಸುಮಾರು ₹700 ಕೋಟಿ ಸರ್ಕಾರದ ಬೊಕ್ಕಸ ಸೇರುತ್ತದೆ. ಬೆಸ್ಕಾಂಗೆ ₹500 ಕೋಟಿ ಆದಾಯ ಸಿಗುತ್ತದೆ. ನಮ್ಮ ಬೇಡಿಕೆ ಈಡೇರದಿದ್ದರೆ ಹೋರಾಟದ ಸ್ವರೂಪ ಬದಲಾಗಲಿದೆ. ಹೋರಾಟ ತೀವ್ರಗೊಂಡರೆ ಸರ್ಕಾರಕ್ಕೇ ನಷ್ಟ’ ಎಂದು ಪೀಣ್ಯ ಕೈಗಾರಿಕೆ ಸಂಘದ ಅಧ್ಯಕ್ಷ ಬಿ.ಮುರಳಿಕೃಷ್ಣ ಹೇಳಿದರು.

‘ಪೀಣ್ಯದಲ್ಲಿ ಒಟ್ಟು 16 ಸಾವಿರ ಕೈಗಾರಿಕೆಗಳಿವೆ. ಇವುಗಳಲ್ಲಿ 10 ಲಕ್ಷ ಮಂದಿ ಕೆಲಸ ಮಾಡುತ್ತಿದ್ದಾರೆ. 5 ಲಕ್ಷ ಮಂದಿ ಮಹಿಳಾ ನೌಕರರೇ ಇದ್ದಾರೆ. ಎರಡು ವರ್ಷದಿಂದ ಕಚ್ಚಾವಸ್ತುಗಳ ಬೆಲೆ ಏರುತ್ತಲೇ ಇದೆ. ಇದರಿಂದ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ದೊಡ್ಡ ಪೆಟ್ಟು ಬೀಳುತ್ತಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

ರಿಟೇಲ್ ಮಾರಾಟ ಚೇತರಿಕೆ: ಆರ್‌ಎಐ

ನವದೆಹಲಿ (ಪಿಟಿಐ): ರಿಟೇಲ್ ಮಾರಾಟವು 2021ರ ನವೆಂಬರ್‌ನಲ್ಲಿ, ಹಿಂದಿನ ವರ್ಷದ ನವೆಂಬರ್‌ಗೆ ಹೋಲಿಸಿದರೆ ಶೇಕಡ 16ರಷ್ಟು ಬೆಳವಣಿಗೆ ಕಂಡಿದೆ. 2019ರ ನವೆಂಬರ್‌ನಲ್ಲಿ ಆಗಿದ್ದ ಮಾರಾಟಕ್ಕಿಂತ ಶೇ 9ರಷ್ಟು ಹೆಚ್ಚಾಗಿದೆ ಎಂದು ರಿಟೇಲ್ ಅಸೋಸಿಯೇಷನ್ ಆಫ್ ಇಂಡಿಯಾ (ಆರ್‌ಎಐ) ತಿಳಿಸಿದೆ.

ವಹಿವಾಟು ಸುಧಾರಿಸುತ್ತಿದ್ದು, ಈ ಸ್ಥಿತಿಯು ಇದೇ ರೀತಿ ಮುಂದುವರಿಯುವ ಭರವಸೆ ಇದೆ. ಹೀಗಿದ್ದರೂ ಓಮೈಕ್ರಾನ್ ಮತ್ತು ಕೋವಿಡ್‌ನ ಮೂರನೇ ಅಲೆಯ ಆತಂಕ ಇದೆ ಎಂದು ‘ಆರ್‌ಎಐ’ನ ಸಿಇಒ ಕುಮಾರ್ ರಾಜಗೋಪಾಲನ್ ಹೇಳಿದ್ದಾರೆ.

ರಿಲಯನ್ಸ್: ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ‘ಸಮಾಜದ ಒಳಿತಿಗಾಗಿ ತಂತ್ರಜ್ಞಾನ ಅಭಿವೃದ್ಧಿಪಡಿಸುವ’ 100 ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ರಿಲಯನ್ಸ್ ಫೌಂಡೇಶನ್ ವಿದ್ಯಾರ್ಥಿ ವೇತನ ನೀಡುತ್ತಿದ್ದು, ಅರ್ಜಿಗಳನ್ನು ಆಹ್ವಾನಿಸಿದೆ.

ಮೊದಲ ವರ್ಷದ ಪದವಿ ಓದುತ್ತಿರುವ 60 ವಿದ್ಯಾರ್ಥಿಗಳಿಗೆ ತಲಾ ₹ 4 ಲಕ್ಷ, ಮೊದಲ ವರ್ಷದ ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿರುವ 40 ವಿದ್ಯಾರ್ಥಿಗಳಿಗೆ ತಲಾ ₹ 6 ಲಕ್ಷ ವಿದ್ಯಾರ್ಥಿ ವೇತನ ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿ: ಸೇಡು ತೀರಿಸಿಕೊಳ್ಳುವ ಛಲದಲ್ಲಿ ಮನೀಷ್ ಬಳಗ

ಕರ್ನಾಟಕಕ್ಕೆ ತಮಿಳುನಾಡು ಸವಾಲು

ಜೈಪುರ (ಪಿಟಿಐ): ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯ ಫೈನಲ್‌ನಲ್ಲಿ ನಿರಾಶೆ ಅನುಭವಿಸಿದ ಕರ್ನಾಟಕ ತಂಡ ತಮಿಳುನಾಡು ವಿರುದ್ಧ ಮತ್ತೊಂದು ಪೈಪೋಟಿಗೆ ಸಜ್ಜಾಗಿದೆ. ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಉಭಯ ತಂಡಗಳು ಮುಖಾಮುಖಿಯಾಗಲಿವೆ.

ಎರಡೂ ತಂಡಗಳು ಎಂಟರ ಘಟ್ಟದ ಪಂದ್ಯದಲ್ಲಿ ಗೆದ್ದು ಸೆಮಿಫೈನಲ್ ಪ್ರವೇಶಿಸುವ ಭರವಸೆಯಲ್ಲಿವೆ. ನೇರವಾಗಿ ಕ್ವಾರ್ಟರ್ ಫೈನಲ್ ಪ್ರವೇಶಿಸಿರುವುದು ತಮಿಳುನಾಡು ತಂಡದ ನಿರೀಕ್ಷೆ ಮೂಡಿಸಿದ್ದರೆ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ರಾಜಸ್ಥಾನ ವಿರುದ್ಧ ಭರ್ಜರಿ ಜಯ ಗಳಿಸಿರುವುದು ಕರ್ನಾಟಕ ತಂಡದಲ್ಲಿ ಆಸೆ ಚಿಗುರಲು ಕಾರಣ.

ಭಾನುವಾರದ ಪಂದ್ಯದಲ್ಲಿ ಕರ್ನಾಟಕ 8 ವಿಕೆಟ್‌ಗಳಿಂದ ಆತಿಥೇಯ ತಂಡವನ್ನು ಮಣಿಸಿತ್ತು. ಸಾಂಪ್ರದಾಯಿಕ ಎದುರಾಳಿ ತಮಿಳುನಾಡು ವಿರುದ್ಧವೂ ಇದೇ ಲಯದಲ್ಲಿ ಆಡಲು ತಂಡ ಸಜ್ಜಾಗಿದೆ. ಬಲಿಷ್ಠ ಬ್ಯಾಟಿಂಗ್ ಬಳಗ ತಂಡದ ಭರವಸೆಯಾಗಿದ್ದು ತಮಿಳುನಾಡು ತಂಡದಲ್ಲಿ ಸಮರ್ಥ ಆಲ್‌ರೌಂಡರ್‌ಗಳು ಇದ್ದಾರೆ.

ರವಿಕುಮಾರ್ ಸಮರ್ಥ್, ದೇವದತ್ತ ಪಡಿಕ್ಕಲ್, ಕೆ.ವಿ.ಸಿದ್ಧಾರ್ಥ್, ನಾಯಕ ಮನೀಷ್ ಪಾಂಡೆ, ಸ್ಫೋಟಕ ಬ್ಯಾಟರ್ ಅಭಿನವ್ ಮನೋಹರ್ ಮತ್ತು ಆಲ್‌ರೌಂಡರ್ ಕೃಷ್ಣಪ್ಪ ಗೌತಮ್ ಯಾವುದೇ ರೀತಿಯ ಬೌಲಿಂಗ್ ದಾಳಿಯನ್ನು ಎದುರಿಸುವ ಸಾಮರ್ಥ್ಯ ಹೊಂದಿದ್ದಾರೆ. ಪ್ರಸಿದ್ಧ ಕೃಷ್ಣ ನೇತೃತ್ವದ ಬೌಲಿಂಗ್ ದಾಳಿಯೂ ಕರ್ನಾಟಕದ ಶಕ್ತಿಯಾಗಿದೆ. ಪ್ರವೀಣ್ ದುಬೆ, ಕೆ.ಸಿ. ಕಾರ್ಯಪ್ಪ, ವೈಶಾಖ್ ವಿಜಯ ಕುಮಾರ್, ಜೆ.ಸುಚಿತ್ ಮುಂತಾದವರು ಪ್ರಸಿದ್ಧ ಅವರಿಗೆ ಉತ್ತಮ ಸಹಕಾರ ನೀಡಬಲ್ಲರು.



ಮನೀಷ್ ಪಾಂಡೆ –ಪ್ರಜಾವಾಣಿ ಚಿತ್ರ

ತಿರುವನಂತಪುರದಲ್ಲಿ ನಡೆದ ಲೀಗ್ ಹಂತದ ಪಂದ್ಯದಲ್ಲಿ ಕರ್ನಾಟಕವನ್ನು ತಮಿಳುನಾಡು ಮಣಿಸಿತ್ತು. ನಂತರ ಕರ್ನಾಟಕ ತಂಡ ಪುಟಿದೆದ್ದಿದೆ. ತಮಿಳುನಾಡು ವಿರುದ್ಧ ಸೇಡು ತೀರಿಸುವ ಛಲವೂ ತಂಡಕ್ಕಿದೆ. ಎನ್.ಜಗದೀಶನ್, ಬಾಬಾ ಇಂದ್ರಜಿತ್, ದಿನೇಶ್ ಕಾರ್ತಿಕ್, ವಾಷಿಂಗ್ಟನ್ ಸುಂದರ್ ಮತ್ತು ನಾಯಕ ವಿಜಯಶಂಕರ್ ಅವರೊಂದಿಗೆ ಸ್ಫೋಟಕ ಬ್ಯಾಟರ್ ಶಾರೂಖ್ ಖಾನ್ ಅವರನ್ನು ನಿಯಂತ್ರಿಸುವ ಸವಾಲು ಕರ್ನಾಟಕದ ಮುಂದೆ ಇದೆ. ಕೊನೆಯ ಎಸೆತದಲ್ಲಿ ಸಿಕ್ಸರ್ ಸಿಡಿಸಿ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯಲ್ಲಿ ಶಾರೂಖ್ ಖಾನ್ ಕರ್ನಾಟಕದಿಂದ ಜಯ ಕಸಿದುಕೊಂಡಿದ್ದರು.

ಉತ್ತರಪ್ರದೇಶ–ಹಿಮಾಚಲಪ್ರದೇಶ ಪೈಪೋಟಿ: ಮಂಗಳವಾರ ನಡೆಯಲಿರುವ ಮತ್ತೊಂದು ಕ್ವಾರ್ಟರ್ ಫೈನಲ್‌ನಲ್ಲಿ ಉತ್ತರಪ್ರದೇಶ ಮತ್ತು ಹಿಮಾಚಲಪ್ರದೇಶ ತಂಡಗಳು ಮುಖಾಮುಖಿಯಾಗಲಿವೆ. ಹಿಮಾಚಲಪ್ರದೇಶ ನೇರ ಪ್ರವೇಶ ಪಡೆದಿದ್ದು ಉತ್ತರಪ್ರದೇಶ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಮಧ್ಯಪ್ರದೇಶವನ್ನು ಮಣಿಸಿ ಎಂಟರ ಘಟ್ಟ ಪ್ರವೇಶಿಸಿತ್ತು.

ಆಕಾಶ್‌ದೀಪ್ ನಾಥ್, ಮಾಧವ್ ಕೌಶಿಕ್, ಆರ್ಯನ್ ಜುಯಾಲ್, ಕರ್ಣ ಶರ್ಮಾ ಮತ್ತು ಸಮೀರ್ ರಿಜ್ವಿ ಮುಂತಾದವರು ಉತ್ತರಪ್ರದೇಶದ ಶಕ್ತಿಯಾಗಿದ್ದು ರಿಂಕು ಸಿಂಗ್ ಮೇಲೆಯೂ ನಿರೀಕ್ಷೆ ಇದೆ.

ಭುವನೇಶ್ವರ್ ಕುಮಾರ್, ಅಂಕಿತ್ ರಜಪೂತ್, ಯಶ್ ದಯಾಳ್, ಶಿವಂ ಮಾವಿ ಮತ್ತು ಶಿವಂ ಶರ್ಮಾ ಅವರ ಮೇಲೆ ಹಿಮಾಚಲಪ್ರದೇಶ ಅವಲಂಬಿತವಾಗಿದೆ. ಆಲ್‌ರೌಂಡರ್ ಋಷಿ ಧವನ್ ಬ್ಯಾಟಿಂಗ್‌ನಲ್ಲೂ ಬೌಲಿಂಗ್‌ನಲ್ಲೂ ಮಿಂಚಬಲ್ಲರು.

ಇಂದಿನ ಪಂದ್ಯಗಳು
ಕರ್ನಾಟಕ–ತಮಿಳುನಾಡು
ಸ್ಥಳ: ಕೆ.ಎಲ್.ಸೈನಿ ಕ್ರೀಡಾಂಗಣ
ಆರಂಭ: ಬೆಳಿಗ್ಗೆ 9.00
ಉತ್ತರಪ್ರದೇಶ–ಹಿಮಾಚಲಪ್ರದೇಶ
ಸ್ಥಳ: ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣ
ಆರಂಭ: ಬೆಳಿಗ್ಗೆ 9.00
(ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್)

ಕರ್ನಾಟಕ–ತಮಿಳುನಾಡು ಹಿಂದಿನ 5 ಪಂದ್ಯಗಳು	
2021 ಡಿ.9	ತಮಿಳುನಾಡಿಗೆ 8 ವಿಕೆಟ್‌ಗಳ ಜಯ
2019 ಅ.25	ಕರ್ನಾಟಕಕ್ಕೆ 60 ರನ್ ಜಯ (ವಿಜೆಡಿ ನಿಯಮ)
2014 ನ.10	ಕರ್ನಾಟಕಕ್ಕೆ 104 ರನ್‌ಗಳ ಗೆಲುವು
2014 ಮಾ.5	ತಮಿಳುನಾಡಿಗೆ 7 ವಿಕೆಟ್‌ಗಳ ಜಯ
2013 ಫೆ.17	ಕರ್ನಾಟಕಕ್ಕೆ 7 ವಿಕೆಟ್‌ಗಳ ಗೆಲುವು

ಫುಟ್‌ಬಾಲ್: ಬಿಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಯಿದ್ರೋಮ್ ತೋಯ್ ಸಿಂಗ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 4–0ಯಿಂದ ಬಿಯುಎಫ್‌ಸಿ ತಂಡವನ್ನು ಸೋಲಿಸಿತು. ಹುಯಿದ್ರೋಮ್ 12 ಮತ್ತು 33ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ವಿಜೇತ ತಂಡದ ಮೋನಿರುಲ್ ಮೊಲ್ಲಾ (45 + 3ನೇ ನಿ. ಮತ್ತು ಒಮೆಗಾ ವನ್ಲಾಲ್ರುತುವಾಂಗಾ (67ನೇ ನಿ.) ತಲಾ ಒಂದು ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ 5–0ಯಿಂದ ಎಡಿಇ ಎಫ್‌ಸಿ ಎದುರು ಗೆದ್ದಿತು. ಎಂಇಜಿ ಪರ ರಾಹುಲ್ (31 ಮತ್ತು 88ನೇ ನಿ.), ಆಸಿಫ್ ಖಾನ್ (8ನೇ ನಿ.), ಲೆಥೊಲೆನ್ ಖೊಂಗಸಾಯಿ (45 + 1ನೇ ನಿ.) ಮತ್ತು ಆಕಾಶ್ ದೇವ್ (89ನೇ ನಿ.) ಕಾಲ್ಚಳಕ ತೋರಿದರು. ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್, ಜವಾಹರ್ ಯೂನಿಯನ್ ಜೊತೆ ಗೋಲುರಹಿತ ಡ್ರಾ ಸಾಧಿಸಿತು.



ಎಡಿಇ ಎಫ್‌ಸಿ ಎದುರಿನ ಪಂದ್ಯದಲ್ಲಿ ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡದ ರಾಹುಲ್ ಅವರು ಆಟಗಾರನೊಬ್ಬನಿಗೆ ಢಿಕ್ಕಿ ಹೊಡೆದು ತೀವ್ರ ಗಾಯಗೊಂಡರು. ಅವರನ್ನು ಸ್ಟ್ರೇಚರ್‌ನಲ್ಲಿ ಕರೆದೊಯ್ಯಲು ಸಹ ಆಟಗಾರ ಎಚ್. ಲಾಲ್‌ಮಿಂಗ್ಚುವಾಂಗ (ಬಲದಿಂದ ಎರಡನೆಯವರು) ನೆರವಾದರು– ಪ್ರಜಾವಾಣಿ ಚಿತ್ರ

ಭಾರತ–ದಕ್ಷಿಣ ಆಫ್ರಿಕಾ ಟೆಸ್ಟ್: ಪ್ರೇಕ್ಷಕರಿಗಿಲ್ಲ ಅನುಮತಿ

ಜೊಹಾನ್ಸ್‌ಬರ್ಗ್: ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಇದೇ 26ರಿಂದ ನಡೆಯಲಿರುವ ಮೊದಲ ಟೆಸ್ಟ್ ಪಂದ್ಯಕ್ಕೆ ಪ್ರೇಕ್ಷಕರಿಗೆ ಅವಕಾಶ ನೀಡದೇ ಇರಲು ಕ್ರಿಕೆಟ್ ದಕ್ಷಿಣ ಆಫ್ರಿಕಾ (ಸಿಎಸ್‌ಎ) ನಿರ್ಧರಿಸಿದೆ. ದೇಶದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ಈ ತೀರ್ಮಾನಕ್ಕೆ ಬರಲಾಗಿದ್ದು ಟಿಕೆಟ್ ಮಾರಾಟವನ್ನು ತಡೆಯಲಾಗಿದೆ.

ದಕ್ಷಿಣ ಆಫ್ರಿಕಾದಲ್ಲಿ ಕೋವಿಡ್–19ರ ನಾಲ್ಕನೇ ಅಲೆ ಆತಂಕ ಸೃಷ್ಟಿಸಿದೆ. ಕಳೆದ ವಾರ ದಾಖಲೆ ಪ್ರಮಾಣದ ಪ್ರಕರಣಗಳು ಪತ್ತೆಯಾಗಿದ್ದವು. ಹೀಗಾಗಿ ವಿಶೇಷ ಆಹ್ವಾನಿತರಿಗೆ ಮಾತ್ರ ಪಂದ್ಯ ವೀಕ್ಷಣೆಗೆ ಅವಕಾಶ ನೀಡಲಾಗುವುದು ಎಂದು ಸಿಎಸ್‌ಎ ವಿವರಿಸಿದೆ. ಪ್ರಮುಖ ದೇಶಿ ಟೂರ್ನಿಯಾದ ನಾಲ್ಕು ದಿನಗಳ ಫ್ರಾಂಚೈಸ್ ಸರಣಿಯ ಕೊನೆಯ ಹಂತದ ಪಂದ್ಯಗಳನ್ನು ಕೋವಿಡ್ ಕಾರಣದಿಂದ ರದ್ದುಗೊಳಿಸಲಾಗಿದೆ.

ಬ್ಯಾಸ್ಕೆಟ್‌ಬಾಲ್: ಎಂಇಜಿ, ಬಾಶ್ ತಂಡಗಳಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಇಜಿ ಮತ್ತು ಬಾಶ್ ತಂಡಗಳು ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯಗಳಲ್ಲಿ ಭರ್ಜರಿ ಜಯ ಗಳಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಹಣಾಹಣಿಯಲ್ಲಿ ಬೋನಿ ರಾಯ್ ಗಳಿಸಿದ 21 ಪಾಯಿಂಟ್ಸ್ ನೆರವಿನಿಂದ ಎಂಇಜಿ 50–24ರಿಂದ ಸಿಜೆಸಿ ತಂಡವನ್ನು ಪರಾಭವಗೊಳಿಸಿತು. ಮತ್ತೊಂದು ಪಂದ್ಯದಲ್ಲಿ ಬಾಶ್ 61–40ರಿಂದ ರಾಜ್‌ಮಹಲ್ ಬಿ.ಸಿ. ತಂಡಕ್ಕೆ ಸೋಲುಣಿಸಿತು. ವಿಜೇತ ತಂಡದ ಶ್ರೇಯಸ್ 34 ಪಾಯಿಂಟ್ಸ್ ದಾಖಲಿಸಿದರು.

ಇನ್ನುಳಿದ ಪಂದ್ಯಗಳಲ್ಲಿ ವಿಮಾನಪುರ ಎಸ್‌ಸಿ 60–52ರಿಂದ ಬೆಂಗಳೂರು ಸ್ಪೋರ್ಟಿಂಗ್ ಎದುರು, ಬಿ.ಸಿ ಬಿ.ಸಿ 53–52ರಿಂದ ಕೋರಮಂಗಲ ಎಸ್‌ಸಿ ವಿರುದ್ಧ, ಎಸ್. ಬ್ಲ್ಯೂಸ್ 68–34ರಿಂದ ಹಲಸೂರು ಎಸ್‌ಸಿ ಎದುರು, ಡಿವೈಇಎಸ್ ಬೆಂಗಳೂರು 74– 67ರಿಂದ ಸಿಎಂಪಿ ಎದುರು, ವೈಎಂಎಂಎ 83– 42ರಿಂದ ಅಪ್ಪಯ್ಯ ಬಿ.ಸಿ ವಿರುದ್ಧ ಜಯ ಸಾಧಿಸಿದವು.

ಬೀಗಲ್ಸ್ ಬಿ.ಸಿ 68–47ರಿಂದ ಡಿಆರ್‌ಡಿಒ ವಿರುದ್ಧ, ರಾಜ್‌ಕುಮಾರ್ ಬಿ.ಸಿ 63–62ರಿಂದ ಶಂಕರನಗರ ಬಿ.ಸಿ ಎದುರು, ರೋವರ್ಸ್ ಧಾರವಾಡ 49–47ರಿಂದ ಸ್ಟಾರ್ ಚಾಲೆಂಜರ್ಸ್ ಮೈಸೂರು ವಿರುದ್ಧ, ಜಿಎಸ್‌ಟಿ ಆ್ಯಂಡ್ ಕಸ್ಟಮ್ಸ್ 72–52ರಿಂದ ಎಂ.ಎನ್.ಕೆ. ರಾವ್ ಪಾರ್ಕ್ ತಂಡದ ವಿರುದ್ಧ ಗೆಲುವು ಸಾಧಿಸಿದವು.


ರಫೆಲ್ ನಡಾಲ್‌ಗೆ ಕೋವಿಡ್

ಮ್ಯಾಡ್ರಿಡ್ (ಎಪಿ): ಸ್ಪೇನ್ ಟೆನಿಸ್ ಆಟಗಾರ ರಫೆಲ್ ನಡಾಲ್ ಅವರಿಗೆ ಕೋವಿಡ್ ಖಚಿತಪಟ್ಟಿದೆ.

ಅಬುಧಾಬಿಯಲ್ಲಿ ನಡೆದ ಪ್ರದರ್ಶನ ಪಂದ್ಯದಲ್ಲಿ ಭಾಗವಹಿಸಿದ್ದ ತನಗೆ ಕೊರೊನಾ ಸೋಂಕು ತಗುಲಿದೆ ಎಂದು ನಡಾಲ್ ಸೋಮವಾರ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

ನಡಾಲ್ ಅವರು 'ಕೆಲವು ಅಹಿತಕರ ಕ್ಷಣಗಳನ್ನು ಎದುರಿಸುತ್ತಿದ್ದೇನೆ. ಶೀಘ್ರ ಚೇತರಿಸಿಕೊಳ್ಳುವ ವಿಶ್ವಾಸವಿದೆ' ಎಂದು 20 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ವಿಜೇತ ನಡಾಲ್ ಹೇಳಿದ್ದಾರೆ.

ಸದ್ಯ ನಡಾಲ್ ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದು, ಅವರೊಂದಿಗೆ ಸಂಪರ್ಕದಲ್ಲಿದ್ದ ಪ್ರತಿಯೊಬ್ಬರಿಗೂ ಈ ಕುರಿತು ಮಾಹಿತಿ ನೀಡಲಾಗಿದೆ.



ರಫೆಲ್ ನಡಾಲ್